ಶುಕ್ರವಾರ, ಫೆಬ್ರುವರಿ 3, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 34 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
'ನಟನ'ದ ಮನೆಮಗಳು ದಿಶಾ ರಮೇಶ್ ಈಗ ಬೆಳ್ಳಿತೆರೆಯ ಭರವಸೆ

ಆಳ-ಅಗಲ ಮಾಧ್ಯಮ ಸ್ವಾತಂತ್ರ್ಯ ಮೇಲಿನ ಕರಿ ಚುಕ್ಕೆಗಳು
ನಿಯಮ ಉಲ್ಲಂಘನೆ ದಂಡ: ಶೇ 50ರಷ್ಟು ರಿಯಾಯಿತಿ 7
'ದ್ವೇಷ ಭಾಷಣ: ಆದೇಶಕ್ಕೇ ಕಿಮ್ಮತ್ತಿಲ್ಲ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,932 ▲	17,610 ▼	₹60,370 (ಬೆಂಗಳೂರು) ▲	₹73,100 (ಬೆಂಗಳೂರು) ▲	82.20 ▼

ಅದಾನಿ ಸಮೂಹಕ್ಕೆ ವಿವಿಧ ಬ್ಯಾಂಕ್‌ಗಳಿಂದ ಸಾಲ • ಮಾರುಕಟ್ಟೆ ಮೌಲ್ಯ ಕುಸಿತ ಮುಂದುವರಿಕೆ

ಸಾಲದ ವಿವರ ಕೇಳಿದ ಆರ್‌ಬಿಐ

ನವದೆಹಲಿ/ಮುಂಬೈ (ರಾಯಿಟರ್ಸ್/ಪಿಟಿಐ): ಅದಾನಿ ಸಮೂಹಕ್ಕೆ ನೀಡಿರುವ ಸಾಲದ ವಿವರವನ್ನು ಕೊಡುವಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ವಿವಿಧ ಬ್ಯಾಂಕ್‌ಗಳಿಗೆ ಸೂಚಿಸಿದೆ.

ಅದಾನಿ ಸಮೂಹವು ತನ್ನ ಪ್ರಮುಖ ಕಂಪನಿಯಾದ ಅದಾನಿ ಎಂಟರ್‌ಪ್ರೈಸಸ್‌ನ ಷೇರು ಮಾರಾಟ ಪ್ರಕ್ರಿಯೆಯನ್ನು (ಎಫ್‌ಪಿಒ) ಬುಧವಾರ ರದ್ದು ಮಾಡಿದೆ. ಇದಾದ ನಂತರದಲ್ಲಿ, ಅದಾನಿ ಸಮೂಹದ ಹಲವು ಕಂಪನಿಗಳ ಷೇರು ಮೌಲ್ಯ ಮತ್ತಷ್ಟು ಕುಸಿದಿದೆ.

ಸಾಲಕ್ಕೆ ಪ್ರತಿಯಾಗಿ ಪಡೆದಿರುವ ಅಡಮಾನದ ವಿವರ ಹಾಗೂ ಪರೋಕ್ಷವಾಗಿ ನೀಡಿರುವ ಸಾಲದ ಅಥವಾ ಮಾಡಿರುವ ಹೂಡಿಕೆ ವಿವರವನ್ನು ಕೂಡ ನೀಡುವಂತೆ ಆರ್‌ಬಿಐ, ಬ್ಯಾಂಕ್‌ಗಳಿಗೆ ಸೂಚಿಸಿದೆ ಎಂದು ಮೂಲಗಳು ವಿವರಿಸಿವೆ. ಈ ಕುರಿತು ಆರ್‌ಬಿಐ ಕಡೆಯಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಸಿಕ್ಕಿಲ್ಲ.

ಭಾರತದ ಬ್ಯಾಂಕಿಂಗ್ ವಲಯವು ಅದಾನಿ ಸಮೂಹಕ್ಕೆ ನೇರವಾಗಿ ನೀಡಿರುವ ಸಾಲದ ಪ್ರಮಾಣವು ಶೇಕಡ 0.6ರಷ್ಟು ಮಾತ್ರ ಎಂದು ಫ್ರಾನ್ಸ್ ಮೂಲದ ಹಣಕಾಸು ಸೇವಾ ಕಂಪನಿ ಸೊಸೈಟಿ ಜನರಲ್ ವರದಿ ಹೇಳಿದೆ.

ಭಾರತದ ಬ್ಯಾಂಕ್‌ಗಳು ಅದಾನಿ ಸಮೂಹದ ಕಂಪನಿಗಳಿಗೆ ನೀಡಿರುವ ಸಾಲದ ವಿಚಾರವಾಗಿ ಬಂಡವಾಳ ಮಾರುಕಟ್ಟೆಗಳಲ್ಲಿ ಅತಿಯಾದ ಪ್ರತಿಕ್ರಿಯೆ ಕಂಡುಬರುತ್ತಿದೆ ಎಂದೂ ಅದು ಹೇಳಿದೆ.

ಬ್ಯಾಂಕ್‌ಗಳು ಕಾರ್ಪೊರೇಟ್ ವಲಯಕ್ಕೆ ನೀಡಿರುವ ದೊಡ್ಡ ಮೊತ್ತದ ಸಾಲಗಳ ಕುರಿತ ವಿವರವು ಆರ್‌ಬಿಐಗೆ ಕಾಲಕಾಲಕ್ಕೆ ಸಿಗುತ್ತಿರುತ್ತದೆ ಎಂದು ಮೂಲಗಳು ಹೇಳಿವೆ. ಹಲವು ಸಂದರ್ಭಗಳಲ್ಲಿ ಷೇರುಗಳನ್ನು, ಸಾಲಪತ್ರಗಳನ್ನು ಅಡಮಾನವಾಗಿ ಇರಿಸಿಕೊಂಡು ಸಾಲ ನೀಡಲಾಗಿರುತ್ತದೆ. ಆದರೆ, ಷೇರುಗಳ ಮೌಲ್ಯದಲ್ಲಿ ಭಾರಿ ಪ್ರಮಾಣದ ಇಳಿಕೆ ಆದಾಗ, ಅಡಮಾನದ ಮೌಲ್ಯವೂ ಕುಸಿದಿರುತ್ತದೆ.

ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಅದಾನಿ ಸಮೂಹದ ಕುರಿತು ಆರೋಪಗಳನ್ನು ಹೊಂದಿರುವ ವರದಿ ಪ್ರಕಟಿಸಿದ ನಂತರದಲ್ಲಿ ಬ್ಯಾಂಕಿಂಗ್ ವಲಯದ ಪ್ರಮುಖ ಕಂಪನಿಗಳ ಷೇರುಮೌಲ್ಯ ಕುಸಿದಿದೆ. ನಿಫ್ಟಿ ಬ್ಯಾಂಕ್ ಸೂಚ್ಯಂಕವು ಶೇ 5.4ರಷ್ಟು ಇಳಿಕೆ ಕಂಡಿದೆ.

ಆದಾಯ ತಂದುಕೊಡುವ ಆಸ್ತಿಗಳನ್ನು ಭದ್ರತೆಯಾಗಿ ಇರಿಸಿಕೊಂಡೇ ಅದಾನಿ ಸಮೂಹಕ್ಕೆ ಸಾಲ ನೀಡಲಾಗಿದೆ ಎಂದು ಎಸ್‌ಬಿಐ ಸ್ಪಷ್ಟಪಡಿಸಿದೆ.

ಸಮೂಹಕ್ಕೆ ತಾನು ನೀಡಿರುವ ಸಾಲದ ಮೊತ್ತವು ₹ 7,000 ಕೋಟಿ ಇದೆ ಹಾಗೂ ಈ ಮೊತ್ತಕ್ಕೆ ಭದ್ರತೆ ಇದೆ ಎಂದು ಬ್ಯಾಂಕ್ ಆಫ್ ಬರೋಡ ಹೇಳಿದೆ.

ಸ್ವಿಜರ್ಲೆಂಡ್‌ನ ಕ್ರೆಡಿಟ್ ಸ್ವೀಸ್ ಹಣಕಾಸು ಸಂಸ್ಥೆಯು ತಾನು ಕೊಡುವ ಸಾಲಗಳಿಗೆ ಅದಾನಿ ಸಮೂಹದ ಕಂಪನಿಗಳ ಸಾಲಪತ್ರಗಳನ್ನು ಅಡಮಾನವಾಗಿ ಸ್ವೀಕರಿಸುವುದಿಲ್ಲ ಎಂದು ಬುಧವಾರ ಹೇಳಿದೆ.

ಅದಾನಿ 'ವಂಚನೆ': ಜೆಪಿಸಿ ಇಲ್ಲವೇ 'ಸುಪ್ರೀಂ' ತನಿಖೆಗೆ ಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಷೇರುಗಳ ಮೌಲ್ಯವನ್ನು ಕೃತಕವಾಗಿ ಏರಿಕೆ–ಇಳಿಕೆ ಮಾಡಿರುವ ಹಾಗೂ ಲೆಕ್ಕಪತ್ರಗಳ ವಂಚನೆಯಲ್ಲಿ ತೊಡಗಿದ್ದ ಆರೋಪ ಎದುರಿಸುತ್ತಿರುವ ಅದಾನಿ ಸಮೂಹದಲ್ಲಿ ಎಲ್‌ಐಸಿ ಹಾಗೂ ಎಸ್‌ಬಿಐ ಹೂಡಿಕೆ ಮಾಡಿರುವ ವಿಷಯ ಸಂಸತ್‌ನ ಎರಡೂ ಸದನಗಳಲ್ಲಿ ಗುರುವಾರ ಪ್ರತಿಧ್ವನಿಸಿತು.

ಅದಾನಿ ಸಮೂಹದ ವಿರುದ್ಧದ ಆರೋಪಗಳ ಕುರಿತು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಇಲ್ಲವೇ ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸುವಂತೆ ಪ್ರತಿಪಕ್ಷಗಳ ಸದಸ್ಯರು ಒತ್ತಾಯಿಸಿದರು.

ಎಲ್ಲ ವಿರೋಧ ಪಕ್ಷಗಳು ಒಟ್ಟಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡವು. ಅಲ್ಲದೆ ಎರಡೂ ಸದನಗಳಲ್ಲಿ, ಹಿಂಡನ್‌ಬರ್ಗ್ ವರದಿಯನ್ನು ಪ್ರಸ್ತಾಪಿಸಿ, ಗದ್ದಲ ಎಬ್ಬಿಸಿದವು.

ವಿರೋಧ ಪಕ್ಷಗಳ ಈ ಗದ್ದಲದಿಂದಾಗಿ, ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಚರ್ಚೆ ನಡೆಯಲಿಲ್ಲ. ಹೀಗಾಗಿ, ಉಭಯ ಸದನಗಳನ್ನು ಶುಕ್ರವಾರಕ್ಕೆ (ಫೆ.3) ಮುಂದೂಡಲಾಯಿತು.



ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ಪಕ್ಷಗಳ ಸಂಸದರು ಮಾಧ್ಯಮದವರೊಂದಿಗೆ ಮಾತನಾಡಿದರು –ಪಿಟಿಐ ಚಿತ್ರ

ಲೋಕಸಭೆಯಲ್ಲಿ 9 ನಿಮಿಷಗಳಷ್ಟು ಕಲಾಪ ನಡೆದರೆ, ಕೇವಲ 7 ನಿಮಿಷಗಳ ಕಲಾಪಕ್ಕೆ ರಾಜ್ಯಸಭೆ ಸಾಕ್ಷಿಯಾಯಿತು.

11ನೇ ಪುಟ ನೋಡಿ

ಏಕಕಾಲಕ್ಕೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆಗೆ ನಿರ್ಬಂಧ ಅರ್ಜಿ ವಜಾ

ನವದೆಹಲಿ (ಪಿಟಿಐ): ಅಭ್ಯರ್ಥಿಯು ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಚುನಾವಣೆಗೆ ಸ್ಪರ್ಧಿಸುವುದನ್ನು ನಿರ್ಬಂಧಿಸಲು ಕೋರಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ಸುಪ್ರೀಂ ಕೋರ್ಟ್, ಇದು ಸಂಸತ್ತಿಗೆ ಸಂಬಂಧಿಸಿದ ವಿಷಯವಾಗಿದೆ ಎಂದು ಗುರುವಾರ ಹೇಳಿದೆ.



ಹಲವು ಕಾರಣಗಳಿಗೆ ಅಭ್ಯರ್ಥಿಗಳು ವಿವಿಧ ಕ್ಷೇತ್ರಗಳಿಂದ ಚುನಾವಣೆಗೆ ಸ್ಪರ್ಧಿಸಬಹುದು. ಅಭ್ಯರ್ಥಿಯೊಬ್ಬರು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಸ್ಪರ್ಧಿಸಲು ಅವಕಾಶ ನೀಡುವ ಬಗ್ಗೆ ನಿರ್ಧರಿಸುವುದು ಸಂಸತ್‌ಗೆ ಬಿಟ್ಟ ವಿಚಾರ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಅಭಿಪ್ರಾಯಪಟ್ಟಿದೆ.

11ನೇ ಪುಟ ನೋಡಿ

ವರ್ಷದಲ್ಲಿ 10 ಗ್ರಾಂಗೆ ₹ 10,830ರಷ್ಟು ಏರಿಕೆ

₹ 60 ಸಾವಿರ ದಾಟಿದ ಚಿನ್ನ

• ವಿಶ್ವನಾಥ ಎಸ್.

ಬೆಂಗಳೂರು: 2023ನೇ ಇಸವಿಯ ಆರಂಭದಲ್ಲಿಯೇ ಚಿನ್ನದ ಧಾರಣೆಯು ಬೆಂಗಳೂರಿನಲ್ಲಿ ₹ 60 ಸಾವಿರ ದಾಟಿದೆ. ಗುರುವಾರದ ವಹಿವಾಟಿನಲ್ಲಿ 10 ಗ್ರಾಂ ಚಿನ್ನವು ₹ 60,370ರಂತೆ ಮಾರಾಟವಾಗಿದೆ.

ಜಾಗತಿಕ ಬಿಕ್ಕಟ್ಟಿನಿಂದಾಗಿ 2023ರಲ್ಲಿ ಹೂಡಿಕೆದಾರರು ಹಣವನ್ನು ಹೆಚ್ಚು ಸುರಕ್ಷಿತವಾದ ಕಡೆಗಳಲ್ಲಿ ತೊಡಗಿಸಲು ಮುಂದಾಗಲಿದ್ದಾರೆ. ಇದರಿಂದಾಗಿ ಚಿನ್ನದ ಧಾರಣೆಯು ಈ ವರ್ಷದಲ್ಲಿ 10 ಗ್ರಾಂಗೆ ₹ 60 ಸಾವಿರವನ್ನು ತಲುಪುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು 2022ರ ಕೊನೆಯಲ್ಲಿ ಅಂದಾಜು ಮಾಡಿದ್ದರು.

ಈ ವರ್ಷದ ಆರಂಭದಿಂದಲೇ ಚಿನ್ನದ ದರ ಏರಿಕೆ ಹಾದಿಯಲ್ಲಿದೆ.



(ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ಬೆಲೆ)

ಜನವರಿ 2ರಂದು 10 ಗ್ರಾಂಗೆ ₹ 56,750 ಇದ್ದ ಚಿನ್ನದ ದರವು ಫೆಬ್ರುವರಿ 2ರ ವೇಳೆಗೆ ₹ 60,370ಕ್ಕೆ ಏರಿಕೆ ಆಗಿದೆ. ಅಂದರೆ 10 ಗ್ರಾಂಗೆ ₹ 3,620ರಷ್ಟು ಏರಿಕೆ ಆಗಿದೆ.

ಒಂದು ವರ್ಷದ ಅವಧಿಯನ್ನು ಗಮನಿಸುವುದಾದರೆ, ಬೆಂಗಳೂರಿನಲ್ಲಿ ಕಳೆದ ವರ್ಷದ ಫೆಬ್ರುವರಿ 2ರಂದು 10 ಗ್ರಾಂ ಚಿನ್ನದ ದರ ₹ 49,540ರಷ್ಟು ಇತ್ತು. ಅಂದರೆ, ಒಂದು ವರ್ಷದಲ್ಲಿ ₹ 10,830ರಷ್ಟು ಏರಿಕೆ ಆಗಿದೆ.

'ಜಾಗತಿಕ ಸಂದಿಗ್ಧ ಪರಿಸ್ಥಿತಿಯ ಕಾರಣದಿಂದಾಗಿ ವಿವಿಧ ಕೇಂದ್ರೀಯ ಬ್ಯಾಂಕ್‌ಗಳು ಹೆಚ್ಚಿನ ಪ್ರಮಾಣದಲ್ಲಿ ಚಿನ್ನ ಖರೀದಿಸುತ್ತಿವೆ. ಇದರ ಜೊತೆಗೆ ಭಾರತದಲ್ಲಿ ರೂಪಾಯಿ ಮೌಲ್ಯ ಇಳಿಕೆ ಕಾಣುತ್ತಿರುವುದರಿಂದ, ಆಮದು ವೆಚ್ಚ ಹೆಚ್ಚಾಗಿ ಚಿನ್ನದ ದರ ಹೆಚ್ಚಾಗುತ್ತಿದೆ' ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಮಾಜಿ ಅಧ್ಯಕ್ಷ ವೆಂಕಟೇಶ ಬಾಬು 'ಪ್ರಜಾವಾಣಿ'ಗೆ ತಿಳಿಸಿದರು.

10ನೇ ಪುಟ ನೋಡಿ

ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆ 23ರಿಂದ

ಬೆಂಗಳೂರು: ರಾಜ್ಯದ ಎಲ್ಲ ಪ್ರೌಢಶಾಲೆಗಳಲ್ಲೂ ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆಗಳನ್ನು ಫೆ.23ರಿಂದ ಮಾರ್ಚ್ 1ರವರೆಗೆ ನಡೆಸುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವೇಳಾಪಟ್ಟಿ ಬಿಡುಗಡೆ ಮಾಡಿದೆ. 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ಇಪ್ಪತ್ತೆಂಟು ತಿಂಗಳ ಸೆರೆವಾಸದಿಂದ ಮುಕ್ತಿ

ಪತ್ರಕರ್ತ ಸಿದ್ದೀಕ್ ಕಪ್ಪನ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಲಖನೌ: ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಸಂಪರ್ಕವಿರುವ ಆರೋಪದಲ್ಲಿ ಎರಡು ವರ್ಷಗಳಿಗೂ ಹೆಚ್ಚಿನ ಅವಧಿ (28 ತಿಂಗಳು) ಜಿಲ್ಲಾ ಕಾರಾಗೃಹದಲ್ಲಿ ಬಂಧನದಲ್ಲಿರಿಸಿದ್ದ ಕೇರಳದ ಪತ್ರಕರ್ತ ಸಿದ್ದೀಕ್ ಕಪ್ಪನ್ ಅವರನ್ನು ಗುರುವಾರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ವಿಜಯದ ಸಂಕೇತ ತೋರಿಸುತ್ತಾ ಜೈಲಿನಿಂದ ಹೊರ ಬಂದ ಸಿದ್ದೀಕ್ ಕಪ್ಪನ್, ಜೈಲಿನ ಬಳಿ ತಮಗಾಗಿ ಬೆಳಿಗ್ಗೆಯಿಂದ ಕಾಯುತ್ತಿದ್ದ ಪತ್ನಿ, ಮಕ್ಕಳು ಹಾಗೂ ಬಂಧುಮಿತ್ರರೆಡೆಗೆ ನಡೆದರು.



ಸಿದ್ದೀಕ್ ಕಪ್ಪನ್

ಉತ್ತರ ಪ್ರದೇಶದ ಹಾತ್ರಾಸ್ ಜಿಲ್ಲೆಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೀಡಾಗಿ ನಂತರ ಮೃತಪಟ್ಟ ಪರಿಶಿಷ್ಟ ಜಾತಿ ಯುವತಿಯ ಕುಟುಂಬದ ಸದಸ್ಯರನ್ನು ಭೇಟಿಯಾಗಲು 2020ರ ಅಕ್ಟೋಬರ್‌ನಲ್ಲಿ ಹೋಗುತ್ತಿದ್ದ ಸಿದ್ದೀಕ್ ಮತ್ತು ಇತರ ಮೂವರನ್ನು ಪೊಲೀಸರು ಮಥುರಾದಲ್ಲಿ ಬಂಧಿಸಿದ್ದರು.

ಯುವತಿಯ ಸಾವಿನ ಬಗ್ಗೆ ಹಿಂಸಾಚಾರ ಪ್ರಚೋದಿಸಲು ಯತ್ನಿಸಿದ ಆರೋಪವನ್ನು ಸಿದ್ದೀಕ್ ಮೇಲೆ ಹೊರಿಸಲಾಗಿತ್ತು.

11ನೇ ಪುಟ ನೋಡಿ

ಪ್ರಸ್ತಾವ ಸಲ್ಲಿಸಿದ ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ

'ಡಯಟ್': ಶೇ 70ರಷ್ಟು ಹುದ್ದೆ ಕಡಿತ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ಗಳಲ್ಲಿನ ಶೇ 70ರಷ್ಟು ಹುದ್ದೆಗಳನ್ನು ಕಡಿತಗೊಳಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮುಂದಾಗಿದೆ.

'ಡಯಟ್‌ಗಳಲ್ಲಿನ ಅನಗತ್ಯ ಸಿಬ್ಬಂದಿ ಹೊರೆ ತಗ್ಗಿಸಬೇಕಿದ್ದು, ಪ್ರತಿ ಡಯಟ್‌ನಲ್ಲೂ ಒಬ್ಬರು ಪ್ರಾಂಶುಪಾಲ, ತಲಾ ನಾಲ್ವರು ಹಿರಿಯ ಉಪನ್ಯಾಸಕರು ಹಾಗೂ ಉಪನ್ಯಾಸಕರಿಗೆ ಸೀಮಿತಗೊಳಿಸಬೇಕಿದೆ. ಅದಕ್ಕಾಗಿ ಶೇ 70ರಷ್ಟು ಹುದ್ದೆ ರದ್ದು ಮಾಡಬಹುದು' ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರು ಸಚಿವ ಬಿ.ಸಿ. ನಾಗೇಶ್ ಅವರಿಗೆ ಸಲ್ಲಿಸಿದ ಪ್ರಸ್ತಾವದಲ್ಲಿ ವಿವರಿಸಿದ್ದಾರೆ.

ಈ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಕರ್ನಾಟಕ ಶಿಕ್ಷಣ ಸೇವೆಯ (ಕೆಇಎಸ್) ಅಧಿಕಾರಿಗಳು, 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗುತ್ತಿದ್ದು, ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ನೀಡುವ ಹೊಣೆಗಾರಿಕೆ ನಿಭಾಯಿಸಬೇಕಿರುವ ಈ ಸಮಯದಲ್ಲಿ ಇಲಾಖೆಯ ನಡೆ ಸರಿಯಲ್ಲ' ಎಂದು ಪ್ರತಿಪಾದಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಹೊಸ ಜಿಲ್ಲೆ ವಿಜಯನಗರ ಹೊರತುಪಡಿಸಿ ರಾಜ್ಯದಲ್ಲಿ 34 ಡಯಟ್‌ಗಳು ಕಾರ್ಯನಿರ್ವಹಿಸುತ್ತಿವೆ. ಪ್ರಾಂಶುಪಾಲರು, ಉಪನ್ಯಾಸಕರು ಸೇರಿದಂತೆ ಪ್ರಸ್ತುತ 711 ನೌಕರರು ಕೆಲಸ ಮಾಡುತ್ತಿದ್ದಾರೆ.

ಹುದ್ದೆಗಳ ರದ್ದತಿ ಆದೇಶ ಹೊರಬಿದ್ದರೆ ಹಿರಿಯ ಉಪನ್ಯಾಸಕರು ಬಿಇಒ, ಡಿಡಿಪಿಐ ಕಚೇರಿಗಳಲ್ಲಿನ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ, ಉಪನ್ಯಾಸಕರು ಪ್ರೌಢಶಾಲೆಗಳ ಮುಖ್ಯ ಶಿಕ್ಷಕರ ಹುದ್ದೆಗೆ ತೆರಳಬೇಕಿದೆ.

7ನೇ ಪುಟ ನೋಡಿ

ಶೇ 60ರಷ್ಟು ವೇತನಕ್ಕೆ ಕೇಂದ್ರದ ಅನುದಾನ

ಡಯಟ್‌ಗಳ ಹುದ್ದೆಗಳು ಕೇಂದ್ರ ಸರ್ಕಾರದ ನಿರ್ದೇಶನ ಹಾಗೂ ಸಂರಚನೆಯ ರೀತಿ ದೇಶದ ಎಲ್ಲ ರಾಜ್ಯಗಳಲ್ಲೂ ಏಕರೂಪದಲ್ಲಿವೆ. ಉಪನ್ಯಾಸಕರು ಮತ್ತು ಇತರೆ ಸಿಬ್ಬಂದಿಯ ಶೇ 60ರಷ್ಟು ವೇತನವನ್ನೂ ಕೇಂದ್ರ ಸರ್ಕಾರ ಭರಿಸುತ್ತಿದೆ.

'ಅನ್ವೇಷಕ ಶಿಕ್ಷಣ ಶಾಸ್ತ್ರ, ಪಠ್ಯಕ್ರಮ ನಿರ್ವಹಣೆ, ವೃತ್ತಿಪರ ಅಭಿವೃದ್ಧಿ, ಸಮೀಕ್ಷೆ ಮತ್ತು ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಯ ಮೂಲಕ ಶಿಕ್ಷಕರ ತರಬೇತಿ ಮರು ರೂಪಿಸಲಾಗುವುದು. ಅದಕ್ಕಾಗಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು ಚೈತನ್ಯಶೀಲ ಹಾಗೂ ಉತ್ಕೃಷ್ಟ ಗುಣಮಟ್ಟದ ಸಂಸ್ಥೆಗಳನ್ನಾಗಿ ಅಭಿವೃದ್ಧಿಗೊಳಿಸಲಾಗುವುದು' ಎಂದು ಫೆ.1ರಂದು ಮಂಡನೆಯಾದ 2023–24ನೇ ಸಾಲಿನ ಕೇಂದ್ರ ಬಜೆಟ್‌ನಲ್ಲೂ ವಿವರಿಸಲಾಗಿದೆ.

ಡಯಟ್‌ಗಳಲ್ಲಿನ ಹುದ್ದೆಗಳನ್ನು ರದ್ದು ಮಾಡಬಾರದು, ಕೇಂದ್ರ ಸರ್ಕಾರದ ಆಶಯದಂತೆ ಇನ್ನಷ್ಟು ಬಲಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಲಾಗಿದೆ

ಸಿ.ಎಸ್.ಷಡಾಕ್ಷರಿ, ಅಧ್ಯಕ್ಷರು, ರಾಜ್ಯ ಸರ್ಕಾರಿ ನೌಕರರ ಸಂಘ

ಪದನಾಮ ಡಯಟ್‌ನ ಹುದ್ದೆಗಳು

ಸಂಖ್ಯೆ	ಪದನಾಮ
30	ಪ್ರಾಂಶುಪಾಲರು
206	ಹಿರಿಯ ಉಪನ್ಯಾಸಕರು
461	ಉಪನ್ಯಾಸಕರು
44	ಇತರೆ
711	ಒಟ್ಟು

ಅನುದಾನ ಒದಗಿಸದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ • 5 ವರ್ಷವಾದರೂ ಪೂರ್ಣವಾಗದ ಕಾಮಗಾರಿ

ಗ್ರಾಫಿಕ್ ಕಲಾ ಪ್ರದರ್ಶನಕ್ಕಿಲ್ಲ ಸ್ಟುಡಿಯೊ

• ವರುಣ ಹೆಗಡೆ

ನನಸಾಗದ ಕಲಾವಿದರ ಕನಸು

25 ಕಲಾವಿದರು ಕೆಲಸ ಮಾಡುವಷ್ಟು ಅವಕಾಶ ಈ ಸ್ಟುಡಿಯೊ ಹೊಂದಿದೆ. ಲಿಥೋಗ್ರಾಫಿ ಸೇರಿ ಕಲೆಗೆ ಸಂಬಂಧಿಸಿದ ವಿವಿಧ ಯಂತ್ರಗಳು ಇರಲಿವೆ. ಇಲ್ಲಿ ಲಲಿತಕಲೆ, ಶಿಲ್ಪಕಲೆ ಕೃತಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲು ಯೋಜನೆ ರೂಪಿಸಲಾಗಿತ್ತು. ಈ ಕೇಂದ್ರದಿಂದ ಗ್ರಾಫಿಕ್ ಕಲೆಗೆ ವಿಶೇಷ ಮನ್ನಣೆ ದೊರೆಯಲಿದೆ ಎಂಬುದು ಕಲಾವಿದರ ಪಾಲಿಗೆ ಕನಸಾಗಿಯೇ ಉಳಿದಿದೆ.

ಬೆಂಗಳೂರು: ಗ್ರಾಫಿಕ್ ಕಲಾಕೃತಿಗಳ ರಚನೆ, ಪ್ರದರ್ಶನಗಳಿಗೆ ವೇದಿಕೆ ಕಲ್ಪಿಸಬೇಕಿದ್ದ ಗ್ರಾಫಿಕ್ ಸ್ಟುಡಿಯೊ, ಐದು ವರ್ಷ ಕಳೆದರೂ ಕಾರ್ಯಾರಂಭ ಮಾಡಿಲ್ಲ. ಈಗ ಅನುದಾನದ ಕೊರತೆಯಿಂದ ನಿರ್ಮಾಣ ಕಾಮಗಾರಿಯು ಸ್ಥಗಿತಗೊಂಡಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಸೇರಿದ್ದ ಈ ಸ್ಟುಡಿಯೊದ ಕಟ್ಟಡ ಮಲ್ಲತ್ತಹಳ್ಳಿ ಕಲಾಗ್ರಾಮದಲ್ಲಿ ತಲೆಯೆತ್ತಿದೆ. ಎಂ.ಎಸ್.ಮೂರ್ತಿ ಅವರು ಅಕಾಡೆಮಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಈ ಯೋಜನೆಗೆ ಅನುಮೋದನೆ ದೊರೆತು, 2017ರ ಆಗಸ್ಟ್ ತಿಂಗಳಲ್ಲಿ ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಶಂಕುಸ್ಥಾಪನೆ ನೆರವೇರಿಸಿದ್ದರು. ಇದೀಗ ಕಟ್ಟಡ ನಿರ್ಮಾಣವಾಗಿದ್ದು, ಅಂತಿಮ ಸ್ಪರ್ಶಕ್ಕೆ ಅನುದಾನದ ಕೊರತೆ ಎದುರಾಗಿದೆ. ₹1 ಕೋಟಿ ಹೆಚ್ಚುವರಿ ಅನುದಾನ ನೀಡುವಂತೆ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಡಿ.ಮಹೇಂದ್ರ ಅವರು ಇಲಾಖೆಗೆ ಪತ್ರ ಬರೆದು ಒತ್ತಾಯಿಸಿದ್ದರು. ಅನುದಾನ ಬಿಡುಗಡೆಯಾಗದಿದ್ದರಿಂದ ಈಗ ಕಾಮಗಾರಿ ನನೆಗುದಿಗೆ ಬಿದ್ದಿದೆ.

ಗ್ರಾಫಿಕ್ ಸ್ಟುಡಿಯೊದ ನಿರ್ಮಾಣಕ್ಕೆ ಸರ್ಕಾರ ಮೊದಲ ಹಂತದಲ್ಲಿ 2017ರಲ್ಲಿ ₹3.31 ಲಕ್ಷ ಅನುದಾನ ಬಿಡುಗಡೆ ಮಾಡಿತ್ತು. ಬಳಿಕ ಅನುದಾನ ಬಿಡುಗಡೆ ಆಗಿರಲಿಲ್ಲ. 2020ರಲ್ಲಿ ಸರ್ಕಾರ ₹ 3.33 ಕೋಟಿ ಬಿಡುಗಡೆ ಮಾಡಿತ್ತು. 2020ರ ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸಂಸ್ಕೃತಿ ಇಲಾಖೆ ಸೂಚಿಸಿತ್ತು. ಆದರೆ, ಕೋವಿಡ್‌ನಿಂದಾಗಿ ಕಾಮಗಾರಿಗೆ ಹಿನ್ನಡೆಯಾಗಿತ್ತು. ಕಳೆದ ವರ್ಷಾಂತ್ಯಕ್ಕೆ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಹೆಚ್ಚುವರಿ ಅನುದಾನ ಬಿಡುಗಡೆಯಾಗದಿದ್ದರಿಂದ ಕಟ್ಟಡಕ್ಕೆ ಬೀಗ ಹಾಕಲಾಗಿದೆ.

ಪ್ರಜಾವಾಣಿ ವಿಶೇಷ

ಗರಿ ಸ್ಟುಡಿಯೊ ಮಾದರಿ: ಗ್ರಾಫಿಕ್ ಸ್ಟುಡಿಯೊವನ್ನು 9,846 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಿದ್ದು, ಎರಡು ಮಹಡಿ ಹೊಂದಿದೆ. ವಿನ್ಯಾಸವು ದೆಹಲಿಯ ಗರಿ ಸ್ಟುಡಿಯೊ ಮಾದರಿ ಹೊಂದಿದೆ. ನೆಲಮಹಡಿಯಲ್ಲಿ 4 ಸ್ಟುಡಿಯೊ ನಿರ್ಮಿಸಲಾಗಿದೆ. ಪ್ರತಿ ಸ್ಟುಡಿಯೊದಲ್ಲಿಯೂ ಪಡಸಾಲೆ, ಉಗ್ರಾಣ, ಶೌಚಾಲಯ ಇದೆ. 'ಸ್ಟುಡಿಯೊ ಕಾಮಗಾರಿ ಶೇ80 ರಷ್ಟು ಆಗಿದೆ. ಕಟ್ಟಡ ಕಾಮಗಾರಿ ಮುಗಿದಿದೆ. ಇಲಾಖೆ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಹಣ ಮೀಸಲಿಡದ ಪರಿಣಾಮ ಕಾಮಗಾರಿ ಈಗ ಸ್ಥಗಿತಗೊಂಡಿದೆ. ಮುಂಬರುವ ಕ್ರಿಯಾ ಯೋಜನೆಯಲ್ಲಿ ಪ್ರತ್ಯೇಕವಾಗಿ ₹1 ಕೋಟಿ ಮೀಸಲಿಡಬೇಕು' ಎಂದು ಡಿ.ಮಹೇಂದ್ರ ಒತ್ತಾಯಿಸಿದರು.

ಪುನೀತ್ ಪ್ರೇರಣೆ: 150 ಜನರಿಂದ ಅಂಗಾಂಗ ದಾನ ಪ್ರತಿಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್‌ಯು ಆಸ್ಪತ್ರೆಯು ನಗರದಲ್ಲಿ ಗುರುವಾರ ಹಮ್ಮಿಕೊಂಡ ಅಂಗಾಂಗ ದಾನ ಕಾರ್ಯಕ್ರಮದಲ್ಲಿ 150ಕ್ಕೂ ಅಧಿಕ ಮಂದಿ ಅಂಗಾಂಗ ದಾನದ ಪ್ರತಿಜ್ಞೆ ಕೈಗೊಂಡರು.

ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ಆಸ್ಪತ್ರೆಯು ಈ ಕಾರ್ಯಕ್ರಮ ಆಯೋಜಿಸಿತ್ತು. ದಿವಂಗತ ನಟ ಪುನೀತ್ ರಾಜಕುಮಾರ್‌ರಿಂದ ಪ್ರೇರಣೆ ಪಡೆದು, ಹಲವರು ಅಂಗಾಂಗ ದಾನದ ಪ್ರತಿಜ್ಞೆ ಮಾಡಿದರು.

ಆಸ್ಪತ್ರೆಯ ವೈದ್ಯಕೀಯ ಸಮೂಹದ ನಿರ್ದೇಶಕ ಡಾ. ದಿಲೀಪ್ ರಂಗರಾಜನ್, 'ಅಂಗಾಂಗ ದಾನಕ್ಕೆ ಕಾಯುವ ರೋಗಿಗಳ ಪಟ್ಟಿ ಬೆಳೆಯುತ್ತಿದೆ. ಅಂಗಾಂಗ ದಾನಕ್ಕೆ ಉತ್ತೇಜನ ನೀಡುವುದು ಇಂದಿನ ಅಗತ್ಯ. ಮೂತ್ರಪಿಂಡ ವೈಫಲ್ಯಕ್ಕೆ ಒಳಗಾದವರಿಗೆ ಅಂಗಾಂಗ ಕಸಿಯು ಡಯಾಲಿಸಿಸ್ ಮೇಲಿನ ಅವಲಂಬನೆ ತಪ್ಪಿಸಲಿದೆ. ಅಂಗಾಂಗ ದಾನ ಉತ್ತೇಜಿಸಲು ಜಾಗೃತಿ ಅಭಿಯಾನಗಳನ್ನು ಕೈಗೊಳ್ಳಬೇಕು' ಎಂದು ಹೇಳಿದರು.

ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯ (ಸೊಟ್ಟೊ) ಕಸಿ ಸಂಯೋಜಕ, 'ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ.

ಹೃದಯ, ಮೂತ್ರಪಿಂಡ, ಶ್ವಾಸಕೋಶ ಸೇರಿ ವಿವಿಧ ಅಂಗಾಂಗಗಳು, ಹೃದಯದ ಕವಾಟ, ಚರ್ಮ, ಕಣ್ಣು ಗುಡ್ಡೆ ಸೇರಿ ವಿವಿಧ ಅಂಗಾಂಶಗಳನ್ನು ದಾನವಾಗಿ ಸ್ವೀಕರಿಸಲಾಗುತ್ತದೆ' ಎಂದು ತಿಳಿಸಿದರು.

farnaz

ಇಬ್ಬರು ಮಕ್ಕಳ ಜೀವ ರಕ್ಷಣೆ: ಕೆಎಸ್‌ಆರ್‌ಟಿಸಿ ಚಾಲಕನಿಗೆ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ಜಿಲ್ಲೆಯ ಅಗ್ರಹಾರ ಕೆರೆಯಲ್ಲಿ ಮುಳುಗುತ್ತಿದ್ದ ಇಬ್ಬರು ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡಿದ ಕೆಎಸ್‌ಆರ್‌ಟಿಸಿ ಚಾಲಕ ಮಂಜುನಾಥ್ ಅವರಿಗೆ ನಿಗಮ ₹10 ಸಾವಿರ ನಗದು ಪುರಸ್ಕಾರ ನೀಡಿದೆ.

ನಗದು, ಅಭಿನಂದನಾ ಪತ್ರವನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ನೀಡಿ ಗೌರವಿಸಿದ್ದು, 'ಮಾನವೀಯ ಮೌಲ್ಯಗಳು ಉಳಿದಿವೆ ಎಂಬುದಕ್ಕೆ ಚಾಲಕ ಮಂಜುನಾಥ್ ಜೀವಂತ ಉದಾಹರಣೆ' ಎಂದು ತಿಳಿಸಿದರು.

'ಈಜು ಬರುವವರೇ ನೀರಿಗೆ ಇಳಿಯಲು ಹಲವು ಬಾರಿ ಯೋಚಿಸುತ್ತಾರೆ. ಮಂಜುನಾಥ್ ಅವರು ಬಸ್‌ನಲ್ಲಿ 40 ಜನ ಇದ್ದರೂ ಬೇರೆಯವರಿಗೆ ಕಾಯದೆ ತಾವೇ ನೀರಿನಲ್ಲಿ ಜಿಗಿದು ಮಕ್ಕಳ ಪ್ರಾಣ ರಕ್ಷಿಸಿದ್ದಾರೆ. ಅವರಿಗೆ ನೀಡಿರುವ ನಗದು ಪುರಸ್ಕಾರ ಅವರ ಕಾರ್ಯಕ್ಕೆ ಸಮವಲ್ಲ. ಆದರೂ ಅವರನ್ನು ಗೌರವಿಸುವ ಕೆಲಸ ಮಾಡಿದ್ದೇವೆ' ಎಂದು ಹೇಳಿದರು.



ಮಂಜುನಾಥ್ ಅವರನ್ನು ವಿ.ಅನ್ಬುಕುಮಾರ್ ಅಭಿನಂದಿಸಿದರು.

ಸುದ್ದಿ 2 ನಿಮಿಷ

'ಸುಪ್ರೀಂ' ನಿರ್ದೇಶನದ ನಂತರವೇ ಮೇಕೆದಾಟು ಜಾರಿ : ಬೊಮ್ಮಾಯಿ

ಬೆಂಗಳೂರು: 'ಹಿಂದಿನ ಸರ್ಕಾರದ ತಪ್ಪಿನಿಂದ ಮೇಕೆದಾಟು ಯೋಜನೆ ಪ್ರಾರಂಭದಲ್ಲೇ ಅಂತರರಾಜ್ಯ ವಿವಾದದಲ್ಲಿ ಸಿಲುಕಿದೆ. ಸುಪ್ರೀಂಕೋರ್ಟ್ ಮುಂದೆ ಮಾರ್ಚ್‌ನಲ್ಲಿ ವಿಚಾರಣೆಗೆ ಬರಲಿದ್ದು, ಕೋರ್ಟ್ ನಿರ್ದೇಶನದಂತೆ ಯೋಜನೆ ಅನುಷ್ಠಾನಕ್ಕೆ ಕ್ರಮವಹಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಯೋಜನೆಗೆ ಬಜೆಟ್‌ನಲ್ಲಿ ₹ 1 ಸಾವಿರ ಕೋಟಿ ಮೀಸಲಿಡಲಾಗಿದೆ. ಸಮಗ್ರ ಯೋಜನಾ ವರದಿಗೆ ಅನುಮತಿ ದೊರೆಯದೆ ಸರ್ಕಾರ ಅಸಹಾಯಕವಾಗಿದೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

ಕೇಂದ್ರ ಬಜೆಟ್‌ನಲ್ಲಿ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ, ವಸತಿ, ಕೃಷಿ, ನೀರಾವರಿಗೆ ಆದ್ಯತೆ ನೀಡಲಾಗಿದೆ. ಉದ್ಯೋಗ ಖಾತ್ರಿಗೆ ಅನುದಾನ ಕಡಿಮೆಯಾಗಿದೆ ಎನ್ನುವುದು ಸರಿಯಲ್ಲ. ರಾಜ್ಯವು ಹಲವು ಯೋಜನೆಗಳನ್ನು ಉದ್ಯೋಗ ಖಾತ್ರಿಯಲ್ಲಿ ವಿಲೀನಗೊಳಿಸಿದೆ. ಸ್ಥಳೀಯ ಸಂಪನ್ಮೂಲಗಳನ್ನೂ ಬಳಸಲಾಗುತ್ತಿದೆ ಎಂದರು. ಭದ್ರಾ ಮೇಲ್ದಂಡೆ ಯೋಜನೆಗೆ 2008ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಚಾಲನೆ ನೀಡಿತ್ತು. ಆರಂಭದಲ್ಲಿ 16 ಟಿಎಂಸಿ ಅಡಿ ಇದ್ದದ್ದು, ಈಗ 23 ಟಿಎಂಸಿ ಅಡಿಗೆ ಅವಕಾಶ ನೀಡಲಾಗಿದೆ. ವಿಪಕ್ಷಗಳ ಟೀಕೆ ಅನಗತ್ಯ ಎಂದರು. ನೀರಾವರಿ ಯೋಜನೆಗಳಿಗೆ ಯುಪಿಎ ನಿರ್ಬಂಧ ಹಾಕಿತ್ತು. ಎನ್‌ಡಿಎ ಬಂದ ನಂತರ ಈ ಪರಿಸ್ಥಿತಿ ಬದಲಾಗಿದೆ. ಈಗ ₹ 5,300 ಕೋಟಿ ಅನುದಾನ ಘೋಷಿಸಲಾಗಿದೆ. ರಾಜ್ಯ ಸರ್ಕಾರ ಆಗಲೇ ₹ 13 ಸಾವಿರ ಕೋಟಿ ವ್ಯಯಿಸಿದೆ ಎಂದರು.



ಕಸಾಪಗೆ ₹25 ಕೋಟಿ ಅನುದಾನ: ಮುಖ್ಯಮಂತ್ರಿಗೆ ಅಧ್ಯಕ್ಷರ ಮನವಿ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ಬಜೆಟ್‌ನಲ್ಲಿ ₹ 25 ಕೋಟಿ ಅನುದಾನ ಘೋಷಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ಮನವಿ ಸಲ್ಲಿಸಿದ್ದಾರೆ.

'ಪ್ರತಿವರ್ಷ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ ಸರ್ಕಾರ ₹ 10 ಕೋಟಿ ಅನುದಾನ ನೀಡುತ್ತಿದೆ. ಈಗ ವಿಶೇಷ ಅನುದಾನ ಅಗತ್ಯವಿದೆ. ಮುಖ್ಯಮಂತ್ರಿ ಜೊತೆ ಚರ್ಚಿಸಿದ್ದು, ಒದಗಿಸುವ ಭರವಸೆ ನೀಡಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಪರಿಷತ್ತಿನ ವಜ್ರಮಹೋತ್ಸವ ಕಟ್ಟಡ ಮತ್ತು ಆಡಳಿತ ಕಟ್ಟಡಕ್ಕೆ ಬಣ್ಣ ಹಚ್ಚುವಿಕೆ, ಪಂಪ ಸಭಾಂಗಣ ನವೀಕರಣ, ಅಕ್ಕಮಹಾದೇವಿ ಸಭಾಂಗಣದ ಧ್ವನಿ ತಂತ್ರಜ್ಞಾನ ವ್ಯವಸ್ಥೆ ಸರಿಪಡಿಸುವುದು, ಶತಮಾನೋತ್ಸವ ಭವನದಲ್ಲಿ ಸಾಹಿತಿ ಹಾಗೂ ಕಲಾವಿದರಿಗೆ ಅತಿಥಿಗೃಹ ವ್ಯವಸ್ಥೆ ಕಲ್ಪಿಸುವುದು, ಬಿ.ಎಂ.ಶ್ರೀ. ಅಚ್ಚುಕೂಟ, ಸರಸ್ವತಿ ಗ್ರಂಥ ಭಂಡಾರ, ಪುಸ್ತಕ ಮಾರಾಟ ಕೇಂದ್ರ ಇವುಗಳ ಕಟ್ಟಡಗಳ ನವೀಕರಣ ಮತ್ತು ಅಭಿವೃದ್ಧಿ, ಗ್ರಂಥಗಳ ಡಿಜಿಟಲೀಕರಣ, ತಂತ್ರಾಂಶ ಅಳವಡಿಕೆ ಮತ್ತು ಅಭಿವೃದ್ಧಿಗೆ ವಿಶೇಷ ಅನುದಾನ ಅಗತ್ಯ' ಎಂದು ಜೋಶಿ ತಿಳಿಸಿದ್ದಾರೆ.

ಒಟ್ಟು 400 ಗಿಡ–ಮರಗಳಿಗೆ ಹಾನಿ • ಅಜೀಂ ಪ್ರೇಮ್‌ಜಿ ವಿ.ವಿ ಅಧ್ಯಯನ ವರದಿ ಎಚ್ಚರಿಕೆ

ಸ್ಯಾಂಕಿ ಮೇಲ್ಸೇತುವೆ: 85 ಮರ ನೆಲಸಮ?

ಪ್ರಜಾವಾಣಿ ವಾರ್ತೆ



ಸ್ಯಾಂಕಿ ರಸ್ತೆಯಲ್ಲಿರುವ ಬೃಹತ್ ಮರಗಳು

ಬೆಂಗಳೂರು: ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಿಸಿದರೆ 58 ಮರಗಳಲ್ಲ, 85 ಮರಗಳು ಬುಡಮೇಲಾಗುತ್ತವೆ. ಅಷ್ಟೇ ಅಲ್ಲ, 400ಕ್ಕೂ ಹೆಚ್ಚು ಗಿಡ-ಮರಗಳು ಹಾನಿಗೊಳಗಾಗುತ್ತವೆ. ಪರಿಸರದ ಮೇಲೆ ಭರಿಸಲಾಗದಷ್ಟು ದುಷ್ಪರಿಣಾಮ ಬೀರುತ್ತದೆ ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಪರಿಸರದ ಮೇಲಿನ ಪರಿಣಾಮ' ವರದಿ ತಿಳಿಸಿದೆ.

ಸ್ಯಾಂಕಿ ರಸ್ತೆಯಲ್ಲಿ ಸುಮಾರು 600 ಮೀಟರ್ ಉದ್ದದ ಮೇಲ್ಸೇತುವೆ ಮಾಡುವ ಪ್ರದೇಶದಲ್ಲಿ ಪಾರಂಪರಿಕವಾದ ಹಾಗೂ ಅಸಾಮಾನ್ಯವಾದ 85 ಮರಗಳನ್ನು ಕಡಿಯಬೇಕಾಗುತ್ತದೆ. ಇದರಲ್ಲಿ 34 ಪ್ರಭೇದದ ಮರಗಳಿವೆ. ಇದಲ್ಲದೆ, ಸ್ಯಾಂಕಿ ಕೆರೆಯ ಏರಿ ಸೇರಿದಂತೆ ಈ ಭಾಗದಲ್ಲಿ ಬೆಳೆದು ನಿಂತಿರುವ ಸುಮಾರು 400 ಗಿಡಗಳಿಗೆ ಮೇಲ್ಸೇತುವೆ ನಿರ್ಮಾಣದಿಂದ ಪರೋಕ್ಷವಾಗಿ ಹಾನಿಯಾಗಲಿದೆ. ಏರಿಯ ಸಾಕಷ್ಟು ಅಗೆತದಿಂದ ಗಿಡಗಳ ಬೆಳವಣಿಗೆ ಕುಂಠಿತವಾಗುತ್ತದೆ. ಇದನ್ನು ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ನಮೂದಿಸಿಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರೊ. ಹರಿಣಿ ನಾಗೇಂದ್ರ, ಪ್ರೊ. ಸೀಮಾ ಮುಂಡೋಲಿ ಹಾಗೂ ವೃಕ್ಷ ಫೌಂಡೇಷನ್‌ನ ವಿಜಯ್ ನಿಶಾಂತ್ ಅವರು, 'ಸ್ಯಾಂಕಿ ರಸ್ತೆಯಲ್ಲಿ ಪ್ರಸ್ತಾವಿತ ಮೇಲ್ಸೇತುವೆಯಿಂದ ಉಂಟಾಗುವ ಪರಿಸರದ ಮೇಲಿನ ದುಷ್ಪರಿಣಾಮ' ವರದಿಯನ್ನು ಸ್ಥಳೀಯವಾಗಿ ಅಧ್ಯಯನ ನಡೆಸಿ ಸಿದ್ಧಪಡಿಸಿದ್ದಾರೆ.

'ಹಲವು ದಶಕಗಳಿಂದಿರುವ, ಇದೀಗ ಬುಡಮೇಲಾಗುವ ರೈನ್‌ಟ್ರೀಯ ಬುಡದ ಸುತ್ತಳತೆ 500 ಸೆಂಟಿ ಮೀಟರ್ ಇದೆ. ಮಾವಿನ ಮರದ ಬುಡದ ಸುತ್ತಳತೆ 450 ಸೆಂ.ಮೀ, ಹುಣಸೆಮರದ ಬುಡದ ಸುತ್ತಳತೆ 422 ಸೆಂ. ಮೀಟರ್ ಇದೆ. ಇಂತಹ ಬೃಹತ್ ಮರಗಳನ್ನು ಕಡಿದರೆ ಅದಕ್ಕೆ ಪರ್ಯಾಯ ಎಂದು ಯೋಚಿಸುವುದು ಕಷ್ಟ. ಅಷ್ಟೇ ಅಲ್ಲ, ಯಾವುದೇ ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ಪರಿಸರದ ಮೇಲಿನ ದುಷ್ಪರಿಣಾಮದ ವರದಿ ಸಿದ್ಧಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಚಂಡೀಗಢದ ಪ್ರಕರಣವೊಂದರಲ್ಲಿ ತಿಳಿಸಿದೆ. ಆದರೆ ಇಲ್ಲಿ ಬಿಬಿಎಂಪಿ ಆ ಸಮೀಕ್ಷಾ-ವರದಿ ಮಾಡಿಲ್ಲ' ಎಂದು ವಿಜಯ್ ನಿಶಾಂತ್ ಹೇಳಿದರು.

'ಗಿಡ–ಮರ ಮಾತ್ರ ಕಡಿಯಲಾಗುತ್ತದೆ ಎಂಬ ಮಾತಿನಲ್ಲಿ ಸತ್ಯವಿಲ್ಲ. ಇದರಿಂದ ಜೀವವೈವಿಧ್ಯಕ್ಕೆ ತೊಂದರೆಯಾಗುತ್ತದೆ. ಸ್ಯಾಂಕಿ ಕೆರೆಯ ಸುತ್ತಮುತ್ತ ಸಾಕಷ್ಟು ಪಕ್ಷಿಗಳಿವೆ. ಅವುಗಳ ಜೀವನಕ್ರಮವಿರುತ್ತದೆ. ಈ ಬೃಹತ್ ಮರಗಳನ್ನು ಕಡಿಯುವುದರಿಂದ ನಾಗರಿಕರ ಜೊತೆಗೆ ಪಕ್ಷಿಸಂಕುಲದ ಮೇಲೂ ದುಷ್ಪರಿಣಾಮ ಬೀರುತ್ತದೆ' ಎಂದರು.

ಸ್ಥಳೀಯ ನಿವಾಸಿಗಳ ವಿರೋಧದ ನಡುವೆಯೂ ಬಿಬಿಎಂಪಿ ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಿಸಲು ಮುಂದಾಗಿದೆ. 'ಸುಸ್ಥಿರ ಅಭಿವೃದ್ಧಿ ಯೋಜನೆಯಡಿಯೇ ಮೇಲ್ಸೇತುವೆ ನಿರ್ಮಿಸಲಾಗುತ್ತಿದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದ್ದರು. ಆದರೆ, ವಾಸ್ತವದಲ್ಲಿ ಯಾವುದೇ ರೀತಿಯ ಪರಿಸರ ದುಷ್ಪರಿಣಾಮವನ್ನು ದಾಖಲಿಸಿಲ್ಲ. ಈಗ ಈ 'ಇಐಎಆರ್' ಎಲ್ಲವನ್ನೂ ಬಯಲು ಮಾಡಿದೆ.

ಜೀವವೈವಿಧ್ಯಕ್ಕೆ ದಕ್ಕೆ

ಈ ವರದಿಯಂತೆ ಪರಿಸರದ ಮೇಲೆ ಪ್ರಮುಖವಾಗಿ ಐದು ಅಂಶಗಳಲ್ಲಿ ದುಷ್ಪರಿಣಾಮವಾಗಲಿದೆ. ಹಸಿರು ಹೊದಿಕೆ ಕಡಿಮೆಯಾಗಿ, ಇಂಗಾಲದ ಪ್ರಮಾಣ ಹೆಚ್ಚಾಗುತ್ತದೆ. ವಾಯುಮಾಲಿನ್ಯ ಹೆಚ್ಚಾಗುತ್ತದೆ. ವಾತಾವರಣದಲ್ಲಿ ಅನಿರೀಕ್ಷಿತ ದುಷ್ಪರಿಣಾಮ ಹೆಚ್ಚಾಗುತ್ತದೆ. ನಗರ ಜೀವವೈವಿಧ್ಯದ ಮೇಲೆ ವ್ಯತಿರಿಕ್ತ ಪರಿಣಾಮವಾಗುತ್ತದೆ. ಸ್ಯಾಂಕಿ ಕೆರೆಯಲ್ಲಿನ ಜೀವವೈವಿಧ್ಯಕ್ಕೆ ದಕ್ಕೆಯಾಗುತ್ತದೆ.

ಕಾಂಗ್ರೆಸ್ ಭದ್ರಕೋಟೆಗೆ ಲಗ್ಗೆ ಬಿಜೆಪಿ, ಜೆಡಿಎಸ್ ಯತ್ನ

ಪ್ರಜಾ ಮತ – ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

• ಎಸ್.ರವಿಪ್ರಕಾಶ್

ಬೆಂಗಳೂರು: ನಗರದ ಹೃದಯಭಾಗದಲ್ಲಿರುವ ಗಾಂಧಿನಗರ ವಿಧಾನಸಭಾ ಕ್ಷೇತ್ರ ವಾಣಿಜ್ಯ ಚಟುವಟಿಕೆಗಳಿಂದ ಕೂಡಿರುವ, ಸದಾ ಜನಸಂದಣಿಯಿಂದ ಗಿಜಿಗುಡುವ ಕ್ಷೇತ್ರ. ಕಾಂಗ್ರೆಸ್‌ನ ಭದ್ರಕೋಟೆ ಎನಿಸಿರುವ ಇಲ್ಲಿ ದಿನೇಶ್ ಗುಂಡೂರಾವ್ ಈ ಬಾರಿಯೂ ಟಿಕೆಟ್ ಆಕಾಂಕ್ಷಿ.

ಅವರು 5 ಬಾರಿ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ. ಈ ಬಾರಿ ಇವರನ್ನು ಸೋಲಿಸಿ ಕ್ಷೇತ್ರವನ್ನು ಗೆದ್ದುಕೊಳ್ಳುವ ಛಲವನ್ನು ಬಿಜೆಪಿ ತೊಟ್ಟಿದೆ. ಬಿಜೆಪಿಯಲ್ಲಿ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ. ವಿ.ನಾರಾಯಣಸ್ವಾಮಿ ಅವರಿಗೆ ಜೆಡಿಎಸ್ ಪಕ್ಷ ಟಿಕೆಟ್ ಘೋಷಿಸಿದೆ. ಕಳೆದ ಬಾರಿ ಅವರು 32 ಸಾವಿರಕ್ಕೂ ಅಧಿಕ ಮತ ಗಳಿಸಿದ್ದರು.

ಕಾಂಗ್ರೆಸ್‌ನಲ್ಲಿ ದಿನೇಶ್ ಅವರಿಗೆ ಪ್ರತಿಸ್ಪರ್ಧಿ ಇಲ್ಲ. ಆ ಪಕ್ಷದಲ್ಲಿ ಟಿಕೆಟ್ ಆಕಾಂಕ್ಷಿಗಳೂ ಇಲ್ಲ. ಎದುರಾಳಿ ಪಕ್ಷಗಳಿಂದ ದಿನೇಶ್ ಅವರನ್ನು ಸೋಲಿಸುವ ಪ್ರಯತ್ನ ಈವರೆಗೂ ಯಶಸ್ವಿ ಆಗಿಲ್ಲ. ಬಿಜೆಪಿಯಿಂದ ಪ್ರಬಲ ಅಭ್ಯರ್ಥಿ ಎಂದೇ ಪರಿಗಣಿಸಲಾದ ಪಿ.ಸಿ.ಮೋಹನ್ ಅವರು ಎರಡು ಬಾರಿ ಇವರ ಎದುರು ಸ್ಪರ್ಧಿಸಿ ಸೋತಿದ್ದಾರೆ. ಮೋಹನ್ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಸಂಸದರೂ ಆಗಿದ್ದಾರೆ.

ಬಿಜೆಪಿಯಿಂದ ಮಾಜಿ ಸಚಿವ ರಾಮಚಂದ್ರೇಗೌಡರ ಪುತ್ರ ಸಪ್ತಗಿರಿಗೌಡ, ಮಾಜಿ ಕಾರ್ಪೊರೇಟರ್ ಶಿವಕುಮಾರ್, ಮಾಜಿ ಸಚಿವ ಮಾಲೂರಿನ ಕೃಷ್ಣಯ್ಯ ಶೆಟ್ಟಿ ಅವರು ಟಿಕೆಟ್ ಆಕಾಂಕ್ಷಿಗಳು. ಕೃಷ್ಣಯ್ಯ ಶೆಟ್ಟಿ ಕ್ಷೇತ್ರದ ಉದ್ದಗಲಕ್ಕೂ ಪ್ರಚಾರವನ್ನೂ ನಡೆಸಿದ್ದಾರೆ. ಅಲ್ಲದೇ, ವೈಕುಂಠ ಏಕಾದಶಿ ವೇಳೆ ಪ್ರಮುಖ ದೇಗುಲಗಳಲ್ಲಿ ಲಾಡೂ ಹಂಚಿದ್ದೂ ಅಲ್ಲದೇ, ಕೆಲವು ಹಳೆ ತಂತ್ರಗಳನ್ನೂ (ಧಾರ್ಮಿಕ ಕ್ಷೇತ್ರಗಳಿಗೆ ಭಕ್ತರಿಗೆ ಪ್ರವಾಸ) ಆರಂಭಿಸಿದ್ದಾರೆ ಎಂದು ಹೇಳಲಾಗಿದೆ. ಕಾಂಗ್ರೆಸ್ ಪ್ರಾಬಲ್ಯದ ಈ ಕ್ಷೇತ್ರದಲ್ಲಿ ಕೊಳೆಗೇರಿ ಮತಗಳು ಹೆಚ್ಚಿನ ಪ್ರಮಾಣದಲ್ಲಿದೆ. ಈ ಮತಗಳನ್ನೇ ಕಾಂಗ್ರೆಸ್ ನೆಚ್ಚಿಕೊಂಡಿದೆ. ಬಿಜೆಪಿ ಒಮ್ಮೆಯೂ ಕ್ಷೇತ್ರದಲ್ಲಿ ಗೆದ್ದಿಲ್ಲ. ಹಿಂದೆ ಜನತಾಪಕ್ಷ ಎರಡು ಬಾರಿ, ಎಐಎಡಿಎಂಕೆ ಒಮ್ಮೆ ಈ ಕ್ಷೇತ್ರವನ್ನು ಗೆದ್ದಿತ್ತು.

ದತ್ತಾತ್ರೇಯ ದೇವಸ್ಥಾನ, ಗಾಂಧಿನಗರ, ಸುಭಾಷ್ ನಗರ, ಓಕಳೀಪುರಂ, ಚಿಕ್ಕಪೇಟೆ, ಕಾಟನ್ ಪೇಟೆ, ಬಿನ್ನಿಪೇಟೆಯನ್ನು ಈ ಕ್ಷೇತ್ರ ಒಳಗೊಂಡಿದೆ. ಹಳೆಯ ಬೆಂಗಳೂರಿನ ಭಾಗವಾಗಿರುವ ಈ ಕ್ಷೇತ್ರದಲ್ಲಿ ಬಡಾವಣೆಗಳು ಒತ್ತೊತ್ತಾಗಿವೆ. ರಸ್ತೆಗಳು, ಅಂಗಡಿಗಳು ಇನ್ನೂ ಹಳೇ ಸ್ವರೂಪದಲ್ಲೇ ಇದ್ದು, ಆಧುನಿಕ ಬೆಂಗಳೂರಿನ ಲಕ್ಷಣ ಪಡೆದಿಲ್ಲ. ಕ್ಷೇತ್ರಕ್ಕೆ ಅಭಿವೃದ್ಧಿಯ ಮೂಲಕ ಹೊಸ ಸ್ವರೂಪದ ಸ್ಪರ್ಶ ನೀಡುವುದು ಜನಪ್ರತಿನಿಧಿಗಳಿಗೆ ಸವಾಲೇ ಆಗಿದೆ. ಇಲ್ಲಿ ರಸ್ತೆ ಅಗಲ ಮಾಡಲು ಸಾಧ್ಯವಿಲ್ಲ, ವ್ಯಾಪಾರಿಗಳು ಮತ್ತು ನಿವಾಸಿಗಳಿಂದ ಪ್ರತಿರೋಧ ಬರುತ್ತದೆ. ಹೀಗಾಗಿ ಕ್ಷೇತ್ರದ ಎಲ್ಲೆಡೆ ಕಿರಿದಾದ ರಸ್ತೆಗಳಿಗೆ ತೇಪೆ ಹಾಕುವ ಕೆಲಸವೇ ಆಗುತ್ತಿದೆ. ಮತ್ತೊಂದೆಡೆ ಕೊಳೆಗೇರಿ ನಿವಾಸಿಗಳಿಗೆ ಬೇರೆಡೆ ಮನೆ ಕಟ್ಟಿಕೊಟ್ಟರೂ, ಹೋಗಲು ತಯಾರಿಲ್ಲ. ಇವೆರಡೂ ವರ್ಗಗಳನ್ನು ಎದುರು ಹಾಕಿಕೊಳ್ಳಲು ಜನಪ್ರತಿನಿಧಿಗಳು ಸಿದ್ಧರಿಲ್ಲ.

ಗಾಂಧಿನಗರ



ದಿನೇಶ್ ಗುಂಡೂರಾವ್; ಹಾಲಿ ಶಾಸಕ, (ಕಾಂಗ್ರೆಸ್)



ಹಾಲಿ ಮತದಾರರ ವಿವರ

1,13,713 ಪುರುಷರು | 1,06,198 ಮಹಿಳೆಯರು | 24 ತೃತೀಯ ಲಿಂಗಿಗಳು

2,19,934 ಒಟ್ಟು

ಕ್ಷೇತ್ರ ಸ್ಥಿತಿ–ಗತಿ

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	47,354	54,968	41,188
ಬಿಜೆಪಿ	37,284	32,361	34,242
ಜೆಡಿಎಸ್	36,635	10,875 (ಪಕ್ಷೇತರ)	13,053 (ಪಕ್ಷೇತರ)

ಅನುಮೋದನೆ ಕೋರಿ ಕೇಂದ್ರಕ್ಕೆ ರಾಜ್ಯದಿಂದ ಪ್ರಸ್ತಾವ ಸಲ್ಲಿಕೆ

ಮೆಟ್ರೊ: 3ನೇ ಹಂತಕ್ಕೆ ₹16,328 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ 'ನಮ್ಮ ಮೆಟ್ರೊ' ಮೂರನೇ ಹಂತದ ಯೋಜನೆಗೆ ಅನುಮೋದನೆ ಕೋರಿ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಲೋಕಸಭೆಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಅವರ ಪ್ರಶ್ನೆಗೆ ವಸತಿ ಹಾಗೂ ನಗರ ವ್ಯವಹಾರಗಳ ರಾಜ್ಯ ಸಚಿವ ಕೌಶಲ್ ಕಿಶೋರ್ ಗುರುವಾರ ಲಿಖಿತ ಉತ್ತರ ನೀಡಿದ್ದಾರೆ.

'₹16,328 ಕೋಟಿ ಮೊತ್ತದ ಯೋಜನೆಯ ಎರಡು ಕಾರಿಡಾರ್‌ಗಳಲ್ಲಿ 44.65 ಕಿ.ಮೀ ಮೆಟ್ರೊ ರೈಲು ಮಾರ್ಗ ನಿರ್ಮಿಸಲು ಉದ್ದೇಶಿಸಲಾಗಿದೆ. 31 ನಿಲ್ದಾಣಗಳು ಇರಲಿದ್ದು, ಸರಾಸರಿ ಮೂರರಿಂದ ನಾಲ್ಕು ಕಿ.ಮೀ. ವ್ಯಾಪ್ತಿಗೊಂದು ಇಂಟರ್ ಚೇಂಜ್ ನಿಲ್ದಾಣ ನಿರ್ಮಾಣವಾಗಲಿದೆ' ಎಂದು ಸಚಿವರು ತಿಳಿಸಿದ್ದಾರೆ.

1ನೇ ಕಾರಿಡಾರ್ ಜೆ.ಪಿ.ನಗರ 4ನೇ ಹಂತದಿಂದ ಆರಂಭವಾಗಿ ಪಶ್ಚಿಮ ಹೊರ ವರ್ತುಲ ರಸ್ತೆಯಲ್ಲಿ ಹಾದು ಕೆಂಪಾಪುರ ತಲುಪಲಿದೆ. 32.15 ಕಿ.ಮೀ ಮಾರ್ಗ ಇದಾಗಲಿದೆ. 2ನೇ ಕಾರಿಡಾರ್ (12.50 ಕಿ.ಮೀ) ಹೊಸಹಳ್ಳಿಯಿಂದ ಮಾಗಡಿ ರಸ್ತೆ ಮೂಲಕ ಕಡಬಗೆರೆ ಸಂಪರ್ಕಿಸಲಿದೆ. ಎರಡೂ ಎತ್ತರಿಸಿದ ಮಾರ್ಗಗಳು. ಇವುಗಳ ನಿರ್ವಹಣೆಗೆ ಸುಂಕದಕಟ್ಟೆಯಲ್ಲಿ ಡಿಪೊ ನಿರ್ಮಾಣವಾಗಲಿದೆ. ಈ ಯೋಜನೆಗೆ ಒಟ್ಟಾರೆ 110 ಎಕರೆ ಭೂಮಿ ಸ್ವಾಧೀನವಾಗಲಿದೆ.

ಕೇಂದ್ರ ಶೇ 20ರಷ್ಟು ಆರ್ಥಿಕ ನೆರವು ನೀಡಲಿದೆ. ಉಳಿದದ್ದನ್ನು ವಿವಿಧ ಹಣಕಾಸು ಸಂಸ್ಥೆ, ಮಹಡಿ ವಿಸ್ತೀರ್ಣ ಅನುಪಾತ (ಎಫ್‌ಎಆರ್) ಹೆಚ್ಚಳ, ಜಾಹೀರಾತು, ಆಸ್ತಿ ಅಭಿವೃದ್ಧಿ ಸೇರಿ ವಿವಿಧ ಕ್ರಮಗಳ ಮೂಲಕ ಪಡೆಯಲು ಉದ್ದೇಶಿಸಲಾಗಿದೆ.

ಮೆಟ್ರೊ ನಿಲ್ದಾಣ ಎಲ್ಲೆಲ್ಲಿ: 1ನೇ ಕಾರಿಡಾರ್‌ನಲ್ಲಿ 22 ನಿಲ್ದಾಣಗಳು ನಿರ್ಮಾಣವಾಗಲಿವೆ. ಜೆ.ಪಿ.ನಗರ 4ನೇ ಹಂತ, ಜೆ.ಪಿ.ನಗರ 5ನೇ ಹಂತ, ಜೆ.ಪಿ. ನಗರ, ಕದಿರೇನಹಳ್ಳಿ, ಕಾಮಾಕ್ಯ ಜಂಕ್ಷನ್, ಹೊಸಕೆರೆಹಳ್ಳಿ, ದ್ವಾರಕನಗರ, ಮೈಸೂರು ರಸ್ತೆ, ನಾಗರಬಾವಿ ವೃತ್ತ, ವಿನಾಯಕ ಲೇಔಟ್, ಪಾಪಿರೆಡ್ಡಿಪಾಳ್ಯ, ನಾಗರಬಾವಿ ಬಿಡಿಎ ಕಾಂಪ್ಲೆಕ್ಸ್, ಸುಮನಹಳ್ಳಿ ಕ್ರಾಸ್, ಚೌಡೇಶ್ವರಿನಗರ, ಸ್ವಾತಂತ್ರ್ಯ ಯೋಧರ ಕಾಲೊನಿ, ಕಂಠೀರವನಗರ, ಪೀಣ್ಯ, ಮುತ್ಯಾಲನಗರ, ಬಿಇಎಲ್ ಸರ್ಕಲ್, ನಾಗಶೆಟ್ಟಿಹಳ್ಳಿ, ಹೆಬ್ಬಾಳ ರೈಲು ನಿಲ್ದಾಣ, ಕೆಂಪಾಪುರದಲ್ಲಿ ನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಕಾರಿಡಾರ್–2ರಲ್ಲಿ 9 ನಿಲ್ದಾಣ ಪ್ರಸ್ತಾಪಿಸಲಾಗಿದ್ದು, ಹೊಸಹಳ್ಳಿ, ಕೆ.ಎಚ್.ಬಿ. ಕಾಲೊನಿ, ಕಾಮಾಕ್ಷಿಪಾಳ್ಯ, ಸುಮನಹಳ್ಳಿ ಕ್ರಾಸ್, ಸುಂಕದಕಟ್ಟೆ, ಹೇರೋಹಳ್ಳಿ, ಬ್ಯಾಡರಹಳ್ಳಿ, ಕಾಮತ್ ಲೇಔಟ್, ಕಡಬಗೆರೆಯಲ್ಲಿ ನಿರ್ಮಾಣವಾಗಲಿವೆ.

'ಮೆಟ್ರೊ ಯೋಜನೆಗಳು ಈಗ ಕೇಂದ್ರ ಸರ್ಕಾರದ 'ಗತಿಶಕ್ತಿ' ಯೋಜನೆಯಡಿ ಸೇರಿಕೊಂಡಿವೆ. ಮೆಟ್ರೊ ಮೂರನೇ ಹಂತದ ಯೋಜನೆಗೆ ಈ ಯೋಜನೆಯಡಿ ಹೆಚ್ಚಿನ ಅನುದಾನ ನೀಡಿದರೆ ಸಾಲದ ಹೊರೆ ತಗ್ಗಲಿದೆ. ಇದಕ್ಕೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುವ ವಿಶ್ವಾಸ ಇದೆ' ಎಂದು ಪಿ.ಸಿ. ಮೋಹನ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಎರಡು ಕಾರಿಡಾರ್‌ಗಳಲ್ಲಿ 44.65 ಕಿ.ಮೀ ಮೆಟ್ರೊ ರೈಲು ಮಾರ್ಗ
- ಕೇಂದ್ರದಿಂದ ಶೇ 20ರಷ್ಟು ಆರ್ಥಿಕ ನೆರವು
- ಕೇಂದ್ರದ 'ಗತಿಶಕ್ತಿ' ಯೋಜನೆ ವ್ಯಾಪ್ತಿಗೆ ಮೆಟ್ರೊ

ಹರಿಹರಪ್ರಿಯಗೆ 'ಶಿವರುದ್ರಪ್ಪ ರಾಷ್ಟ್ರೀಯ ಪುರಸ್ಕಾರ'



ಹರಿಹರಪ್ರಿಯ

ಬೆಂಗಳೂರು: ಪ್ರೊ.ಜಿ.ಎಸ್. ಶಿವರುದ್ರಪ್ಪ ಮತ್ತು ಪ್ರೊ.ಯು.ಆರ್. ಅನಂತಮೂರ್ತಿ ಸಾಂಸ್ಕೃತಿಕ ಜಗತಿ ಜಂಟಿ ಕ್ರಿಯಾ ಸಮಿತಿ ನೀಡುವ 'ರಾಷ್ಟ್ರಕವಿ ಪ್ರೊ.ಜಿ.ಎಸ್. ಶಿವರುದ್ರಪ್ಪ ರಾಷ್ಟ್ರೀಯ ಪುರಸ್ಕಾರ'ಕ್ಕೆ ಸಾಹಿತಿ ಪುಸ್ತಕಮನೆ ಹರಿಹರಪ್ರಿಯ ಆಯ್ಕೆಯಾಗಿದ್ದಾರೆ.

ಸಮಿತಿ ನೀಡುತ್ತಿರುವ ಪ್ರಥಮ ಪ್ರಶಸ್ತಿ ಇದಾಗಿದ್ದು, ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ. ಇದೇ 7ರಂದು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಬೆಳಿಗ್ಗೆ 10 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಾಹಿತಿ ಹಂ.ಪ. ನಾಗರಾಜಯ್ಯ ಸಮಾರಂಭ ಉದ್ಘಾಟಿಸಲಿದ್ದಾರೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಮಿತಿಯ ಕುಮಾರ್ ಕೆ.ಎಚ್ ತಿಳಿಸಿದ್ದಾರೆ.

ಸಮ್ಮತಿ ಶುಲ್ಕ ಕಡಿತಗೊಳಿಸಲು ಮನವಿ

ಬೆಂಗಳೂರು: 'ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ (ಎಂಎಸ್‌ಎಂಇ) ಉಳಿವಿಗಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ವಿಧಿಸಿರುವ ಸಮ್ಮತಿ ಶುಲ್ಕವನ್ನು ಕಡಿಮೆಗೊಳಿಸಬೇಕು' ಎಂದು ಕಾಸಿಯಾ ಅಧ್ಯಕ್ಷ ಕೆ.ಎನ್. ನರಸಿಂಹಮೂರ್ತಿ ಒತ್ತಾಯಿಸಿದರು.

ಕೆಎಸ್‌ಪಿಸಿಬಿಗೆ ಸಂಬಂಧಿಸಿ ಎಂಎಸ್‌ಎಂಇ ವಲಯದ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳಲು ಕಾಸಿಯಾ ಗುರುವಾರ ಆಯೋಜಿಸಿದ್ದ ಸಂವಾದ ಸಭೆಯಲ್ಲಿ, ಮಂಡಳಿಯ ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ ಮತ್ತು ಸದಸ್ಯ ಕಾರ್ಯದರ್ಶಿ ಶ್ರೀನಿವಾಸುಲು ಅವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

'ಕೆಎಸ್‌ಪಿಸಿಬಿ, ರಾಜ್ಯದ ಎಂಎಸ್‌ಎಂಇ ಕೈಗಾರಿಕೆಗಳ ನಡುವೆ ಕಾಸಿಯಾ ಸೇತುವೆಯಂತೆ ಕೆಲಸ ನಿರ್ವಹಿಸುತ್ತಿದೆ. ಕೈಗಾರಿಕೆಗಳು ಎದುರಿಸುತ್ತಿರುವ ತೊಂದರೆಗಳನ್ನು ಸಂಬಂಧಿತ ಅಧಿಕಾರಿಗಳೊಂದಿಗೆ ಚರ್ಚಿಸಲು ವೇದಿಕೆ ಕಲ್ಪಿಸುತ್ತಿದೆ. ಉದ್ಯಮಿಗಳಿಗೆ ಪರಿಸರ ನಿಯಂತ್ರಣ ಕಾನೂನುಗಳ ನಿಯಮ ಅರಿಯಲು ಇದು ಸಹಕಾರಿಯಾಗಲಿದೆ' ಎಂದರು.

'ಕೈಗಾರಿಕಾ ಪ್ರದೇಶಗಳಲ್ಲಿರುವ ಸಣ್ಣ ಘಟಕಗಳಿಂದ ಉತ್ಪತ್ತಿಯಾಗುವ ಅಪಾಯಕಾರಿ ತ್ಯಾಜ್ಯದ ಸಂಗ್ರಹ ಶುಲ್ಕವನ್ನು ಪ್ರಮಾಣಬದ್ಧವಾಗಿ ನಿಗದಿಪಡಿಸಬೇಕು. ಜೊತೆಗೆ ಸಂಗ್ರಹಣೆಕಾರರು ಈ ತ್ಯಾಜ್ಯವನ್ನು ತೆಗೆದುಕೊಳ್ಳಲು ನಿರಾಕರಿಸುತ್ತಿದ್ದಾರೆ' ಎಂದು ಕೈಗಾರಿಕೋದ್ಯಮಿಗಳ ತಮ್ಮ ಅಳಲನ್ನು ತೋಡಿಕೊಂಡರು.

ಎಂಎಸ್‌ಎಂ ಕೈಗಾರಿಕೆಗಳು ಮತ್ತು ಪರಿಸರಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಚರ್ಚಿಸಲಾಯಿತು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ, ಎಂಎಸ್‌ಎಂಇಗಳು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪಿಲ್ಲರ್ ಚೌಕಟ್ಟು ಕುಸಿತ: ಎಂಜಿನಿಯರ್ ವಿಚಾರಣೆ?

ಬೆಂಗಳೂರು: ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿಬಿದ್ದಿದ್ದ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದ ಹೈದರಾಬಾದ್ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ತಜ್ಞರು, 'ಘಟನೆಗೆ ಕಾರಣವೇನು?' ಎಂಬುದರ ಬಗ್ಗೆ ಗೋವಿಂದಪುರ ಠಾಣೆ ಪೊಲೀಸರಿಗೆ ವರದಿ ಸಲ್ಲಿಸಿದ್ದಾರೆ.

ಹೆಣ್ಣೂರು ಕ್ರಾಸ್ ಬಳಿ ಜ. 10ರಂದು ಸಂಭವಿಸಿದ್ದ ಅವಘಡದಲ್ಲಿ ತೇಜಸ್ವಿನಿ ಸುಲಾಖೆ (28) ಹಾಗೂ ಎರಡೂವರೆ ವರ್ಷದ ಮಗು ವಿಹಾನ್ ಮೃತಪಟ್ಟಿದ್ದರು. ಮೆಟ್ರೊ ನಿರ್ಮಾಣ ಗುತ್ತಿಗೆದಾರರು ಹಾಗೂ ಬಿಎಂಆರ್‌ಸಿಎಲ್ ಎಂಜಿನಿಯರ್‌ಗಳ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಜ.13ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಐಐಟಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಎಸ್. ಸುರಿಯಾ ಪ್ರಕಾಶ್ ಹಾಗೂ ಪ್ರಾಧ್ಯಾಪಕ ಡಾ. ಸುಬ್ರಮಣಿಯಂ ನೇತೃತ್ವದ ತಂಡ ಪರಿಶೀಲನಾ ವರದಿ ಸಲ್ಲಿಸಿದೆ.

'ಕಬ್ಬಿಣದ ಚೌಕಟ್ಟಿಗೆ ಆಸರೆ ಇಲ್ಲದಿದ್ದರಿಂದ ಅವಘಡ ಸಂಭವಿಸಿರುವುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'12 ಅಡಿಗಿಂತ ಹೆಚ್ಚು ಹಾಗೂ 12 ಮೀಟರ್ ಎತ್ತರದ ಫಿಲ್ಲರ್‌ಗಳನ್ನು ಹೇಗೆ ನಿರ್ಮಿಸಬೇಕು ? ಯಾವ ಹಂತಗಳನ್ನು ಪಾಲಿಸಬೇಕು ಎಂಬ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಅಂಶಗಳು ಪಾಲನೆಯಾಗಿವೆಯಾ? ಎಂಬ ಬಗ್ಗೆ ತನಿಖೆ ನಡೆದಿದೆ. ಗುತ್ತಿಗೆದಾರರು, ಬಿಎಂಆರ್‌ಸಿಎಲ್ ಎಂಜಿನಿಯರ್‌ಗಳ ನಿರ್ಲಕ್ಷ್ಯ ಕಾಣುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ಗುತ್ತಿಗೆದಾರರು ಹಾಗೂ ಬಿಎಂಆರ್ ಸಿಎಲ್ ಎಂಜಿನಿಯರ್‌ಗಳನ್ನು ಈಗಾಗಲೇ ಒಂದು ಬಾರಿ ವಿಚಾರಣೆ ಮಾಡಲಾಗಿದೆ. ಐಐಟಿ ತಜ್ಞರ ವರದಿ ಆಧರಿಸಿ ಮತ್ತಷ್ಟು ಪ್ರಶ್ನೆಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಸದ್ಯದಲ್ಲೇ ಎಂಜಿನಿಯರ್‌ಗಳನ್ನು ಪುನಃ ವಿಚಾರಣೆಗೆ ಕರೆಯಲಾಗುವುದು' ಎಂದು ಹೇಳಿವೆ.

'ಮೆಟ್ರೊ: 4ನೇ ಹಂತದಲ್ಲಿ ಬಿಡದಿ, ಮಾಗಡಿಗೂ ಸಂಪರ್ಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕನೇ ಹಂತದಲ್ಲಿ ಬಿಡದಿ, ಮಾಗಡಿ ಸೇರಿದಂತೆ ಬೆಂಗಳೂರಿನ ಹೊರವಲಯದ ಚಿಕ್ಕ ನಗರಗಳಿಗೂ ಮೆಟ್ರೊ ಸೌಲಭ್ಯ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಾಲ್ಕನೇ ಹಂತದ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ. ಅನುಮೋದನೆಗೆ ಕೇಂದ್ರಕ್ಕೆ ಕಳುಹಿಸಲಾಗುವುದು. ಮೂರನೇ ಹಂತದ ಕಾಮಗಾರಿಗಳಿಗೆ ₹ 23 ಸಾವಿರ ಕೋಟಿಗೆ ಅನುಮೋದನೆ ನೀಡಲಾಗಿದೆ. 2024ರ ವೇಳೆಗೆ ಎರಡನೇ ಹಂತದ ಎಲ್ಲ ಮಾರ್ಗಗಳಲ್ಲಿ ಮೆಟ್ರೊ ರೈಲುಗಳು ಸಂಚಾರ ಆರಂಭಿಸಲಿವೆ. 3ನೇ ಹಂತದ ಕಾಮಗಾರಿಗಳು ಶೀಘ್ರ ಆರಂಭವಾಗಲಿವೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರು ಮೆಟ್ರೊ ರೈಲು ನಿಗಮದ ಪ್ರಕಾರ, ಜೆ.ಪಿ. ನಗರ ನಾಲ್ಕನೇ ಹಂತದಿಂದ ಹೆಬ್ಬಾಳ ಸಂಪರ್ಕಿಸುವ 31 ಕಿ.ಮೀ ಮಾರ್ಗ, ಹೊಸಹಳ್ಳಿಯಿಂದ ಕಡಬಗೆರೆಗೆ 12 ಕಿಮೀ ಮಾರ್ಗಗಳಿಗೆ(ಹಂತ–3ಎ) ಡಿಪಿಆರ್ ಸಿದ್ಧವಾಗಿದ್ದು, ₹ 16,328 ಕೋಟಿ ವೆಚ್ಚದ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಬೇಕಿದೆ.

ಸರ್ಜಾಪುರದಿಂದ ಹೆಬ್ಬಾಳಕ್ಕೆ ಸಂಪರ್ಕ ಕಲ್ಪಿಸುವ 37 ಕಿ.ಮೀ. ಮಾರ್ಗವು (ಹಂತ –3ಬಿ) ಸುರಂಗ ಮಾರ್ಗದಲ್ಲಿ 17 ಕಿ.ಮೀ ಸಾಗುತ್ತದೆ. ಇಬ್ಲೂರು, ಕೋರಮಂಗಲ, ಕಾವೇರಿ ಥಿಯೇಟರ್ ಮೂಲಕ ಹಾದು ಹೋಗಲಿದೆ. ನಂತರ ಮಾಗಡಿ, ಬಿಡದಿ ಮಾರ್ಗದ ಯೋಜನೆ ಸಿದ್ಧವಾಗಲಿದೆ.

ಫೆ.6ರಂದು ಸಾರಿಗೆ ಅದಾಲತ್

ಬೆಂಗಳೂರು: ಕಸ್ತೂರಿ ನಗರದಲ್ಲಿನ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ (ಬೆಂಗಳೂರು ಪೂರ್ವ) ಫೆ. 6ರಂದು ಸಾರಿಗೆ ಅದಾಲತ್ ನಡೆಯಲಿದೆ.

ಹಿರಿಯ ಅಧಿಕಾರಿಗಳು ಅದಾಲಾತ್‌ನಲ್ಲಿ ಭಾಗವಹಿಸಲಿದ್ದು, ಸಾರಿಗೆ ಇಲಾಖೆಗೆ ಸಂಬಂಧಿಸಿದ ಸಾರ್ವಜನಿಕರ ಸಮಸ್ಯೆಗಳನ್ನು ಇತ್ಯರ್ಥಪಡಿಸಲಿದ್ದಾರೆ ಎಂದು ಬೆಂಗಳೂರು ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿ ಮಾಹಿತಿ ನೀಡಿದ್ದಾರೆ.



ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌ಅಶ್ವತ್ಥನಾರಾಯಣ ಅವರ 54ನೇ ಜನ್ಮದಿನವನ್ನು ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿಮಾನಿಗಳು, ಬಿಜೆಪಿ ಕಾರ್ಯಕರ್ತರು, ಮುಖಂಡರ ಸಮ್ಮುಖದಲ್ಲಿ ಗುರುವಾರ ಸಂಭ್ರಮದಿಂದ ಆಚರಿಸಲಾಯಿತು. ಯದುಗಿರಿ ಮಠದ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಅವರಿಂದ ಸಚಿವರು ಆಶೀರ್ವಾದ ಪಡೆದರು.

ಕೆಟ್ಟುನಿಂತ ವಾಹನ: ಡಂಪಿಂಗ್ ಯಾರ್ಡ್‌ಗೆ ಮನವಿ



ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿರುವ 'ಸ್ಕ್ರ್ಯಾಪ್ ವಾಹನಗಳು'

ಬೆಂಗಳೂರು: ಸರ್ಕಾರಿ ಇಲಾಖೆಗಳ ಆವರಣ ಸೇರಿದಂತೆ ನಗರದ ಹಲವು ರಸ್ತೆಗಳಲ್ಲಿ ಕೆಟ್ಟುಹೋಗಿ ವಾಹನಗಳು ಹಲವು ತಿಂಗಳಿಂದ ನಿಂತಿರುತ್ತವೆ. ಇವುಗಳಿಗೆ ಡಂಪಿಂಗ್ ಯಾರ್ಡ್‌ಗೆ ಪ್ರದೇಶ ಹಾಗೂ ಹಣವನ್ನು ಬಜೆಟ್‌ನಲ್ಲಿ ಹಂಚಿಕೆ ಮಾಡಬೇಕು ಎಂದು ಮುಖ್ಯಮಂತ್ರಿಯವರಿಗೆ 'ದ ವೀಲ್ಸ್' ಸಂಸ್ಥೆ ಮನವಿ ಸಲ್ಲಿಸಿದೆ.

'ನಗರದಲ್ಲಿ ಹಲವು ಕಡೆ ಪಾರ್ಕಿಂಗ್ ಸ್ಥಳಗಳಲ್ಲಿ ನೂರಾರು ವಾಹನಗಳು ಕೆಟ್ಟುನಿಂತಿರುತ್ತವೆ. ಇವುಗಳ ದುರಸ್ತಿಗೆ ಇಲಾಖೆಗಳು ಮುಂದಾಗದೆ, ಸ್ಕ್ರ್ಯಾಪ್ ಆಗಿವೆ. ಆದ್ದರಿಂದ ಇವುಗಳನ್ನು ಕಟ್ಟುನಿಟ್ಟಾಗಿ ಡಂಪಿಂಗ್ ಯಾರ್ಡ್‌ಗೆ ರವಾನೆ ಮಾಡಬೇಕು. ಈ ಹಿಂದೆ ಬಿಂಗಿಪುರದಲ್ಲಿ ಸ್ಕ್ರ್ಯಾಪ್ ಡಂಪಿಂಗ್ ಯಾರ್ಡ್ ಮಾಡಲಾಗಿತ್ತಾದರೂ, ಕೆಲವೇ ದಿನಗಳಲ್ಲಿ ಮುಚ್ಚಲಾಗಿದೆ' ಎಂದು ಮನವಿಪತ್ರದಲ್ಲಿ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟ್ ಎಸ್. ಅಮರೇಶ್ ಹೇಳಿದ್ದಾರೆ.

'ನಗರದಲ್ಲಿ ಕೆಟ್ಟುನಿಂತ ವಾಹನಗಳನ್ನು ಬಿಬಿಎಂಪಿ, ಪೊಲೀಸ್ ಇಲಾಖೆ ಸೇರಿದಂತೆ ಯಾರೂ ತೆರವು ಮಾಡುತ್ತಿಲ್ಲ. ಬೀದಿಗಳಲ್ಲಿ ಹಲವು ವಾಹನಗಳನ್ನು ಕಾಣುತ್ತಿದ್ದೇವೆ. ಹೀಗಾಗಿ, ಈ ಬಾರಿಯ ಬಜೆಟ್‌ನಲ್ಲಿ ಅಗತ್ಯ ಅನುದಾನ ನೀಡಿ, ವಾಹನಗಳನ್ನು ಡಂಪಿಂಗ್ ಯಾರ್ಡ್‌ಗೆ ಸಾಗಿಸಲು ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

ವೈಕುಂಠನಾರಾಯಣ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವ: ಬೆಳಿಗ್ಗೆ 8ಕ್ಕೆ ಮಹಾಧನ್ವಂತರಿ ಹೋಮ ಮತ್ತು ವ್ರತ, ಸಂಜೆ 6ಕ್ಕೆ ಭಕ್ತಿ ಸಂಗೀತ: ಸದಾಶಿವ ಭಟ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀದೇವಿ ಭೂದೇವಿ ವೈಕುಂಠ ನಾರಾಯಣ ಸ್ವಾಮಿ ದೇವಸ್ಥಾನ, ಶಾನ ಭೋಗ ನಾಗಪ್ಪ ಬಡಾವಣೆ, ಬಿಳೆಕಹಳ್ಳಿ

ಸ್ವಚ್ಛ ಭಾರತ ಅಭಿಯಾನಕ್ಕಾಗಿ ಘನತ್ಯಾಜ್ಯ ನಿರ್ವಹಣೆ: ಉದ್ಘಾಟನೆ: ಶ್ರೀನಿವಾಸುಲು, ಅಧ್ಯಕ್ಷತೆ: ಗಾಳಿಸ್ವಾಮಿ, ಎಚ್.ಕೆ. ರಾಮರಾಜು, ಬಿ.ಜಿ. ಪ್ರಸಾದ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 10

ಆರ್. ಗಿರೀಶ್ ಮತ್ತು ಕಾಜೋಲ್ ಭಾಟಿಯಾ ಅವರ ಚಿತ್ರಕಲೆ ಪ್ರದರ್ಶನ: ಸ್ಥಳ: ಹೋಟೆಲ್ ಕೊನಾರ್ಡ್, ಬೆಳಿಗ್ಗೆ 10

ವಿಶ್ವ ಕ್ಯಾನ್ಸರ್ ದಿನ: ಅತಿಥಿ: ಛವಿ ಮಿತ್ತಲ್, ಆಯೋಜನೆ: ಮಣಿಪಾಲ್ ಆಸ್ಪತ್ರೆ, ಸ್ಥಳ: ಸ್ಟೆರ್‌ಲಿಂಗ್ಸ್ ಮ್ಯಾಕ್ ಹೋಟೆಲ್, ಹಳೆಯ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಳಿಗ್ಗೆ 11

ಎಚ್.ಎನ್. ನಾಗಮೋಹನ್ ದಾಸ್ ಅವರ 'ನ್ಯಾಯಾಂಗ ಒಳನೋಟ' ಪುಸ್ತಕ ಬಿಡುಗಡೆ: ನ್ಯಾ. ಬಿ. ವೀರಪ್ಪ, ಅಧ್ಯಕ್ಷತೆ: ಶಿವರಾಜ್ ವಿ. ಪಾಟೀಲ್, ಉಪಸ್ಥಿತಿ: ಎಚ್.ಎನ್. ನಾಗಮೋಹನ್ ದಾಸ್, ಅತಿಥಿ: ಎ.ಪಿ. ರಂಗನಾಥ್, ಪ್ರಸ್ತಾವನೆ ನುಡಿ: ಬಿ. ರಾಜಶೇಖರಮೂರ್ತಿ, ಆಯೋಜನೆ: ಜನ ಪ್ರಕಾಶನ, ಎಚ್.ಎನ್. ನಾಗಮೋಹನ್ ದಾಸ್, ಸ್ಥಳ: ಎನ್.ಜಿ.ಒ ಸಭಾಂಗಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಸಂಜೆ 4.30.

'ರುದ್ರವೀಣಾ ಬಸಂತೋತ್ಸವ' ಸಂಗೀತ ಕಾರ್ಯಕ್ರಮ: ಬಹಾವುದ್ದೀನ್ ದಾಗರ್, ಜ್ಯೋತಿ ಹೆಗಡೆ, ಸುಬ್ರಹ್ಮಣ್ಯ ಹೆಗಡೆ, ಪಂಕಜ್ ಮಹಾರಾಜ್, ಸಿಮ್ರನ್‌ಪ್ರೀತ್ ಸಿಂಗ್, ಮೃಣಾಲಿನಿ ದೇಸಾಯಿ, ಆಯೋಜನೆ: ಅನಂ ಪ್ರೇಮ್, ಹಿಮಾಲಯನ್ ಯೂನಿವರ್ಸಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಪ್ರವಚನ ವಾಹಿನಿ ಕಾರ್ಯಕ್ರಮ: 'ಆಳ್ವಾರ್‌ಗಳ ಕೃಷ್ಣಾನುಭವ' ಉಪನ್ಯಾಸ: ಯಮುನಾ ರಾಮಪ್ರಿಯ, ಆಯೋಜನೆ ಮತ್ತು ಸ್ಥಳ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಶ್ರೀಮದ್ಭಾಗವತ ತಾತ್ಪರ್ಯ ನಿರ್ಣಯ (ಪ್ರವಚನ): ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30

ಬೈಕ್ ಅಪಘಾತ ಯುವತಿ ಸಾವು

ಪ್ರಜಾವಾಣಿ ವಾರ್ತೆ



ಶುಭಶ್ರೀ

ಬೆಂಗಳೂರು: ಹೊಸೂರು ರಸ್ತೆಯ ಗಾರ್ವೆಭಾವಿಪಾಳ್ಯದ ಬಳಿ ಬುಧವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ಕೆಟಿಎಂ ಬೈಕ್ ಹಿಂಬದಿ ಕುಳಿತಿದ್ದ ಶುಭಶ್ರೀ (28) ಎಂಬುವವರು ಮೃತಪಟ್ಟಿದ್ದಾರೆ.

'ಕೇರಳದ ಶುಭಶ್ರೀ, ಕಂಪನಿಯೊಂದರ ಮಾರುಕಟ್ಟೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಹೈದರಾಬಾದ್‌ನ ವಿಮಲ್ ಚಂದ್ರ ಮೋಹನ್ (30) ಜೊತೆಗೆ ಹೊರಟಿದ್ದಾಗ ಅಪಘಾತ ಸಂಭವಿಸಿದೆ' ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

'ಸಿಲ್ಕ್ ಬೋರ್ಡ್ ಕಡೆಯಿಂದ ಎಲೆಕ್ಟ್ರಾನಿಕ್ ಸಿಟಿ ಕಡೆಗೆ ತೆರಳುವಾಗ ರಾಯಲ್ ಎನ್‌ಫೀಲ್ಡ್ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ರಸ್ತೆಗೆ ಬಿದ್ದಿದ್ದ ಶುಭಶ್ರೀ ಅವರ ತಲೆಗೆ ಪೆಟ್ಟು ಬಿದ್ದಿತ್ತು. ಅವರು ಪ್ರಜ್ಞೆ ತಪ್ಪಿದ್ದರು. ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತಪಾಸಣೆ ನಡೆಸಿದ್ದ ವೈದ್ಯರು, ಶುಭಶ್ರೀ ಮೃತಪಟ್ಟಿರುವುದಾಗಿ ಹೇಳಿದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಅತಿ ವೇಗ, ನಿರ್ಲಕ್ಷ್ಯದಿಂದ ಬೈಕ್ ಚಾಲನೆ ಮಾಡಿರುವುದೇ ಅಪಘಾತಕ್ಕೆ ಕಾರಣ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಮಲ್ ಸಹ ಗಾಯಗೊಂಡಿದ್ದಾರೆ. ಹೆಲ್ಮೆಟ್ ಧರಿಸಿದ್ದರೂ ಅಥವಾ ಇಲ್ಲವೋ ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ಹೇಳಿದರು.

ಕಿರುಕುಳ: ದಂತವೈದ್ಯೆ ಆತ್ಮಹತ್ಯೆ ವೈದ್ಯನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಅಪರಾಧ ಸುದ್ದಿಗಳು

ಬೆಂಗಳೂರು: ಎಂ.ಎಸ್.ರಾಮಯ್ಯ ಆಸ್ಪತ್ರೆಯ ದಂತ ವೈದ್ಯೆ ಡಾ. ಪ್ರಿಯಾನ್ಸಿ ತ್ರಿಪಾಠಿ (28) ಆತ್ಮಹತ್ಯೆ ಮಾಡಿಕೊಂಡಿದ್ದು, ಅವರಿಗೆ ಕಿರುಕುಳ ನೀಡಿದ್ದ ಆರೋಪದಡಿ ಸಹೋದ್ಯೋಗಿ ವೈದ್ಯ ಡಾ. ಸುಮಿತ್ ವಿರುದ್ಧ ಸಂಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಉತ್ತರ ಪ್ರದೇಶದ ಪ್ರಿಯಾನ್ಸಿ, 2022ರ ಡಿಸೆಂಬರ್‌ನಿಂದ ರಾಮಯ್ಯ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು. ಸ್ಥಳೀಯ ಏಕಾಂಗಿ ಬಡಾವಣೆಯಲ್ಲಿ ವಾಸವಿದ್ದರು. ಜ.24ರಂದು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಂದೆ ಸುಶೀಲ್ ದೂರು ನೀಡಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ವರ್ಷದಿಂದ ಕಿರುಕುಳ, ನೊಂದಿದ್ದ ಮಗಳು: 'ಕಾನ್ಪುರದಲ್ಲಿ ಬಿ.ಡಿ.ಎಸ್. ಮುಗಿಸಿದ್ದ ಮಗಳು, 2020ರಲ್ಲಿ ಬೆಂಗಳೂರಿಗೆ ಬಂದು ರಾಮಯ್ಯ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಪೂರ್ಣಗೊಳಿಸಿದ್ದಳು. ಬಳಿಕ ರಾಮಯ್ಯ ಆಸ್ಪತ್ರೆಯಲ್ಲೇ ಕೆಲಸಕ್ಕೆ ಸೇರಿದ್ದಳು' ಎಂದು ತಂದೆ ದೂರಿನಲ್ಲಿ ತಿಳಿಸಿದ್ದಾರೆ.

'ಮಗಳಿಗೆ ಒಂದು ವರ್ಷದಿಂದ ಆರೋಪಿ ಸುಮಿತ್ ಮಾನಸಿಕ, ದೈಹಿಕವಾಗಿ ಕಿರುಕುಳ ನೀಡುತ್ತಿದ್ದ. ಹಣ ಕೊಡುವಂತೆ ಹಾಗೂ ಮದುವೆಯಾಗುವಂತೆ ಪೀಡಿಸುತ್ತಿದ್ದ. ಜೊತೆಗೆ, ಮಗಳ ಬಗ್ಗೆ ಕಾಲೇಜಿನಲ್ಲಿ ಕೆಟ್ಟದಾಗಿ ಸುದ್ದಿ ಹಬ್ಬಿಸಿದ್ದ. ಆರೋಪಿ ವರ್ತನೆಯಿಂದ ಬೇಸತ್ತಿದ್ದ ಮಗಳು, ನಮಗೆ ಕರೆ ಮಾಡಿ ಅಳಲು ತೋಡಿಕೊಂಡಿದ್ದಳು. ನ್ಯಾಯ ಕೊಡಿಸುವಂತೆ ಕೋರಿದ್ದಳು. ಸುಮಿತ್‌ಗೆ ಕರೆ ಮಾಡಿ ಮಗಳ ತಂಟೆಗೆ ಹೋಗದಂತೆ ಎಚ್ಚರಿಕೆ ಸಹ ನೀಡಿದ್ದೆ' ಎಂಬ ಸಂಗತಿಯೂ ದೂರಿನಲ್ಲಿದೆ.

'ತ್ರಿಚಿಗೆ ಆರೋಪಿ ಕಿರುಕುಳ ಮಿತಿಮೀರಿತ್ತು. ಜ. 23ರಂದು ನನಗೆ ಕರೆ ಮಾಡಿದ್ದ ಮಗಳು, 'ಸುಮಿತ್ ತುಂಬಾ ಕಿರುಕುಳ ನೀಡುತ್ತಿದ್ದಾನೆ. ಬೆಂಗಳೂರಿಗೆ ಬಂದು ನನ್ನನ್ನು ಕರೆದುಕೊಂಡು ಹೋಗಿ' ಎಂದು ಕಣ್ಣೀರಿಟ್ಟಿದ್ದಳು. ಸುಮಿತ್ ತಂದೆಗೆ ಕರೆ ಮಾಡಿ, ಎಚ್ಚರಿಕೆ ನೀಡುವಂತೆ ಹೇಳಿದ್ದೆ. ಜ. 24 ರಂದು ಬೆಳಿಗ್ಗೆ ಮಗಳಿಗೆ ಕರೆ ಮಾಡಿದಾಗ, ಸ್ವೀಕರಿಸಲಿಲ್ಲ. ಮನೆ ಮಾಲೀಕರಿಗೆ ಕರೆ ಮಾಡಿ, ಮಗಳ ಬಳಿ ಹೋಗುವಂತೆ ತಿಳಿಸಿದ್ದೆ. ಅವರು ಮನೆ ಬಳಿ ಹೋದಾಗಲೇ ಆತ್ಮಹತ್ಯೆ ಸಂಗತಿ ಗೊತ್ತಾಯಿತು' ಎಂದು ವಿವರಿಸಲಾಗಿದೆ.

'ಆರೋಪಿಯು ಮಗಳಿಗೆ ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡುತ್ತಿದ್ದ. ಮಗಳ ಸಾವಿಗೆ ಈತನೇ ಕಾರಣ' ಎಂದೂ ಆರೋಪಿಸಿದ್ದಾರೆ.

ಡಂಬಲ್ಸ್‌ನಿಂದ ಹೊಡೆದು ಪತ್ನಿ ಕೊಲೆ

ಬೆಂಗಳೂರು: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಲೀಡಿಯಾ (44) ಎಂಬುವರ ಕೊಲೆ ಆರೋಪದಡಿ, ಅವರ ಪತಿ ಮಾರಿಸ್ (46) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಹೊಯ್ಸಳ ಸ್ಟ್ರೀಟ್‌ನ 4ನೇ ಅಡ್ಡರಸ್ತೆಯ ನಿವಾಸಿ ಮಾರಿಸ್, 18 ವರ್ಷದ ಹಿಂದೆ ಲೀಡಿಯಾ ಅವರನ್ನು ಮದುವೆಯಾಗಿದ್ದರು. ದಂಪತಿಗೆ ಮೂವರು ಮಕ್ಕಳಿದ್ದಾರೆ. 'ಆರೋಪಿ ಮಾರಿಸ್, ಪತ್ನಿ ಜೊತೆ ಸಣ್ಣಪುಟ್ಟ ವಿಷಯಕ್ಕೂ ಜಗಳ ಮಾಡಿ ಹಲ್ಲೆ ಮಾಡುತ್ತಿದ್ದ. ಗುರುವಾರವು ಜಗಳ ಶುರುವಾಗಿತ್ತು. ಸಿಟ್ಟಾದ ಆತ, ಡಂಬಲ್ಸ್‌ನಿಂದ ತಲೆಗೆ ಹೊಡೆದಿದ್ದ' ಎಂದು ಪೊಲೀಸರು ಹೇಳಿದರು.

'ಡಂಬಲ್ಸ್‌ನಿಂದ ಹೊಡೆಯುತ್ತಿದ್ದಂತೆ ಲೀಡಿಯಾ ಕುಸಿದು ಬಿದ್ದಿದ್ದು, ಆಕೆ ಸಾಯುವವರೆಗೂ ಹಲವು ಬಾರಿ ಡಂಬಲ್ಸ್‌ನಿಂದ ತಲೆಗೆ ಹೊಡೆದಿದ್ದ. ಕೊಲೆ ಬಗ್ಗೆ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಪ್ರಕರಣ ದಾಖಲಾದ ಕೆಲ ಗಂಟೆಗಳಲ್ಲೇ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಹೇಳಿದರು.

ಪತ್ನಿ ಮುಖ ತೋರಿಸದಿದ್ದಕ್ಕೆ ಇರಿತ

ಬೆಂಗಳೂರು: ವಿಡಿಯೊ ಕರೆ ಮಾಡಿದ್ದ ವೇಳೆ ಪತ್ನಿಯ ಮುಖ ತೋರಿಸ-ಲಿಲ್ಲವೆಂಬ ಕಾರಣಕ್ಕೆ ಪತಿಗೆ ಕತ್ತರಿಯಿಂದ ಇರಿಯಲಾಗಿದ್ದು, ಆರೋಪಿ ಸುರೇಶ್ ಎಂಬುವವರನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಸುರೇಶ್, ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಅದೇ ಅಂಗಡಿಯಲ್ಲಿ ಕೆಲಸಕ್ಕಿದ್ದ ರಾಜೇಶ್ ಅವರ ಹೊಟ್ಟೆಗೆ ಇರಿದಿದ್ದ. ರಾಜೇಶ್ ಈ ಕೃತ್ಯದ ಬಗ್ಗೆ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ರಾಜೇಶ್ ಜ. 29ರಂದು ತಮ್ಮ ಪತ್ನಿಗೆ ವಿಡಿಯೊ ಕರೆ ಮಾಡಿ ಮಾತ-ನಾಡುತ್ತಿದ್ದರು. ಆಗ ಆರೋಪಿ ಸುರೇಶ್, ರಾಜೇಶ್ ಬಳಿ ತೆರಳಿ 'ನಿನ್ನ ಪತ್ನಿಯನ್ನು ನೋಡುತ್ತೇನೆ. ಮುಖ ತೋರಿಸು' ಎಂದಿದ್ದ. ಕೋಪಗೊಂಡ ರಾಜೇಶ್, ಆರೋಪಿಗೆ ಬೈದಿದ್ದರು. ಇಬ್ಬರ ನಡುವೆ ಮಾತಿನ ಚಕಮಕಿ ಉಂಟಾಗಿತ್ತು. ಸಿಟ್ಟಾಗಿದ್ದ ಸುರೇಶ್, ಬಟ್ಟೆ ಕತ್ತರಿಸುವ ಕತ್ತರಿಯಿಂದ ರಾಜೇಶ್ ಅವರ ಹೊಟ್ಟೆಯ ಎಡಭಾಗಕ್ಕೆ ಚುಚ್ಚಿದ್ದ' ಎಂದು ತಿಳಿಸಿದರು.

ಸಾಲಬಾಧೆ: 7 ಜನ ಆತ್ಮಹತ್ಯೆ ಯತ್ನ, ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ದೊಡ್ಡಮಣ್ಣುಗುಡ್ಡೆ ಗ್ರಾಮದಲ್ಲಿ ಸಾಲಬಾಧೆಯಿಂದ ಮೂವರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಏಳು ಮಂದಿ ಗುರುವಾರ ರಾತ್ರಿ ಆತ್ಮಹತ್ಯೆಗೆ ಯತ್ನಿಸಿದ್ದು, ಇವರ ಪೈಕಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ಮಂಗಳಮ್ಮ (28) ಮೃತ ಮಹಿಳೆ. ಮೃತರ ಪತಿ ರಾಜು, ತಾಯಿ ಸೊಲ್ಲಾಪುರದಮ್ಮ, ಸಹೋದರಿ ಸವಿತಾ, ಮಕ್ಕಳಾದ ಆಕಾಶ್, ಕೃಷ್ಣ, ದರ್ಶಿನಿ ಎಂಬುವರು ಅಸ್ವಸ್ಥಗೊಂಡಿದ್ದು, ಮಂಡ್ಯದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಎಲ್ಲರೂ ಗುರುವಾರ ರಾತ್ರಿ ಊಟದಲ್ಲಿ ವಿಷ ಬೆರೆಸಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಾಹಿತಿ ಸ್ಪಷ್ಟತೆಗಾಗಿ ವಿಚಾರಣೆಗೆ ಹಾಜರು'

ಬೆಂಗಳೂರು: 'ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆಯಲ್ಲಿ ದಾಖಲಾಗಿರುವ ಡ್ರಗ್ಸ್ ಪ್ರಕರಣದ ಆರೋಪಿಗಳಿಗೂ ನನಗೂ ಸಂಬಂಧವಿಲ್ಲ. ಪೊಲೀಸರ ವಿಚಾರಣೆಗೆ ಹಾಜರಾಗಿ, ಸ್ಪಷ್ಟೀಕರಣ ಸಹ ನೀಡಿದ್ದೇನೆ' ಎಂದು ಮಾಜಿ ಕಾರ್ಪೊರೇಟರ್ ಅಬ್ದುಲ್ ರಕೀಬ್ ಜಾಕೀರ್ ತಿಳಿಸಿದ್ದಾರೆ.

ಡ್ರಗ್ಸ್ ಮಾರಾಟ ಪ್ರಕರಣದಲ್ಲಿ 2022ರ ನ. 8ರಂದು ಸಿಕ್ಕಿಬಿದ್ದಿದ್ದ ನೈಜೀರಿಯಾದ ಡೇವಿಡ್ ಒಕ್ನೊಕೊವಾ (31) ಜೊತೆ ಒಡನಾಟ ಹೊಂದಿದ್ದ ಆರೋಪದಡಿ ವಿಚಾರಣೆಗೆ ಬರುವಂತೆ ಜಾಕೀರ್ ಅವರಿಗೆ ಪೊಲೀಸರು ನೋಟಿಸ್ ನೀಡಿದ್ದರು.

ಸುದ್ದಿ 2 ನಿಮಿಷ

ಯಶಸ್ವಿನಿ: ಒಂದು ಸಾವಿರಕ್ಕೂ ಹೆಚ್ಚು ಸದಸ್ಯರಿಗೆ ಚಿಕಿತ್ಸೆ

ಬೆಂಗಳೂರು: 'ಯಶಸ್ವಿನಿ ಯೋಜನೆ ಅಡಿಯಲ್ಲಿ ಜನವರಿ ತಿಂಗಳಲ್ಲೇ ಒಂದು ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ಚಿಕಿತ್ಸೆ ಪಡೆದಿದ್ದಾರೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

'27 ಜಿಲ್ಲೆಗಳಲ್ಲಿನ 127 ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಈ ಫಲಾನುಭವಿಗಳು ಚಿಕಿತ್ಸೆ ಪಡೆದಿದ್ದಾರೆ. ಜನವರಿ ಅಂತ್ಯದವರೆಗೆ 30 ಲಕ್ಷ ಮಂದಿಯನ್ನು ಯಶಸ್ವಿನಿ ಯೋಜನೆ ಅಡಿಯಲ್ಲಿ ಸದಸ್ಯರಾಗಿ ನೋಂದಾಯಿಸುವ ಗುರಿ ನಿಗದಿಪಡಿಸಲಾಗಿತ್ತು. ಆದರೆ, 33.10 ಲಕ್ಷ ಮಂದಿ ನೋಂದಾಯಿಸಿಕೊಂಡಿದ್ದು, ಗುರಿ ಮೀರಿ ಸಾಧನೆ ಮಾಡಲಾಗಿದೆ' ಎಂದರು.

'ಯೋಜನೆ ಅಡಿ ಈವರೆಗೆ ಪ್ರತಿಷ್ಠಿತ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು, ಸರ್ಕಾರಿ ಜಿಲ್ಲಾ ಆಸ್ಪತ್ರೆಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು, ಖಾಸಗಿ ಆಸ್ಪತ್ರೆಗಳು ಸೇರಿ 474 ನೆಟ್‌ವರ್ಕ್ ಆಸ್ಪತ್ರೆಗಳು ನೋಂದಾಯಿಸಿಕೊಂಡಿವೆ. ಜನವರಿ 1ರಿಂದಲೇ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪ್ರಾರಂಭಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.



'ಹೃದಯ ಸಂಬಂಧಿ ಕಾಯಿಲೆ, ಕಿವಿ, ಮೂಗು, ಗಂಟಲು, ನರ, ಮೂಳೆಗೆ ಸಂಬಂಧಿತ ಕಾಯಿಲೆಗಳು ಸೇರಿ ಹಲವು ರೋಗಗಳಿಗೆ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಸದಸ್ಯರು ಯೂನಿಕ್ ಐ.ಡಿ ಸಂಖ್ಯೆಯುಳ್ಳ ಪ್ಲಾಸ್ಟಿಕ್ ಕಾರ್ಡ್ ಹಾಜರುಪಡಿಸಿ 1,650 ಚಿಕಿತ್ಸೆಗಳನ್ನು ನಗದು ರಹಿತವಾಗಿ ಪಡೆಯಬಹುದಾಗಿದೆ' ಎಂದು ತಿಳಿಸಿದ್ದಾರೆ.

ಆಂಧ್ರಪ್ರದೇಶಕ್ಕೆ ಸಾರಿಗೆ ಬಸ್ ಕಾರ್ಯಾಚರಣೆಗೆ ಒಪ್ಪಂದ

ಬೆಂಗಳೂರು: ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ನಡುವೆ ಬಸ್‌ಗಳ ಕಾರ್ಯಾಚರಣೆಗೆ ಕೆಎಸ್‌ಆರ್‌ಟಿಸಿ ಮತ್ತು ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಡುವೆ ಮತ್ತೊಂದು ಒಪ್ಪಂದ ಏರ್ಪಟ್ಟಿದೆ.

'ಎರಡೂ ರಾಜ್ಯಗಳ ನಡುವೆ ಸದ್ಯ 8 ಅಂತರರಾಜ್ಯ ಒಪ್ಪಂದಗಳು ನಡೆದಿದ್ದು, ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ಪ್ರಯಾಣಿಕರಿಗೆ ಇನ್ನಷ್ಟು ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸಲು ವಿಜಯವಾಡದಲ್ಲಿ 9ನೇ ಒಪ್ಪಂದವನ್ನು ಗುರುವಾರ ಮಾಡಿಕೊಳ್ಳಲಾಯಿತು' ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಮತ್ತು ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ದ್ವಾರಕಾ ತಿರುಮಲ ರಾವ್ ಅವರು ಒಡಂಬಡಿಕೆಗೆ ಸಹಿ ಹಾಕಿದರು.

ಪ್ರತಿಭಟನನಿರತ ಸ್ವಾಮೀಜಿಯವರ ಮೂರು ಮೊಬೈಲ್‌ಗಳ ಕಳ್ಳತನ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿ-ಷ್ಟಾವಧಿ ಪ್ರತಿಭಟನೆ ನಡೆಸುತ್ತಿರುವ ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರ ಮೂರು ಮೊಬೈಲ್‌ಗಳು ಕಳುವಾಗಿವೆ. ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ವಾಮೀಜಿಯವರ ಆಪ್ತ ಸಹಾಯಕ ವಿಶ್ವನಾಥ್ ಅವರು ಮೊಬೈಲ್ ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸ-ಲಾಗಿದೆ' ಎಂದು ಪೊಲೀಸರು ಹೇಳಿದರು.

'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಸ್ವಾಮೀಜಿಯವರು ಜ. 14ರಿಂದ ಪ್ರತಿಭಟನೆ ಆರಂಭಿಸಿದ್ದಾರೆ. ಸ್ವಾಮೀಜಿ ಬಳಿ ಸ್ಯಾಮ್‌ಸಂಗ್ ಕಂಪನಿಯ ಮೂರು ಮೊಬೈಲ್‌ಗಳಿದ್ದವು. ಅವುಗಳನ್ನು ಆಗಾಗ ವಿಶ್ವನಾಥ್ ಬಳಿ ಇಟ್ಟುಕೊಳ್ಳಲು ಕೊಡುತ್ತಿದ್ದರು.'

'ಜ. 30ರಂದು ಸಂಜೆ ಉದ್ಯಾನದಲ್ಲಿ ವಾಯುವಿಹಾರಕ್ಕೆ ಹೋಗಿದ್ದ ಸ್ವಾಮೀಜಿ, ಮೂರು ಮೊಬೈಲ್‌ಗಳನ್ನು ವಿಶ್ವನಾಥ್ ಬಳಿ ನೀಡಿದ್ದರು. ಅದೇ ಮೊಬೈಲ್‌ಗಳನ್ನು ವಿಶ್ವನಾಥ್, ಕಾರಿನಲ್ಲಿ ಇಟ್ಟಿದ್ದು, ಬಾಗಿಲು ಲಾಕ್ ಮಾಡುವುದನ್ನು ಮರೆತಿದ್ದರು. ಇದನ್ನು ಗಮನಿಸಿ ₹ 30 ಸಾವಿರ ಮೌಲ್ಯದ ಮೊಬೈಲ್‌ಗಳನ್ನು ಕಳುವು ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಹಲ್ಲೆ: ಟಿಕಾಯತ್ ವಿರುದ್ಧ ಪ್ರಕರಣ

ಬೆಂಗಳೂರು: ನಗರದ ಗಾಂಧಿಭವನದಲ್ಲಿ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ ಅವರ ಮೇಲೆ ಮಸಿ ಎರಚಿ ಹಲ್ಲೆ ಮಾಡಿದ್ದ ಪ್ರಕರಣ ಹೊಸ ತಿರುವು ಪಡೆದುಕೊಂಡಿದ್ದು, ಇದೀಗ ಟಿಕಾಯತ್ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ.

'ಟಿಕಾಯತ್ ಮೇಲೆ ಮಸಿ ಎರಚಿ ಹಲ್ಲೆ ಮಾಡಿದ್ದ ಪ್ರಕರಣದಲ್ಲಿ ಬಂಧಿಸಲಾಗಿದ್ದ ಆರೋಪಿ ಎಚ್.ಆರ್. ಶಿವಕುಮಾರ್, ಘಟನೆ ಬಗ್ಗೆ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಸೂಚಿಸಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಿವಕುಮಾರ್ ಅವರಿಂದ ದೂರು ಸ್ವೀಕರಿಸಲಾಗಿದೆ. ಆರೋಪಿಗಳಾದ ರಾಕೇಶ್ ಟಿಕಾಯತ್, ಯುದ್ಧವೀರ ಸಿಂಗ್, ಬಿ. ಅನುಸೂಯಮ್ಮ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿ-ಸಿಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಕೇಳಿಬಂದಿದ್ದ ಭ್ರಷ್ಟಾಚಾರ ಆರೋಪದ ಬಗ್ಗೆ ಚರ್ಚಿಸಲೆಂದು 'ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ' ನೇತೃತ್ವದಲ್ಲಿ ರೈತ ಮುಖಂಡರು 2022ರ ಮೇ 30ರಂದು 'ಆತ್ಮಾವಲೋಕನ ಹಾಗೂ ಸ್ಪಷ್ಟೀಕರಣ ಸಭೆ ನಡೆಸಿದ್ದರು. ರಾಕೇಶ್ ಟಿಕಾಯತ್ ಹಾಗೂ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.'

'ಆರೋಪಿ ಅನುಸೂಯಮ್ಮ ತೆಲುಗು ಭಾಷೆಯಲ್ಲಿ ಮಾತನಾಡಿದ್ದರು. ಅದನ್ನು ಪ್ರಶ್ನಿಸಿದ್ದ ದೂರುದಾರ ಶಿವಕುಮಾರ್, ಕನ್ನಡದಲ್ಲಿ ಮಾತನಾಡಲು ಒತ್ತಾಯಿ-ಸಿದ್ದರು. ಅಷ್ಟಾದರೂ ಅನುಸೂಯಮ್ಮ ತೆಲುಗಿನಲ್ಲಿ ಭಾಷಣ ಮುಂದುವರಿಸಿ-ದ್ದರು. ಆಗ ದೂರುದಾರ, ವೇದಿಕೆ ಏರಿ ಮೈಕ್ ಕಸಿಯಲು ಮುಂದಾಗಿದ್ದರು. ತಡೆದಿದ್ದ ಆರೋಪಿಗಳು, ಕುರ್ಚಿಗಳನ್ನು ಎತ್ತಿ ಹೊಡೆದಿದ್ದರು. ಇದರಿಂದ ಗಾಯ-ಗಳಾಗಿದ್ದವು ಎಂದು ದೂರುದಾರರು ಆರೋಪಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

₹76 ಲಕ್ಷ ಅನುದಾನ ದುರ್ಬಳಕೆ: ಬಂಧನ

ರಾಮನಗರ: ನಕಲಿ ದಾಖಲೆ ಸೃಷ್ಟಿಸಿ ₹76.57 ಲಕ್ಷ ವಂಚಿಸಿದ ಆರೋಪದಡಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಡಿ ಗ್ರೂಪ್ ನೌಕರ ಮಂಜುನಾಥ (33) ಎಂಬುವರನ್ನು ಇಲ್ಲಿನ ಸೈಬರ್ ಕ್ರೈಂ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಇಲಾಖೆ ಅಧಿಕಾರಿಗಳ ಡಿಎಸ್‌ಸಿ ಕೀ ಬಳಸಿ ಆರೋಪಿ ದಾಖಲಾತಿ ಸೃಷ್ಟಿಸಿ, ನಕಲಿ ಸಹಿ ಮಾಡಿ ಹಣ ಲಪಟಾಯಿ-ಸಿದ್ದಾರೆ ಎಂದು ಆರೋಪಿಸಲಾಗಿದೆ. ರಾಮನಗರದ ಅವ್ವೇರಹಳ್ಳಿಯ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯದಲ್ಲಿ ಅಡುಗೆಯವರಾಗಿದ್ದ ಆರೋಪಿ ಬಿಸಿಎಂ ಇಲಾಖೆಗೆ ನಿಯೋಜನೆಗೊಂಡಿದ್ದರು.

15 ದಿನದಲ್ಲಿ ಭರ್ತಿಗೆ ಕ್ರಮ • ಆಸುಪಾಸಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟ ವೃದ್ಧಿ ನಿರೀಕ್ಷೆ

ನಾಯಂಡಹಳ್ಳಿ ಕೆರೆಗೆ ಸಂಸ್ಕರಿಸಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಚರಂಡಿ ನೀರನ್ನು 3ನೇ ಹಂತದಲ್ಲಿ ಸಂಸ್ಕರಿಸಿ ಬಿಡಬ್ಲ್ಯುಎಸ್‌ಎಸ್‌ಬಿ ನಗರದಲ್ಲಿ ಪ್ರಥಮ ಬಾರಿಗೆ ಕೆರೆಗೆ ಹರಿಸಿದೆ. ಅಭಿವೃದ್ಧಿಯ ಅಂತಿಮ ಹಂತದಲ್ಲಿರುವ ನಾಯಂಡಹಳ್ಳಿ ಕೆರೆಗೆ ಗುರುವಾರದಿಂದ ನೀರು ಹರಿಯುತ್ತಿದೆ.

ವಸತಿ ಸಚಿವ ವಿ. ಸೋಮಣ್ಣ ಅವರು ನಾಯಂಡಹಳ್ಳಿ ಕೆರೆಗೆ ಸಂಸ್ಕರಿಸಿದ ನೀರು ಹರಿಸಲು ಚಾಲನೆ ನೀಡಿದರು.

'120 ದಶಲಕ್ಷ ಲೀಟರ್ ನೀರನ್ನು ನಾಯಂಡಹಳ್ಳಿ ಕೆರೆಗೆ ಹರಿಸಲು ಉದ್ದೇಶಿಸಲಾಗಿದೆ. ಈ ಕೆರೆಗೆ ಕಾಯಕಲ್ಪ ನೀಡಲಾಗುತ್ತಿದೆ. ಸ್ಯಾಂಕಿ ಕೆರೆ ಹೊರತುಪಡಿಸಿ ಬೆಂಗಳೂರಿನಲ್ಲಿರುವ ವಿಶಾಲವಾದ ಮತ್ತೊಂದು ಕೆರೆ ಇದಾಗಿದ್ದು, 15 ಎಕರೆ ವಿಸ್ತೀರ್ಣದಲ್ಲಿದೆ. ಮಾರ್ಚ್ ಮೊದಲ ವಾರ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳಲಿದೆ' ಎಂದು ಸಚಿವರು ತಿಳಿಸಿದರು.

'ಜಲಮಂಡಳಿ ವತಿಯಿಂದ ಶುದ್ಧೀಕರಿಸಿದ ನೀರನ್ನು ಬೆಂಗಳೂರಿನ ಕೆರೆಯೊಂದಕ್ಕೆ ಮೊದಲ ಬಾರಿಗೆ ಹರಿಸಲಾಗುತ್ತಿದೆ. 15 ದಿನಗಳಲ್ಲಿ ಕೆರೆ ಭರ್ತಿಯಾಗಲಿದೆ. ಇದರಿಂದ ಸುತ್ತಮುತ್ತಲ ಪ್ರದೇಶದಲ್ಲಿ ಅಂತರ್ಜಲ ಮಟ್ಟವು ವೃದ್ಧಿ ಆಗಲಿದೆ. ನಾಯಂಡಹಳ್ಳಿ ಕೆರೆಯ ಅಭಿವೃದ್ಧಿಯಿಂದ ಎಸ್‌ಎಲ್‌ವಿ ಬಡಾವಣೆ, ಪಂತರಪಾಳ್ಯ, ಗುರುಸಾರ್ವಭೌಮನಗರ, ಐಟಿಐ ಬಡಾವಣೆ, ಜಿಆರ್‌ಸಿ ಬೃಂದಾವನ ನಾಗರಿಕರಿಗೆ, ವಾಯುವಿಹಾರಿಗಳಿಗೆ ಅನುಕೂಲವಾಗಲಿದೆ' ಎಂದರು.

ನಾಯಂಡಹಳ್ಳಿ ಕೆರೆಯ ಪಕ್ಕದಲ್ಲೇ 205 ಹಾಸಿಗೆಗಳ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಬಿಬಿಎಂಪಿ ಹಾಗೂ ಬೆಂಗಳೂರು ಜಲಮಂಡಳಿಯ ಅಧಿಕಾರಿಗಳು ಇದ್ದರು.



ವಸತಿ ಸಚಿವ ವಿ. ಸೋಮಣ್ಣ ಅವರು ನಾಯಂಡಹಳ್ಳಿ ಕೆರೆಗೆ ಸಂಸ್ಕರಿಸಿದ ನೀರು ಹರಿಸಲು ಗುರುವಾರ ಚಾಲನೆ ನೀಡಿದರು

'ಕೆರೆ ಅಭಿವೃದ್ಧಿಗೆ ₹7.5 ಕೋಟಿ ವೆಚ್ಚ'

'ನಾಯಂಡಹಳ್ಳಿ ಕೆರೆಯನ್ನು ₹7.5 ಕೋಟಿ ವೆಚ್ಚದಲ್ಲಿ ಬಿಬಿಎಂಪಿ ವತಿಯಿಂದ ಅಭಿವೃದ್ಧಿಪಡಿಸಲಾಗುತ್ತಿದೆ. ಕೆರೆಯ ಸುತ್ತಲಿನ ಪಾದಚಾರಿ ಮಾರ್ಗ, ಫೆನ್ಸಿಂಗ್ ಸೇರಿದಂತೆ ಕೊನೆಯ ಹಂತದ ಕಾಮಗಾರಿಗಳು ಮಾತ್ರ ಬಾಕಿ ಉಳಿದಿವೆ'.

'ಕೆರೆಗೆ ರಾಜಕಾಲುವೆ ನೀರು ಸೇರದಂತೆ ವ್ಯವಸ್ಥೆ ಮಾಡಲಾಗಿದ್ದು, ಇದೀಗ ಸಂಸ್ಕರಿಸಿದ ನೀರು ಹರಿಸಲಾಗುತ್ತಿದೆ' ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ತಿಳಿಸಿದರು.

ಪೈಪ್ ಮೂಲಕ ಸರಬರಾಜು: ವೃಷಭಾವತಿ ಕಣಿವೆಯಲ್ಲಿ 60 ಎಂಎಲ್‌ಡಿ ಸಾಮರ್ಥ್ಯದ ತೃತೀಯ ಹಂತದ ಶುದ್ಧೀಕರಣಗೊಂಡ 120 ದಶಲಕ್ಷ ಲೀಟರ್ ನೀರನ್ನು ನಾಯಂಡಹಳ್ಳಿ ಕೆರೆಗೆ ಪೈಪ್ ಮೂಲಕ ಹರಿಸಲಾಗುತ್ತದೆ ಎಂದು ಬಿಡಬ್ಲ್ಯೂಎಸ್‌ಎಸ್‌ಬಿ ಮುಖ್ಯ ಎಂಜಿನಿಯರ್ ದೇವರಾಜ್ ತಿಳಿಸಿದರು.

ಬೆಂಗಳೂರು ದಕ್ಷಿಣ ಬಿಜೆಪಿ ಘಟಕದಿಂದ ಲೋಕಾಯುಕ್ತಕ್ಕೆ ಅರ್ಜಿ

'ವಾದ್ರಾ, ಸಿದ್ದರಾಮಯ್ಯ ವಿರುದ್ಧ ದೂರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 10 ಬೃಹತ್ ಹಗರಣಗಳು ನಡೆದಿದ್ದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಅಳಿಯ ರಾಬರ್ಟ್ ವಾದ್ರಾ ಸೇರಿದಂತೆ ಮಾಜಿ ಸಚಿವರು, ಐಎಎಸ್ ಅಧಿಕಾರಿಗಳ ಮೇಲೆ ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗಿದೆ' ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್. ಆರ್. ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, '[illegible], ವಂಚನೆ, ಅಧಿಕಾರ ದುರುಪಯೋಗ, ನಕಲಿ ದಾಖಲೆ, ಸರ್ಕಾರಿ ಭೂಮಿ ಕಬಳಿಕೆಗೆ ಸಂಬಂಧಿಸಿದಂತೆ 3,728 ಪುಟಗಳ ದಾಖಲೆ, 62 ಗಂಟೆಗಳ ವಿಡಿಯೊ ತುಣುಕು, 900ಕ್ಕೂ ಹೆಚ್ಚು ಛಾಯಾಚಿತ್ರಗಳನ್ನು ಸಾಕ್ಷಿಯಾಗಿ ಒದಗಿಸಲಾಗಿದೆ' ಎಂದು ಹೇಳಿದರು.

'ಸಿದ್ದರಾಮಯ್ಯ ಅವರ ವಿರುದ್ಧ ಏಳು, ಮಾಜಿ ಸಚಿವ ಕೆ.ಜೆ. ಜಾರ್ಜ್ ವಿರುದ್ಧ ನಾಲ್ಕು, ಮಾಜಿ ಸಚಿವರಾದ ಯು.ಟಿ. ಖಾದರ್, ಜಮೀರ್ ಅಹಮದ್, ಕೃಷ್ಣ ಬೈರೇಗೌಡ ಅವರ ವಿರುದ್ಧ ತಲಾ ಎರಡು, ಎಂ.ಬಿ. ಪಾಟೀಲ, ದಿನೇಶ್ ಗುಂಡೂರಾವ್, ಎಂ. ಕೃಷ್ಣಪ್ಪ, ಎನ್.ಎ. ಹ್ಯಾರಿಸ್ ವಿರುದ್ಧ ತಲಾ ಒಂದು ದೂರು ದಾಖಲಿಸಲಾಗಿದೆ. ಒಂಬತ್ತು ಮಂದಿ ಐಎಎಸ್ ಹಾಗೂ ಐಎಫ್‌ಎಸ್, ಐದು ಕೆಎಎಸ್ ಸೇರಿ 21 ಅಧಿಕಾರಿಗಳ ಮೇಲೆ ದೂರು ಸಲ್ಲಿಸಲಾಗಿದೆ' ಎಂದರು.

'ಕೃಷಿ ಹೊಂಡ, ಇಂದಿರಾ ಕ್ಯಾಂಟೀನ್, ಬೆಂಗಳೂರಿನಲ್ಲಿ ಭೂಕಬಳಿಕೆ, ಅಕ್ರಮ ಗುತ್ತಿಗೆ, ಬಸ್ ತಂಗುದಾಣ, ಸ್ವಚ್ಛ ಭಾರತ ಅಭಿಯಾನ, ತ್ಯಾಜ್ಯ ವಿಲೇವಾರಿ, ಬೀದಿ ದೀಪ, ಏಡ್ಸ್ ನಿಯಂತ್ರಣ ಯೋಜನೆ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಗರಣಗಳ ದಾಖಲೆಗಳನ್ನು ಲೋಕಾಯುಕ್ತಕ್ಕೆ ಸಲ್ಲಿಸಲಾಗಿದೆ. ಇದಲ್ಲದೆ, ಮುಖ್ಯಮಂತ್ರಿಯವರಿಗೂ ದೂರು ಸಲ್ಲಿಸಲಾಗಿದ್ದು, ಸಿಐಡಿ ತನಿಖೆಗೆ ವಹಿಸಬೇಕು ಎಂದು ಮನವಿ ಮಾಡಲಾಗಿದೆ' ಎಂದರು.

ದಾವಣಗೆರೆಯಲ್ಲಿ ನವೋದ್ಯಮ ಪಾರ್ಕ್

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ದಾವಣಗೆರೆಯಲ್ಲಿ ಎಂಟು ಎಕರೆ ಪ್ರದೇಶದಲ್ಲಿ ನವೋದ್ಯಮ ಪಾರ್ಕ್ ಸ್ಥಾಪಿಸಲಿದೆ.

ಎಂಜಿನಿಯರಿಂಗ್ ಪದವೀಧರರಲ್ಲಿ ಉದ್ಯಮಶೀಲತೆ ಪ್ರೋತ್ಸಾಹಿಸಲು ಸಾರ್ವಜನಿಕ, ಖಾಸಗಿ ಸಹಭಾಗಿತ್ವದಲ್ಲಿ ನವೋದ್ಯಮ ಪಾರ್ಕ್ ಸೌಲಭ್ಯ ಸ್ಥಾಪಿಸಲಾಗುವುದು. ₹40 ಕೋಟಿ ಬೇಕಾಗಲಿದೆ. ಈ ಸಂಬಂಧ ಸಂಭಾವ್ಯ ಹೂಡಿಕೆದಾರರ ಜತೆ ಮಾತುಕತೆ ನಡೆಸಲಾಗಿದೆ ಎಂದು ವಿಶ್ವವಿದ್ಯಾಲಯದ ಮೂಲಗಳು ತಿಳಿಸಿವೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿರುವ ಕುಲಪತಿ ವಿದ್ಯಾಶಂಕರ್ ಎಸ್, ಆರು ತಿಂಗಳಲ್ಲಿ ನವೋದ್ಯಮ ಪಾರ್ಕ್‌ಗೆ ಅಗತ್ಯ ಮೂಲಸೌಕರ್ಯಗಳು ಸ್ಥಾಪನೆಯಾಗಲಿವೆ. ಈಗಾಗಲೇ ಕೆಲವು ಹೂಡಿಕೆದಾರರು ಮುಂದೆ ಬಂದಿದ್ದಾರೆ ಎಂದು ಹೇಳಿದರು.

ಆರ್‌ಒಗಳ ವರ್ಗಾವಣೆಗೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಕೇಂದ್ರ ಚುನಾವಣೆ ಆಯೋಗದ ಮಾರ್ಗಸೂಚಿಗೆ ವಿರುದ್ಧವಾಗಿದ್ದ ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳ ವರ್ಗಾವಣೆ ಆದೇಶವನ್ನು ತಿದ್ದುಪಡಿ ಮಾಡಿ ನಗರಾಭಿವೃದ್ಧಿ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ಮೂವರು ಕಂದಾಯ ಅಧಿಕಾರಿಗಳನ್ನು ಸ್ವಕ್ಷೇತ್ರದ ವಿಧಾನಸಭೆ ಕ್ಷೇತ್ರಗಳ ಕಚೇರಿಗಳಿಗೆ ಜ.31 ರಂದು ವರ್ಗಾವಣೆ ಮಾಡಲಾಗಿತ್ತು. ಈ ಬಗ್ಗೆ 'ಪ್ರಜಾವಾಣಿ' ಫೆ.1ರಂದು ವರದಿ ಮಾಡಿತ್ತು.

ಕಂದಾಯ ಅಧಿಕಾರಿಗಳಾದ ಎಸ್. ಆರ್.ಪ್ರಕಾಶ್, ನಾರಾಯಣಸ್ವಾಮಿ, ಡಿ. ಸರಸ್ವತಿ ಅವರನ್ನು ಸ್ವಕ್ಷೇತ್ರಕ್ಕೆ ವರ್ಗಾಯಿಸಲಾಗಿತ್ತು. ಇದೀಗ ತಿದ್ದುಪಡಿ ಮಾಡಿ, ನಾರಾಯಣಸ್ವಾಮಿ ಅವರನ್ನು ಮಲ್ಲೇಶ್ವರಕ್ಕೆ, ಎಸ್. ಆರ್. ಪ್ರಕಾಶ್ ಅವರನ್ನು ಕೆ.ಆರ್.ಪುರಕ್ಕೆ, ಡಿ.ಸರಸ್ವತಿ ಅವರನ್ನು ಕೆಂಗೇರಿ ಕಂದಾಯ ಅಧಿಕಾರಿ ಕಚೇರಿಗೆ ವರ್ಗಾಯಿಸಲಾಗಿದೆ.

ಕಿಡಿಗೇಡಿಗಳ ಕೃತ್ಯ– ಸಿದ್ದರಾಮಯ್ಯ

ಬೆಂಗಳೂರು: 'ನನ್ನ ಹೆಸರು ದುರ್ಬಳಕೆ ಮಾಡಿಕೊಂಡ ನಕಲಿ ಪತ್ರವೊಂದು ಹರಿದಾಡುತ್ತಿದೆ. ನನ್ನ ಮತ್ತು ಕೆಪಿಸಿಸಿ ಅಧ್ಯಕ್ಷರ ಸಂಬಂಧವನ್ನು ಕೆಡಿಸುವ ದುರುದ್ದೇಶದಿಂದಲೇ ಯಾರೋ ಕಿಡಿಗೇಡಿಗಳು ಈ ಕೃತ್ಯ ನಡೆಸಿದ್ದಾರೆ. ಈ ಪತ್ರಕ್ಕೂ ನನಗೂ ಸಂಬಂಧ ಇಲ್ಲ' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ನಕಲಿ ಪತ್ರದ ಸಹಿತ ಟ್ವೀಟ್ ಮಾಡಿರುವ ಅವರು, 'ಮುಂದಿನ ಚುನಾವಣೆಯಲ್ಲಿ ಗೆಲುವಿನ ಹಾದಿಯಲ್ಲಿರುವ ನಮ್ಮ ಪಕ್ಷದ ಬಗ್ಗೆ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಲು ಈ ಖೊಟ್ಟಿ ಪತ್ರ ಹರಿಯಬಿಡಲಾಗಿದೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಲಿದ್ದು, ಈ ಕೃತ್ಯದ ಹಿಂದಿನ ದುರುಳರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸುತ್ತಾರೆಂದು ನಂಬಿದ್ದೇನೆ' ಎಂದಿದ್ದಾರೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಗೆ ಬರೆದಿರುವುದು ಎನ್ನಲಾದ ಪತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಸಿದ್ದರಾಮಯ್ಯ ಅವರ ಲೆಟರ್ ಹೆಡ್‌ನಲ್ಲಿರುವ ಈ ಪತ್ರದಲ್ಲಿ, ಡಿ.ಕೆ. ಶಿವಕುಮಾರ್ ವಿರುದ್ಧ ಸಿದ್ದರಾಮಯ್ಯ ದೂರು ನೀಡಿದ್ದಾರೆ ಎಂದು ಬರೆಯಲಾಗಿದೆ.

'ಸಿಪಿಎಂ ಜತೆ ಹೊಂದಾಣಿಕೆ; ಚರ್ಚೆ ನಡೆದಿಲ್ಲ'

ಬಾಗೇಪಲ್ಲಿ: 'ಬಾಗೇಪಲ್ಲಿ ಕ್ಷೇತ್ರದಲ್ಲಿ ಸಿಪಿಎಂ ಜೊತೆಗೆ ಚುನಾವಣೆ ಹೊಂದಾಣಿಕೆ ಬಗ್ಗೆ ಮಾತುಕತೆ ನಡೆದಿಲ್ಲ. ಅಂತಿಮವಾಗಿ ಜೆಡಿಎಸ್ ಅಭ್ಯರ್ಥಿಯಾಗಿ ಡಿ.ಜೆ. ನಾಗರಾಜ ರೆಡ್ಡಿ ಅವರೇ ಕಣಕ್ಕೆ ಇಳಿಯಲಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಗುರುವಾರ ಇಲ್ಲಿ ಸ್ಪಷ್ಟಪಡಿಸಿದರು.

ಬಾಗೇಪಲ್ಲಿ ಕ್ಷೇತ್ರ ಸಂಬಂಧ ಯಾವ ರಾಜಕೀಯ ಪಕ್ಷದ ಜೊತೆಗೂ ಹೊಂದಾಣಿಕೆ ಕುರಿತು ಮಾತುಕತೆ ಮಾಡಿಲ್ಲ. ಸುಳ್ಳು ವದಂತಿಗಳಿಗೆ ಕಿವಿಗೊಡಬೇಡಿ ಎಂದರು.

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/83/2022–23 ದಿನಾಂಕ: 01.02.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ನಾರಾಯಣಪ್ಪ ಬಿನ್ ಲೇ. ಚಿಕ್ಕನರಸಿಂಹಯ್ಯ	ಆನೇಕಲ್	ಕಸಬಾ	ಕಾವಲಹೊಸಹಳ್ಳಿ	28/4	0–13	ವಸತಿ	ವಾಣಿಜ್ಯ	

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಸೃಷ್ಠಿಯಾಗುತ್ತದೆ. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/4436/2022–23

ನೈರುತ್ಯ ರೈಲ್ವೆ

ಆಸಕ್ತಿಯ ಅಭಿವ್ಯಕ್ತತೆ ಸೂಚನೆ ಸಂ.
B/C.14/PA/BOC/SBC/01/2023,
ದಿನಾಂಕ: 27.01.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಮೊಹರು ಬಂದ ಮಾಡಿದ ಅರ್ಜಿಯನ್ನು ಆಹ್ವಾನಿಸಿದ್ದಾರೆ:

ವಿವರಗಳು: ಕೆಎಸ್‌ಆರ್ ಬೆಂಗಳೂರು ಸಿಟಿ ರೈಲ್ವೇ ನಿಲ್ದಾಣದಲ್ಲಿ ಪ್ರಯಾಣಿಕರಿಂದ ಅನುಸೂಚಿತ ಶುಲ್ಕಗಳನ್ನು ವಸೂಲಿ ಮಾಡುವಂತ ಮಾದರಿಯಲ್ಲಿ (18% ಜಿಎಸ್‌ಟಿ ಒಳ ಗೊಂಡಂತೆ) 5 ವರ್ಷಗಳ ಅವಧಿಗೆ ಬ್ಯಾಟರಿ ಚಾಲಿತ ಕಾರ್‌ಗಳನ್ನು (ಬಿಒಸಿ) ಚಾಲನೆ ಮಾಡುವುದು ಹಾಗೂ ನಿರ್ವಹಣೆ ಮಾಡುವುದಕ್ಕಾಗಿ ಆಸಕ್ತಿಯ ಅಭಿವ್ಯಕ್ತತೆ ಇದಾಗಿದೆ (ಇಎಂಡಿ: ರೂ. 1,23,400/–).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.03.2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
PUB/640/AAD/PRB/SWR/2022-23 ಬೆಂಗಳೂರು
S.W.Railways SWRRLY SWRRLY

IN THE HIGH COURT OF KARNATAKA AT BENGALURU
Notice to the Respondents No:5, 12, 13 and 15 Vide order dated:20.01.2023
R.F.A.No.1965/2018

H.V. Srinivasamurthy, Party-in-person — Appellant
(By Sri H.V. Srinivasamurthy, Party-in-person).
V/s
H.C Shivaramaiah, dead by LRS., Chaya & Ors., — Respondents
(By Sri Ramesh P Kulkarni, Adv., for R-1 & R-2 (VK Filed)).

To:
Respondents:
05. H.C VENKATESH S/O H.N CHANDRASHEKARAIAH R/AT NO.683/776, 'SUMUKHA', I-C MAIN, GIRINAGARA, BANGALORE - 560 085.
12. LALITHA W/O B.S RAMA RAO R/AT NO.1819/77, UPSTAIRS OF VIJAYA GENERAL STORES, 17TH CROSS, SRI ANJANEYA EXTENSION, DAVANGERE - 577 004.
13. MANJULA W/O NAGABHUSHAN R/AT NO.485, 23RD MAIN, 2ND STAGE, J.P NAGAR, MYSORE - 570 001.
15. SHANTHAMMA W/O NAGARAJ R/OF HANDIGANADU VILLAGE, CHIKKANAYAKANAHALLI TALUK-577214.

Appeal from the Judgment & Decree dated: 31.07.2018 passed in OS.No.35/2007 on the file of the Senior Civil Judge and JMFC., Chikkanayakanahalli.

Notice is hereby given to you to appear in this court either in person or through Counsel duly instructed or through some one authorized by law, to act for you in the above appeal on **03.03.2023** in case you intend to contest the appeal. If you fail to appear, the same will be dealt with, heard and decided in your absence.

Issued under my hand and the seal of this court, this the 20th Day of January 2023.

BY ORDER OF THE COURT,
(M.SHANTHI)
ASSISTANT REGISTRAR.

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100
ದೂರವಾಣಿ : 080 41362000 ಫ್ಯಾಕ್ಸ್ : 080 41362010 ಇ-ಮೇಲ್ : tilinvestor@timken.com
ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಡಿಸೆಂಬರ್ 31, 2022ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳು ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	31/12/2022 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	31/12/2021 ಕ್ಕೆ ಕೊನೆಗೊಂಡ ಕಳೆದ ವರ್ಷದ ತ್ರೈಮಾಸಿಕಕ್ಕೆ ಅನುಗುಣವಾಗಿ (ಪರಿಶೋಧಿತವಲ್ಲದ)	31/03/2022 ಕ್ಕೆ ಕೊನೆಗೊಂಡ ವಾರ್ಷಿಕ ಅವಧಿ (ಪರಿಶೋಧಿತವಾದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	6,238	5,128	22,175
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	952	950	4,382
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	952	950	4,382
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	706	698	3,271
5.	ಈ ಅವಧಿಯ ಒಟ್ಟು ಸಮಸ್ತ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಸ್ತ ಆದಾಯ (ತೆರಿಗೆ ನಂತರ)}	703	698	3,247
6.	ಈಕ್ವಿಟಿ ಷೇರು ಬಂಡವಾಳ	752	752	752
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ	9.39*	9.28*	43.49

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

ಬೆಂಗಳೂರು
1ನೇ ಫೆಬ್ರವರಿ, 2023

ಕರ್ನಾಟಕ ಸರ್ಕಾರ

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ

ಆಯುಕ್ತರ ಕಛೇರಿ, ಕೆ.ಆರ್.ವೃತ್ತ, ಬೆಂಗಳೂರು–560001,
ದೂ: 91–080–22212408, ಫ್ಯಾಕ್ಸ್: 91–080–22277528

ಸಂಖ್ಯೆ: SSLR/PMU/13011/10/2023 ದಿನಾಂಕ : 02.02.2023

ಪ್ರಕಟಣೆ

ಪರವಾನಗಿ ಭೂಮಾಪಕರುಗಳ ಆಯ್ಕೆ

ಭೂಮಾಪನ ಇಲಾಖೆಯಲ್ಲಿ ಹೊಸದಾಗಿ ಪರವಾನಗಿ ಭೂಮಾಪಕರುಗಳನ್ನು ಆಯ್ಕೆ ಮಾಡಿಕೊಳ್ಳುವ ಸಂಬಂಧ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ದಿನಾಂಕ: **20–02–2023 ರವರೆಗೆ** ಅವಕಾಶ ಕಲ್ಪಿಸಲಾಗಿದೆ. ಅಧಿಸೂಚನೆಯನ್ನು ವೆಬ್‌ಸೈಟ್ ವಿಳಾಸವಾದ **https://rdservices.karnataka.gov.in** ನಲ್ಲಿ ಪ್ರಚುರಪಡಿಸಲಾಗಿದೆ.

ಸಹಿ/– ಆಯುಕ್ತರು
ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು

ವಾಸಾಸಂಇ/ವಾ.ಪ್ರ/4446/ಶಿರಡಿ ಸಾಯಿ/2022–23

ಸಾರ್ವಜನಿಕ ನೋಟೀಸು

ಈ ಕೆಳಗಿನ ಷೆಡ್ಯೂಲ್‌ನಲ್ಲಿ ಪೂರ್ಣವಾಗಿ ವಿವರಿಸಿರುವ ಹಾಗೂ ಇನ್ನುಮುಂದೆ "ಷೆಡ್ಯೂಲ್ ಸ್ವತ್ತು" ಎಂದು ಕರೆಯಲಾಗುವ ಸ್ಥಿರಾಸ್ತಿಯ ಬಗ್ಗೆ ಬೆಂಗಳೂರು–560022, ಯಶವಂತಪುರ, ಮಾಡೆಲ್ ಕಾಲೋನಿ, ನಂ. 495 ಇಲ್ಲಿ ವಾಸಿಸುತ್ತಿರುವ ದಿವಂಗತ: ಶ್ರೀ. ಸೋಹನ್‌ಲಾಲ್‌ರವರ ಮಗನಾದ ಶ್ರೀ. ಎಸ್. ಕೈಲಾಸ್ ಚಂದ್‌ರವರ ಹಕ್ಕಿನ ಸಂಬಂಧದಲ್ಲಿ ನಾವು ತನಿಖೆ ನಡೆಸುತ್ತಿದ್ದೇವೆ ಎಂದು ಸಾರ್ವಜನಿಕರಿಗೆ ಈ ಮೂಲಕ ನೋಟೀಸು ನೀಡಲಾಗಿರುತ್ತದೆ. ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ನಮ್ಮ ಕಕ್ಷಿದಾರರು ವ್ಯವಹರಿಸಲು ಉದ್ದೇಶಿಸಿದ್ದಾರೆ, ಆದುದರಿಂದ ಷೆಡ್ಯೂಲ್ ಸ್ವತ್ತು ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಅಥವಾ ಉದ್ದೇಶಿತ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅಹ್ವಾನಿಸಿ ಈ ನೋಟೀಸ್‌ನ್ನು ಹೊರಡಿಸಲಾಗಿರುತ್ತದೆ.

ಷೆಡ್ಯೂಲ್ ಸ್ವತ್ತಿನ ಮತ್ತು/ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಅಥವಾ ಅದಕ್ಕೆ ಅಥವಾ ಅದರ ವಿರುದ್ಧವಾಗಿ ಯಾವುದೇ ಹಕ್ಕು, ಸ್ವಾಮ್ಯ, ಹಿತಾಸಕ್ತಿ, ಚಾರ್ಜು, ಬೆನಿಫಿಟ್, ಕ್ಲೇಮು ಅಥವಾ ಡಿಮ್ಯಾಂಡ್ ಅಂತಹವುಗಳೂ ಸೇರಿದಂತೆ ಯಾವುದೇ ಕ್ಲೇಮುಗಳನ್ನು ಹೊಂದಿರುವ ಹಾಗೂ ಮಾಟಾಟ, ವರ್ಗಾವಣೆ ಒಪ್ಪಂದ ಪತ್ರ, ಹಂಚಿಕೆ, ಹಕ್ಕು, ಹಿತಾಸಕ್ತಿ, ಪಾಲು ಅಥವಾ ಬದಲು, ದಾನ, ಲೀಸ್, ಗೇಣಿ, ಲೈಸನ್ಸ್ ಕಬ್ಜಾ, ಒಡಂಬಡಿಕೆ, ಎನ್‌ಕಂಬ್ರನ್ಸ್, ಹಸ್ತಾಂತರ ಅಡಮಾನ್ ಚಾರ್ಜು, ಧಾರಣಾಧಿಕಾರ, ಟ್ರಸ್ಟ್, ಕುಟುಂಬ ವ್ಯವಸ್ಥೆ/ಇತ್ಯರ್ಥ, ಋಣಭಾರ, ವಾರಸುದಾರಿಕೆ, ಉತ್ತರಾಧಿಕಾರ, ಮರಣಶಾಸನ, ಟೆಸ್ಟಮೆಂಟರಿ ಇನ್‌ಸ್ಟ್ರುಮೆಂಟ್, ಪ್ರೊಬೇಟ್, ಲೆಟರ್, ಆಡ್ಮಿನಿಸ್ಟ್ರೇಷನ್, ಉಯಿಲು, ಅನುಭೋಗ ಸ್ವಾಧೀಣ, ಬಳಕೆ, ನಿರ್ವಹಣೆ, ಅಭಿವೃದ್ಧಿ ಹಕ್ಕುಗಳು, ವಿವಾದ ಇತ್ಯರ್ಥವಾಗದಿರುವ ದಾವೆ, ಆದೇಶ/ಡಿಕ್ರಿ/ಯಾವುದೇ ನ್ಯಾಯಾಲಯದ ತೀರ್ಪು, ಪ್ಪಂದ ಪತ್ರ, ಒಡಂಬಡಿಕೆ, ಪಾಲುದಾರಿಕೆ, ಅಥವಾ ಬೇರೆ ರೀತಿಯಾಗಿ ಷೆಡ್ಯೂಲು ಸ್ವತ್ತಿನ ಅಥವಾ. ಅದರ ಯಾವುದೇ ಭಾಗಕ್ಕೆ ಸೇರಿದಂತೆ ಯಾವುದೇ ಕ್ಲೇಮುಗಳನ್ನು ಹೊಂದಿರುವ ಯಾರೇ ವ್ಯಕ್ತಿ/ವ್ಯಕ್ತಿಗಳು, ಎಂಟಿಟಿಫೆರ್ಮು (ಗಳು), ಸಂಘಗಳು, ಸಂಸ್ಥೆ(ಗಳು) ಕಾರ್ಪೋರೇಟ್ ಅಥವಾ ಬೇರೆ ರೀತಿಯವು ಅದರ ಬೆಂಬಲವಾಗಿ ರುಜುವಾತಾಗಿ ಎಲ್ಲಾ ದಸ್ತಾವೇಜುಗಳ ನಕಲುಗಳೊಂದಿಗೆ ಲಿಖಿತದಲ್ಲಿ ಅದನ್ನು ಈ ನೋಟೀಸು ಪ್ರಕಟವಾದ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಕೆಳಗೆ ಕೊಟ್ಟಿರುವ ವಿಳಾಸಕ್ಕೆ ತಿಳಿಸುವುದು ಅಗತ್ಯ, ಅದಕ್ಕೆ ತಪ್ಪಿದಲ್ಲಿ ಅಂತಹ ಹಕ್ಕು ಸ್ವಾಮ್ಯ, ಹಿತಾಸಕ್ತಿ, ಬೆನಿಫಿಟ್, ಕ್ಲೇಮು ಅಥವಾ ಡಿಮ್ಯಾಂಡ್‌ನ್ನು (ಯಾವುದಾದರೂ ಇದ್ದಲ್ಲಿ) ಮನ್ನಾ ಮಾಡಲಾಗಿದೆಯೆಂದು ಮತ್ತು (ಅಥವಾ ಪರಿತ್ಯಜಿಸಲಾಶಗಿದೆಯಿಂದು ಪರಿಗಣಿಸತಕ್ಕದ್ದು ಹಾಗೂ ಅಂತಹ ಯಾವುದೇ ಕ್ಲೇಮುಗಳು ಇರಲಿಲ್ಲವೆಂದೂ ಹಾಗೂ ಅಸವುಗಳನ್ನು ಮನ್ನಾ ಮಾಡಲಾಗಿದೆಯೆಂದು ಅಥವಾ ಪರಿತ್ಯಜಿಸಲಾಗಿದೆ ಎಂದು ನಮ್ಮ ಕಕ್ಷಿದಾರರು ಉದ್ದೇಶಿತ ವ್ಯವಹಾರವನ್ನು ಮುಂದುವರೆಸುತ್ತಾರೆ.)

ಷೆಡ್ಯೂಲು

ಐಟಂ ನಂ.1: ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ರಾಚೇನಹಳ್ಳಿ ಗ್ರಾಮದ ಸರ್ವೇ ನಂಬರ್ 85/2 ರಲ್ಲಿ 2 ಎಕರೆ 07 ಗುಂಟೆ, ವಿಸ್ತೀರ್ಣ ಭೂಪರಿವರ್ತಿತ ಜಮೀನು ಹಾಗೂ ಅದಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ಚಿನ್ನತಾಯಪ್ಪನವರಿಗೆ ಸೇರಿದ ಹಾಲಿ ಸರ್ವೇ ನಂಬರ್ 84 ರ ಜಮೀನು ಹಾಗೂ ನಾಲೆ, ಪಶ್ಚಿಮಕ್ಕೆ: ಆರೋಗ್ಯಪ್ಪನವರಿಗೆ ಸೇರಿದ ಜಮೀನು ಹಾಲಿ ಸರ್ವೇ ನಂಬರ್: 85/1 ರಲ್ಲಿನ ಜಮೀನು, ಉತ್ತರಕ್ಕೆ: ಕಾಲುವೆ ಮತ್ತು ಸೆಯಿಂಟ್ ಆನ್ಸ್ ಚರ್ಚ್ ರಸ್ತೆ, ಹಾಗೂ ದಕ್ಷಿಣಕ್ಕೆ: ಅಂತೋಣಪ್ಪನವರಿಗೆ ಸೇರಿದ ಜಮೀನು ಹಾಲಿ ಸರ್ವೇ ನಂಬರ್ 85/4 ರ ಜಮೀನು.

ಐಟಂ ನಂ.2:–ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ರಾಚೇನಹಳ್ಳಿ ಗ್ರಾಮದ ಸರ್ವೇ ನಂಬರ್ 85/3ಬಿ ಯಲ್ಲಿ 23 ಗುಂಟೆ ಮತ್ತು ಸರ್ವೇ ನಂಬರ್ 85/4 ಯಲ್ಲಿ 28 ಗುಂಟೆ ವಿಸ್ತೀರ್ಣದ ಭೂಪರಿವರ್ತಿತ ಜಮೀನು ಹಾಗೂ ಅದಕ್ಕೆ ಚಕ್ಕುಬಂದಿ:– ಪೂರ್ವಕ್ಕೆ: ಚಿನ್ನತಾಯಪ್ಪನವರಿಗೆ ಸೇರಿದ ಜಮಜೀನು ಹಾಲಿ ಸರ್ವೇ ನಂಬರ್ 83/1 ರಲ್ಲಿನ ಜಮೀನು, ಪಶ್ಚಿಮಕ್ಕೆ: ಕೆಂಪಣ್ಣನವರಿಗೆ ಸೇರಿದ ಜಮಜೀನು ಹಾಲಿ ಸರ್ವೇ ನಂಬರ್ 85/3 ರಲ್ಲಿನ ಜಮೀನು ಉತ್ತರಕ್ಕೆ: ಡಿ.ಬಿ. ಸುರೇಶ್‌ರವರಿಗೆ ಡಿ.ಬಿ. ಶಿವಣ್ಣಗೌಡರಿಗೆ ಸೇರಿದ ಜಮೀನು ಹಾಲಿ ಸರ್ವೇ ನಂಬರ್ 85/2 ರಲ್ಲಿನ ಜಮೀನು ಹಾಗೂ ದಕ್ಷಿಣಕ್ಕೆ: ಲಾಚಾರ್‌ರವರಿಗೆ ಸೇರಿದ ಜಮೀನು ಹಾಲಿ ಸರ್ವೇ ನಂಬರ್ 85/5 ರಲ್ಲಿನ ಜಮೀನು:

ರಾಜ್ ರಾಮಚಂದ್ರನ್,
ಜೆ.ಎಸ್.ಎ. ಅಡ್ವೋಕೇಟ್ಸ್ ಅಂಡ್ ಸಾಲಿಸಿಟರ್ಸ್,
ನಂ.29/18 ಡಾ: ರಾಧಾಕೃಷ್ಣ ಸಲೈ, ದ್ವಾರಕಾ ಕಾಲೋನಿ, ಮೈಲಾಪುರ್, ಚಿನ್ನೈ ತಮಿಳುನಾಡು–600004.

ದಿನಾಂಕ: 03–02–2023
ಸ್ಥಳ: ಬೆಂಗಳೂರು

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಬೆಂಗಳೂರು ಗ್ರಾಮಾಂತರ ಶಾಖಾ ಕಛೇರಿ, ನಂ.197, ವೆಸ್ಟ್ ಆಫ್ ಕಾರ್ಡ್ ರಸ್ತೆ, 1ನೇ ಮಹಡಿ, 2ನೇ ಹಂತ, ಪಶ್ಚಿಮ ಕಾರ್ಡ್ ರಸ್ತೆ, (ರಾಜಾಜಿನಗರ Iನೇ ಬ್ಲಾಕ್ ಬಸ್ ನಿಲ್ದಾಣದ ಹತ್ತಿರ), ಬೆಂಗಳೂರು–560086,
ದೂರವಾಣಿ ಸಂಖ್ಯೆ: 080–23494628 / 23495821

ಸರ್ಫೇಸಿ ಕಾಯ್ದೆಯಡಿಯಲ್ಲಿ ಇ–ಹರಾಜಿನ ಮೂಲಕ ಆಸ್ತಿಗಳ ಮಾರಾಟ

ಈ ಮೂಲಕ ಸೂಚನೆ ನೀಡಲಾಗುತ್ತಿರುವುದೇನೆಂದರೆ ಸೆಕ್ಯುರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆ 2002 (ಸರ್ಫೇಸಿ) ರ ಅಡಿಯಲ್ಲಿ ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ವಿಧಿ 13(4) ಹಾಗೂ (12)ರ ನಿಯಮ 9ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಈ ಕೆಳಗಡೆ ನೀಡಲಾಗಿರುವ ಸ್ಥಿರಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಅವುಗಳನ್ನು ಇ–ಹರಾಜು ಮುಖಾಂತರ "ಎಲ್ಲಿವೆಯೋ ಅಲ್ಲಿ ಹೇಗಿವೆಯೋ ಹಾಗೆ" ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಈ ಆಸ್ತಿಗಳನ್ನು ಕೊಳ್ಳಲಿಚ್ಚಿಸುವವರು ಇ–ಹರಾಜಿನ ಮೂಲಕ ಬಿಡ್‌ನಲ್ಲಿ ಭಾಗವಹಿಸಬಹುದು.

ಭದ್ರತಾ ಸಾಲದಾತರರ ಹೆಸರು: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1) ಸಾಲಗಾರರ/ಜಾಮೀನುದಾರರ/ಅಡಮಾನದಾರರ ಹೆಸರು ಮತ್ತು ವಿಳಾಸ: ಮೆ॥ ಅಥೆನ್ಸ್ ವೇರ್ ಪ್ರೈವೇಟ್ ಲಿಮಿಟೆಡ್, ನಿರ್ದೇಶಕರು, ಶ್ರೀ. **ಸೈಯದ್ ಫೈಸಲ್ ಮತ್ತು** ಶ್ರೀ. **ಶೇಕ್ ಜಲೀಲ್** (ಮೃತರು) **ಪೂರಕ ಭದ್ರತೆಯ ಮಾಲೀಕರು: ಲೇಟ್. ಶ್ರೀ. ಇ. ರಾಮಕೃಷ್ಣ,** ಖಾತಾ ನಂ.3304/2229 & 2229/1, ರುದ್ರಯ್ಯ ಎಸ್ಟೇಟ್, ಸಾಣೆಗೊರುವನಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು, ಪಾವತಿಸಬೇಕಾದ ಒಟ್ಟು ಮೊತ್ತ : **ದಿನಾಂಕ 10.01.2023** ರಂತೆ **ರೂ.14,90.67,974/–**

ಸ್ಥಿರಾಸ್ತಿಯ ವಿವರ : ಸ್ಥಿರಾಸ್ತಿಯ ನಂ.28, 12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, 1ನೇ ಹಂತ, 1ನೇ ಫೇಸ್, ಗೋಕುಲ್ ಎಕ್ಸ್‌ಟೆನ್ಶನ್, ಯಶವಂತಪುರ ಹೋಬಳಿ, ಬೆಂಗಳೂರು–22, ವಿಸ್ತೀರ್ಣ 20' X45' ಚ.ಅಡಿ, ದಾಖಲೆಗಳ ಪ್ರಕಾರ ವಿಸ್ತೀರ್ಣ 900 ಚ.ಅಡಿ, (18'X45' ವಾಸ್ತವಿಕ ಪ್ರಕಾರ 810 ಚದರ ಅಡಿ), 624' ಚ.ಅಡಿ ಅಳತೆಯ ಎಸಿ ಶೀಟ್ ರೂಫ್ ಕಟ್ಟಡ. ಲೇಟ್ ಶ್ರೀ ಇ. ರಾಮಕೃಷ್ಣರವರ ಹೆಸರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ಖಾಸಗಿ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸೈಟ್ ನಂ.29 ಮತ್ತು ದಕ್ಷಿಣಕ್ಕೆ : ಸೈಟ್ ನಂ.28 ರ ಭಾಗ.

ಮೀಸಲು ಬೆಲೆ – **ರೂ.67.84 ಲಕ್ಷಗಳು,** ಇಎಂಡಿ ಮೊತ್ತ – **ರೂ.6.78 ಲಕ್ಷಗಳು,** ಬಿಡ್ ಮಲ್ಟಿಪ್ಲಯರ್ – **ರೂ.10,000/–**
ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ : 20.02.2023 ರಂದು ಬೆಳಿಗ್ಗೆ 11.00 ರಿಂದ ಸಂಜೆ 4.00ರವರೆಗೆ. ಇ–ಹರಾಜು ದಿನಾಂಕ: 06.03.2023 ರಂದು ಬೆಳಿಗ್ಗೆ 11.00 ಕ್ಕೆ ಪ್ರಾರಂಭವಾಗಿ ದಿನಾಂಕ 14.03.2023 ರಂದು ಬೆಳಿಗ್ಗೆ 11.00ಕ್ಕೆ ಮುಕ್ತಾಯವಾಗುತ್ತದೆ.

2) ಸಾಲಗಾರರ/ಜಾಮೀನುದಾರರ/ಅಡಮಾನದಾರರ ಹೆಸರು ಮತ್ತು ವಿಳಾಸ: ಸಾಲಗಾರರು ಹಾಗೂ ಪೂರಕ ಭದ್ರತೆಯ ಮಾಲೀಕರು: ಶ್ರೀ ಅರವಿಂದ ಎಸ್ ಮಠಪತಿ ಪ್ರೊ: ಮೆ॥ ಸ್ನೇಹಾ ಅಪೆರಲ್ಸ್, ನಂ.50, 1ನೇ ಮಹಡಿ, 8ನೇ ಅಡ್ಡರಸ್ತೆ, 2ನೇ ಬ್ಲಾಕ್, ನಂದಿನಿ ಲೇಔಟ್, ಜೈಭುವನೇಶ್ವರಿನಗರ, ಬೆಂಗಳೂರು–560096. **ಪಾವತಿಸಬೇಕಾದ ಒಟ್ಟು ಮೊತ್ತ : ದಿನಾಂಕ 10.01.2023 ರಂತೆ ರೂ.63,55,938/–**

ಸ್ಥಿರಾಸ್ತಿಯ ವಿವರ : ನಂ.741, ಖಾನೇಶುಮಾರಿ ನಂ.1/24/741, ರಾಮ್ಕಿಸ್ ವಿಶ್ವಶಾಂತಿನಗರ ಲೇಔಟ್, ನರಸಿಪಾಳ್ಯ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. (35'+37')/2X40' ಅಳತೆ ಹೊಂದಿರುವ, ಈ ಅಸ್ತಿಯು ಶ್ರೀ ಅರವಿಂದ ಎಸ್ ಮಠಪತಿರವರ ಹೆಸರಿನಲ್ಲಿದೆ ಮತ್ತು ಚಕ್ಕುಬಂದಿ: ಉತ್ತರಕ್ಕೆ : ಸೈಟ್ ನಂ.740, ದಕ್ಷಿಣಕ್ಕೆ: ಖಾಸಗಿ ಆಸ್ತಿ, ಪೂರ್ವಕ್ಕೆ : ಲೇಔಟ್ ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ.742 ಹೊಂದಿದೆ.

ಮೀಸಲು ಬೆಲೆ : **ರೂ.13.68 ಲಕ್ಷಗಳು.** ಇ.ಎಂ.ಡಿ ಮೊತ್ತ: **1.30 ಲಕ್ಷಗಳು, ಬಿಡ್ ಮಲ್ಟಿಪ್ಲಯರ್ : ರೂ.10,000/–**
ಆಸ್ತಿ ಪರಿಶೀಲನೆಯ ದಿನಾಂಕ ಮತ್ತು ಸಮಯ : 21.02.2023 ರಂದು ಬೆಳಿಗ್ಗೆ 11.00 ರಿಂದ ಸಂಜೆ 4.00ರವರೆಗೆ. ಇ–ಹರಾಜಿನ ದಿನಾಂಕ : 06.03.2023 ರಂದು ಬೆಳಗ್ಗೆ 11 ಗಂಟೆಗೆ ಪ್ರಾರಂಭವಾಗಿ **ದಿನಾಂಕ 14.03.2023 ರಂದು ಬೆಳಗ್ಗೆ 11 ಗಂಟೆಗೆ** ಮುಕ್ತಾಯವಾಗುತ್ತದೆ.

ನಿಯಮ ಮತ್ತು ಷರತ್ತುಗಳು : (1) ಇ–ಹರಾಜಿನ ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ **https://eproc.karnataka.gov.in** ಗೆ ಭೇಟಿ ನೀಡಿ ಹಾಗೂ ಆಸಕ್ತ ಬಿಡ್‌ದಾರರಿಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ. (2) ಈ ಕಾಯ್ದೆಯ ನಿಯಮಗಳು 8(6) ಮತ್ತು 9(1)ರ ಅಡಿಯಲ್ಲಿ ಆಯೋಜಿಸಿದಂತೆ ಆಸ್ತಿಯ ನಿರ್ದೇಶಕರು/ಮಾಲೀಕರು/ಕಾನೂನುಬದ್ಧ ವಾರಸುದಾರರಿಗೆ ಸ್ವಾಧೀನ ಸ್ವತ್ತುಗಳನ್ನು ಮಾರಾಟ ಮಾಡಲು ಇದು 30 ದಿನಗಳ ಶಾಸನ ಬದ್ಧ ಸೂಚನೆಯಾಗಿದೆ. (3) ಆಸ್ತಿಯ ಮಾಲೀಕರು ತಮ್ಮ ಆಸ್ತಿಯನ್ನು ಕಾಪಾಡಿಕೊಳ್ಳಲು ಮಾರಾಟ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಮತ್ತು ಹೆಚ್ಚಿನ ಖರೀದಿದಾರರನ್ನು ಸಜ್ಜುಗೊಳಿಸಲು ಕೋರಲಾಗಿದೆ. (4) ಇ–ಹರಾಜಿನ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಲು ಸಹಾಯವಾಣಿ **080–23010900/23010901** (5) ಆಸ್ತಿಗೆ ಸಂಬಂಧಿಸಿದಂತೆ ಸ್ಥಳೀಯ ಪ್ರಾಧಿಕಾರಗಳಿಗೆ ಪಾವತಿಸಬೇಕಾದ ತೆರಿಗೆಗಳು/ರಾಜ್ಯ ಎಸ್ಕಾಂಗೆ ಯಾವುದಾದರೂ ಬಾಕಿ ಇದ್ದಲ್ಲಿ ಆಸಕ್ತ ಖರೀದಿದಾರರೆ ಭರಿಸತಕ್ಕದ್ದು.

ದಿನಾಂಕ : 02.02.2023
ಸ್ಥಳ : ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿಗಳು
ಸಹಾಯಕ ಪ್ರಧಾನ ವ್ಯವಸ್ಥಾಪಕರು
ಕೆಎಸ್‌ಎಫ್‌ಸಿ ಬೆಂಗಳೂರು ಗ್ರಾಮಾಂತರ ಶಾಖೆ, ಬೆಂಗಳೂರು



ಬನಶಂಕರಿ ಶಿಲ್ಪೋದ್ಯಾನದಲ್ಲಿ ಶಿಲ್ಪಗಳ ದುಃಸ್ಥಿತಿ



ಮಳೆ ನೀರು ಸಂಗ್ರಹ ಮಾಹಿತಿ ನೀಡುವ ಮೂರ್ತಿಗಳ ಕೈ, ಭುಜಗಳನ್ನು ಕಿತ್ತು ಹಾಕಲಾಗಿದೆ

ಬನಶಂಕರಿ ಶಿಲ್ಪೋದ್ಯಾನ: ದೇಶಕ್ಕೇ ಪ್ರಥಮವೆಂಬ ಹೆಗ್ಗಳಿಕೆಯಿಂದ ಆರಂಭ • ವಾರ್ಷಿಕ ₹74 ಲಕ್ಷ ನಿರ್ವಹಣೆ ವೆಚ್ಚ

ಆರೈಕೆ ಮರೆತ ಶಿಲ್ಪೋದ್ಯಾನ... ಅಧ್ವಾನ

ಪ್ರಜಾವಾಣಿ ವಿಶೇಷ

• ಆರ್. ಮಂಜುನಾಥ್



ಶಿಲ್ಪದ ಮೇಲೆ ಕಿಡಿಗೇಡಿಗಳ ವಿಕೃತಿ

ಬೆಂಗಳೂರು: ಕಲ್ಲಿನ ಶಿಲ್ಪಗಳು ಪೀಠ ಕಳೆದುಕೊಂಡು ನೆಲಕ್ಕುರುಳಿವೆ, ಮಳೆ ನೀರಿನ ಮಹತ್ವ ಸಾರುವ ಮಕ್ಕಳ ಮಣ್ಣಿನ ಮೂರ್ತಿಗಳು ಕೈ, ಕಾಲು, ಭುಜಗಳನ್ನು ಕಳೆದುಕೊಂಡಿವೆ, ಆಲಂಕಾರಿಕ ಗಿಡಗಳು ಒಣಗಿವೆ, ಹುಲ್ಲಿನಹಾಸು ಕಳೆಗುಂದಿದೆ, ಬಯಲು ರಂಗಮಂದಿರ-ದಲ್ಲಿ ಕೂರಲೂ ಸಾಧ್ಯವಿಲ್ಲ...

ದೇಶದ ಪ್ರಥಮ ಶಿಲ್ಪಗಳ ಉದ್ಯಾನ ಎಂದು 11 ವರ್ಷದ ಹಿಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಿಸಿದ್ದ ಶಿಲ್ಪೋದ್ಯಾನದ ಸ್ಥಿತಿ ಇದು. ಈ ಸ್ಥಿತಿಯ ಶಿಲ್ಪೋದ್ಯಾನಕ್ಕೆ ವರ್ಷಕ್ಕೆ ₹74.64 ಲಕ್ಷವನ್ನು ನಿರ್ವಹಣೆಗೆ ನೀಡಲಾಗಿದೆ.

ಶಿಲ್ಪೋದ್ಯಾನ ಎಂಬ ಹೆಸರಿಗೇ ತದ್ವಿರುದ್ಧವಾಗಿದೆ ಇಲ್ಲಿನ ಪರಿಸ್ಥಿತಿ. ಉದ್ಯಾನದಲ್ಲಿದ್ದ 30 ಶಿಲ್ಪಗಳ ನಿರ್ವಹಣೆಯ ಹೊಣೆಯನ್ನು ಹೊತ್ತ ಬಿಡಿಎ ಹಾಗೂ ಗುತ್ತಿಗೆದಾರರ ನಿರ್ಲ-ಕ್ಷ್ಯದಿಂದ ಹಾಳುಬಿದ್ದಿವೆ. ಹಾಳಾಗಿರುವ ಶಿಲ್ಪಗಳನ್ನು ಸರಿಪಡಿಸುವ ಕೆಲಸ ಮಾಡಿಲ್ಲ. ಕೆಲವು ಶಿಲ್ಪಗಳು ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಮೂರು ಕೊಳವೆಬಾವಿ ಇದ್ದರೂ ಗಿಡ, ಹುಲ್ಲುಹಾಸಿಗೆ ನೀರಿಲ್ಲ. ಬಯಲು ರಂಗಮಂದಿರವನ್ನೂ ನಿರ್ವಹಣೆ ಮಾಡಿಲ್ಲ. ಮಳೆನೀರು ಸಂಗ್ರಹಕ್ಕೆ ಮಾಡಲಾದ ಕಾಲುವೆ ಹಾಗೂ ಕುಂಟೆ ನೀರಿಲ್ಲದೆ ಉದ್ಯಾನದ ತ್ಯಾಜ್ಯದ ಗುಂಡಿಯಾಗಿದೆ. ವಾಯು ವಿಹಾರಿಗಳಿಗಾಗಿ ನಿರ್ಮಿಸಿರುವ ಶೌಚಾಲಯ ಗಬ್ಬು ನಾರುತ್ತಿದೆ.

ಬಿಡಿಎ ಬನಶಂಕರಿ 6ನೇ ಹಂತ 1ನೇ ಬ್ಲಾಕ್‌ನಲ್ಲಿರುವ ಶಿಲ್ಪೋದ್ಯಾನವನ್ನು 2012ರಲ್ಲಿ ಅಂದಿನ ಮುಖ್ಯಮಂತ್ರಿ ಸದಾನಂದಗೌಡರು ಉದ್ಘಾಟಿಸಿದ್ದರು. '8 ಎಕರೆ ಪ್ರದೇಶದಲ್ಲಿ ಉದ್ಯಾನ ನಿರ್ಮಿಸಲು ಸುಮಾರು ₹4 ಕೋಟಿ ವೆಚ್ಚ ಮಾಡಲಾಗಿತ್ತು. ಒಂದು ವರ್ಷ ಉದ್ಯಾನ ಸುಸ್ಥಿತಿಯಲ್ಲಿತ್ತು' ಎಂದು ಸ್ಥಳೀಯ ನಿವಾಸಿಗಳು ದೂರುತ್ತಾರೆ.

'ಶಿಲ್ಪೋದ್ಯಾನ ಮೂಲೋದ್ದೇಶವನ್ನು ಕಳೆದುಕೊಂಡು, ನಿರ್ವಹಣೆ ಇಲ್ಲದೆ ಸೊರಗುತ್ತಿದೆ. ಬಿಡಿಎ ಅಧಿಕಾರಿಗಳು ಇತ್ತ ಗಮನಹರಿಸಬೇಕು' ಎಂದು ಬನಶಂಕರಿ ಆರನೇ ಹಂತ, ಬಿಡಿಎ ಬಡಾವಣೆ, ಒಂದನೇ ಬ್ಲಾಕ್ ನಿವಾಸಿಗಳ ಕಲ್ಯಾಣ ಸಂಘದ ಅಧ್ಯಕ್ಷ ಸಿ.ಎನ್. ಅಪ್ಪಯ್ಯ ಆಗ್ರಹಿಸಿದರು.

₹2.71 ಕೋಟಿ ವೆಚ್ಚ: ಶಿಲ್ಪೋದ್ಯಾನ ನಿರ್ವಹಣೆಗೆ ಬಿಡಿಎ ಮಾಡಿರುವ ವೆಚ್ಚದ ಮಾಹಿತಿಯನ್ನು ವಕೀಲರಾದ ಎಂ.ಬಾಲಕೃಷ್ಣ ಅವರು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿದ್ದಾರೆ. ಅದರಂತೆ 10 ವರ್ಷಗಳಲ್ಲಿ ₹2.71 ಕೋಟಿ ವೆಚ್ಚ ಮಾಡಲಾಗಿದೆ. ಕೆಲವು ವರ್ಷ ಅನುದಾನ ನೀಡಲಾಗಿಲ್ಲ. ಸಾಮಾನ್ಯವಾಗಿ ಉದ್ಘಾಟನೆಯಾದ ಮೂರು ವರ್ಷ ನಿರ್ವಹಣೆ ಶುಲ್ಕ ನೀಡುವಂತಿಲ್ಲ. ಆದರೂ ಈ ಶಿಲ್ಪೋದ್ಯಾನಕ್ಕೆ ಅದನ್ನೂ ನೀಡಿರುವುದು ಈ ಮಾಹಿತಿಯಿಂದ ಸ್ಪಷ್ಟವಾಗಿದೆ.

ಯಾವ ವರ್ಷ ಎಷ್ಟು ವೆಚ್ಚ?

ವರ್ಷ	ನಿರ್ವಹಣೆ	ಅಭಿವೃದ್ಧಿ	ಒಟ್ಟು
	(₹ಲಕ್ಷಗಳಲ್ಲಿ)		
2021-22	74.64	-	74.64
2020-21	55.54	53.80	109.34
2016-17	33.94	-	33.94
2014-15	-	50.20	50.20
2013-14	-	3.75	3.75
ಒಟ್ಟು	164.12	107.75	271.87

*ಮಾಹಿತಿ ಹಕ್ಕು ಕಾಯ್ದೆಯಡಿ ಬಿಡಿಎ ನೀಡಿರುವ ಅಂಕಿ–ಅಂಶ



ಶಿಲ್ಪೋದ್ಯಾನದಲ್ಲಿ ಬಳಿ ರಾಜಕಾಲುವೆ ಒತ್ತುವರಿ ಮಾಡಿಕೊಂಡು ಗೋಡೆ ನಿರ್ಮಿಸಿರುವುದು

ಗೋಡೆ ಕುಸಿತ, ರಾಜಕಾಲುವೆ ಒತ್ತುವರಿ

'ಶಿಲ್ಪೋದ್ಯಾನದ ಒಂದು ಭಾಗದಲ್ಲಿ ಕಾಂಪೌಂಡ್ ಕುಸಿದಿದ್ದು, ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಬಿಡಿಎ ದುರಸ್ತಿ ಮಾಡಿಸಿಲ್ಲ. ರಾಜಕಾಲುವೆ ನೀರು ಉದ್ಯಾನಕ್ಕೆ ಹರಿಯುತ್ತದೆ. ವಿದ್ಯುತ್ ದೀಪಗಳಿಲ್ಲದೆ ಅನೈತಿಕ ಚಟುವಟಿಕೆಗಳಿಗೆ ದಾರಿಯಾಗಿದೆ. ಪಕ್ಕದ ಅಪಾರ್ಟ್‌ಮೆಂಟ್‌ನವರು ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದಾರೆ' ಎಂದು ಬನಶಂಕರಿ ಆರನೇ ಹಂತ, ಬಿಡಿಎ ಬಡಾವಣೆ, ಒಂದನೇ ಬ್ಲಾಕ್ ನಿವಾಸಿಗಳ ಕಲ್ಯಾಣ ಸಂಘದ ಜಯದೇವ್ ಸಿ.ಎಂ ದೂರಿದರು.



ಜಯದೇವ್ ಸಿ.ಎಂ

ಹಣ ಬಿಡುಗಡೆ ಇಲ್ಲ...

'ತೋಟಗಾರಿಕೆ ವಿಭಾಗದಿಂದ ಗಿಡ–ಮರಗಳ ನಿರ್ವಹಣೆ ಮಾಡಲಾಗುತ್ತಿದೆ. ಶಿಲ್ಪಗಳ ನಿರ್ವಹಣೆಗೆ ನಮ್ಮ ವಿಭಾಗಕ್ಕೆ ಹಣ ನೀಡುತ್ತಿಲ್ಲ. ಈಗಾಗಲೇ ಹಲವು ಕೋಟಿಯನ್ನು ಎಂಜಿನಿಯರಿಂಗ್ ವಿಭಾಗದವರು ವೆಚ್ಚ ಮಾಡಿದ್ದಾರೆ. ಹೀಗಾಗಿ, ನಿರ್ವಹಣೆಗೆ ಹೆಚ್ಚಿನ ಹಣ ಇಲ್ಲ. ಇದೀಗ ಆಡಳಿತ ಮಂಡಳಿ ಸಭೆಗೆ ಪತ್ರ ಬರೆದಿದ್ದು, ಅಲ್ಲಿಂದ ಹಣ ಬಂದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಬಿಡಿಎ ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕ ಓಂಪ್ರಕಾಶ್ ಅವರು ತಿಳಿಸಿದರು.

ಸುದ್ದಿ 2 ನಿಮಿಷ

'ಕ್ಯಾನ್ಸರ್ ಬಗ್ಗೆ ಅನೇಕ ಮಿಥ್ಯೆ'

ಬೆಂಗಳೂರು: 'ಕ್ಯಾನ್ಸರ್ ಕಾಯಿಲೆ ಸುತ್ತಲೂ ಅನೇಕ ಮಿಥ್ಯೆ ಹಾಗೂ ತಪ್ಪು ಕಲ್ಪನೆಗಳಿವೆ. ರೋಗಿಗಳು ದೈಹಿಕ ಯುದ್ಧದ ಜತೆಗೆ ಮಾನಸಿಕ ಯುದ್ಧವನ್ನೂ ನಡೆಸಬೇಕಾಗುತ್ತದೆ' ಎಂದು ಚಲನಚಿತ್ರ ನಟಿ ಸಂಯುಕ್ತಾ ಹೊರನಾಡು ತಿಳಿಸಿದರು.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಆಸ್ಟರ್ ಸಿಎಂಐ ಆಸ್ಪತ್ರೆ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 'ಆರಂಭಿಕ ಹಂತದಲ್ಲಿಯೇ ರೋಗನಿರ್ಣಯ ಮತ್ತು ಸೂಕ್ತ ಚಿಕಿತ್ಸೆ ಮೂಲಕ ಕ್ಯಾನ್ಸರ್ ಗುಣಪಡಿಸಲು ಸಾಧ್ಯ. ರೋಗದ ಬಗ್ಗೆ ಅನಗತ್ಯವಾಗಿ ಭಯ ಉಂಟುಮಾಡಬಾರದು' ಎಂದರು.

ಆಸ್ಟರ್ ಆಸ್ಪತ್ರೆಗಳ ಪ್ರಾದೇಶಿಕ ನಿರ್ದೇಶಕ ಡಾ.ನಿತೀಶ್ ಶೆಟ್ಟಿ, 'ಕ್ಯಾನ್ಸರ್ ಕಾಯಿಲೆ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸಬೇಕು. ಆಧುನಿಕ ತಂತ್ರಜ್ಞಾನಗಳ ನೆರವಿನಿಂದ ಗುಣಮಟ್ಟದ ಚಿಕಿತ್ಸೆ ಸಾಧ್ಯವಾಗುತ್ತಿದೆ' ಎಂದರು.

ಕ್ಯಾನ್ಸರ್ ತಜ್ಞ ಡಾ.ಸೋಮಶೇಖರ್ ಎಸ್. ಪಿ., 'ಕ್ಯಾನ್ಸರ್ ಆರೈಕೆ ಅಂತರವನ್ನು ನಿವಾರಿಸುವುದು ಆರೋಗ್ಯ ಕ್ಷೇತ್ರದ ದೊಡ್ಡ ಸವಾಲು. ತಂತ್ರಜ್ಞಾನದ ಪ್ರಗತಿ, ಒಂದೇ ಸೂರಿನಡಿ ಎಲ್ಲಾ ಸೂಪರ್ ಸ್ಪೆಷಾಲಿಟಿ ಸೇವೆಗಳು, ವೈದ್ಯಕೀಯ ತಜ್ಞರ ನೆರವಿನಿಂದ ರೋಗಿಗಳಿಗೆ ಸಮಗ್ರ ಆರೈಕೆ ಒದಗಿಸಲು ಸಾಧ್ಯವಾಗುತ್ತಿದೆ' ಎಂದು ಹೇಳಿದರು.

ಆಸ್ಪತ್ರೆಯ ವೈದ್ಯಕೀಯ ಆಂಕೊಲಾಜಿ ವಿಭಾಗದ ಮುಖ್ಯಸ್ಥ ಡಾ.ಸಿ.ಎನ್. ಪಾಟೀಲ್, 'ಕ್ಯಾನ್ಸರ್ ಕಾಯಿಲೆಗೆ ಈಗ ರೋಗದ ಗಂಭೀರತೆ ಆಧರಿಸಿ ಚಿಕಿತ್ಸೆ ನೀಡುತ್ತಿದ್ದು, ಉತ್ತಮ ಫಲಿತಾಂಶ ಸಾಧ್ಯವಾಗುತ್ತಿದೆ' ಎಂದು ತಿಳಿಸಿದರು.



ಮಲೇಷ್ಯಾ: ಈ ವರ್ಷ 1.5 ಕೋಟಿ ಪ್ರವಾಸಿಗರ ನಿರೀಕ್ಷೆ

ಬೆಂಗಳೂರು: 'ಅತ್ಯಾಕರ್ಷಕ ತಾಣಗಳನ್ನು ಹೊಂದಿರುವ ಮಲೇಷ್ಯಾಗೆ 2023ರಲ್ಲಿ 1.5 ಕೋಟಿ ಅಂತರರಾಷ್ಟ್ರೀಯ ಪ್ರವಾಸಿಗರು ಭೇಟಿ ನೀಡುವ ನಿರೀಕ್ಷೆ ಇದೆ' ಎಂದು ಮಲೇಷ್ಯಾದ ಪ್ರವಾಸೋದ್ಯಮದ ವಿಭಾಗದ ಹಿರಿಯ ಉಪ ನಿರ್ದೇಶಕ ಮೊಹಮದ್ ಅಮಿರುಲ್ ರಿಜಲ್ ಅಬ್ದುಲ್ ರಹೀಂ ತಿಳಿಸಿದರು.

'ಭಾರತದ ಜತೆ ಅತ್ಯುತ್ತಮ ವಿಮಾನಯಾನ ಸಂಪರ್ಕವನ್ನು ಸಹ ಮಲೇಷ್ಯಾ ಹೊಂದಿದೆ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಭಾರತದಿಂದ ಮಲೇಷ್ಯಾಗೆ ಪ್ರತಿ ವಾರ 169 ವಿಮಾನ ಸಂಚರಿಸುತ್ತಿದ್ದು, 29 ಸಾವಿರ ಸೀಟುಗಳು ಲಭ್ಯವಿದೆ. ಜತೆಗೆ, ಮಲೇಷ್ಯಾ ಇತ್ತೀಚೆಗೆ ಭಾರತೀಯ ಪ್ರವಾಸಿಗರಿಗೆ ಇ-ವಿಸಾ ಯೋಜನೆ ಆರಂಭಿಸಿದೆ. ಇ–ವೀಸಾಗೆ ಅರ್ಜಿ ಸಲ್ಲಿಸಲು http://malaysiavisa.imi.gov.my/evisa/evisa.jsp ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

'ಮಲೇಷ್ಯಾ ಪ್ರವಾಸೋದ್ಯಮ ಇಲಾಖೆ ಜ.30ರಿಂದ ಫೆ.7ರವರೆಗೆ ಭಾರತದಲ್ಲಿ ರೋಡ್ ಷೋ ಏರ್ಪಡಿಸಿದೆ. ಜಗದೀಶ್ ಟೂರ್ಸ್ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಮ್ಯೂರಲ್ ಪ್ರದರ್ಶನಕ್ಕೆ ಚಾಲನೆ ನೀಡಲಾಗಿದೆ' ಎಂದರು.

ಜಗದೀಶ್ ಟೂರ್ಸ್‌ನ ಪಿ.ರಾಕೇಶ್, 'ಅಭಿಯಾನದ ಅಂಗವಾಗಿ ಟಕಿ–ಟಕಿ ರೆಸ್ಟೋರೆಂಟ್‌ನಲ್ಲಿ ಮಲೇಷ್ಯಾ ಆಹಾರ ಮೇಳ ಫೆ.2ರಿಂದ 15ರವರೆಗೆ ನಡೆಯಲಿದೆ' ಎಂದು ತಿಳಿಸಿದರು.

ಗಡಿಭಾಗದ ಜನರ ಅಭಿವೃದ್ಧಿಗೆ ₹200 ಕೋಟಿ

'ಗಡಿನಾಡ ಚೇತನ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಮಾರ್ಚ್ 31ರ ಒಳಗೆ ₹ 100 ಕೋಟಿ ಬಿಡುಗಡೆ ಮಾಡಲಾಗುವುದು. ಅಲ್ಲದೆ, 2023–24ನೇ ಸಾಲಿನ ಬಜೆಟ್‌ನಲ್ಲೂ ಮತ್ತೆ ₹ 100 ಕೋಟಿ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಗುರುವಾರ ಹಮ್ಮಿಕೊಂಡಿದ್ದ 'ಗಡಿನಾಡ ಚೇತನ' ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ಈ ಅನುದಾನವನ್ನು ಗಡಿಭಾಗ, ಹೊರನಾಡ ಕನ್ನಡಿಗರ ಭಾವನೆಗಳಿಗೆ ಪೂರಕವಾದ ಕೆಲಸಗಳಿಗೆ ಬಳಸಬೇಕು' ಎಂದು ಸಲಹೆ ನೀಡಿದರು.



ಕಾರ್ಯಕ್ರಮದಲ್ಲಿ ಎಂ.ಎಸ್. ಸಿಂಧೂರ, ಅಶೋಕ ಚಂದರಗಿ, ರಾಜೇಂದ್ರ ಕಲ್ಲೂರಾಯ (ಎಡನೀರು ಮಠ) ಅವರಿಗೆ 'ಗಡಿನಾಡ ಚೇತನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಕಾಶ್ ಮತ್ತೀಹಳ್ಳಿ, ರಾಣಿ ಸತೀಶ್, ಸಿ.ಸೋಮಶೇಖರ, ಬಸವರಾಜ ಬೊಮ್ಮಾಯಿ, ಚಂದ್ರಶೇಖರ ಕಂಬಾರ, ಲೀಲಾದೇವಿ ಆರ್. ಪ್ರಸಾದ್ ಇದ್ದಾರೆ – ಪ್ರಜಾವಾಣಿ ಚಿತ್ರ.

'ಒಂದೇ ಪ್ರದೇಶದಲ್ಲಿ ಭಾಷೆಗಳ ಆಧಾರದಲ್ಲಿ ರಾಜ್ಯಗಳು ಅಸ್ತಿತ್ವಕ್ಕೆ ಬಂದ ಕಾರಣದಿಂದ ಗಡಿ ಭಾಗದಲ್ಲಿ ಕೆಲವು ಸಮಸ್ಯೆಗಳಿವೆ. ಹಲವು ಭಾಗಗಳಲ್ಲಿ ಜನರು ಸೌಹಾರ್ದದಿಂದ ಬದುಕುತ್ತಿದ್ದಾ-ರೆ. ಆದರೆ, ರಾಜಕೀಯ ಕಾರಣಗಳಿಗಾಗಿ ಕೆಲವರು ಇಲ್ಲದ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ. ಇಂತಹ ಮನಃಸ್ಥಿತಿ ರಾಜ್ಯಕ್ಕೆ, ದೇಶಕ್ಕೆ ಒಳ್ಳೆಯದಲ್ಲ' ಎಂದರು.

'ಕರ್ನಾಟಕದ ಮುಖ್ಯಮಂತ್ರಿಯಾಗಿ ಗಡಿಭಾಗ, ಹೊರನಾಡ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ. ಸರ್ಕಾರ ತವರು ಮನೆಯ ಜವಾಬ್ದಾರಿ ನಿಭಾಯಿಸುತ್ತಿದೆ. ಕನ್ನಡ ಭಾಷೆ, ನೆಲ, ಜಲ, ಗಡಿ ಸುರ-ಕ್ಷಿತವಾಗಿವೆ. ಕೆಲವರು ಹೇಳಿದಂತೆ ಆತಂಕಕ್ಕೆ ಯಾವ ಕಾರಣವೂ ಇಲ್ಲ' ಎಂದು ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, 'ಭಾಷಾ ವಿಷಯದಲ್ಲಿ ರಾಜ್ಯಗಳ ಮಧ್ಯೆ ಸಮಸ್ಯೆ ಇದ್ದರೂ, ಸಾಂಸ್ಕೃತಿಕವಾಗಿ ಒಗ್ಗೂಡಿದ್ದೇವೆ. ಮಹಾರಾಷ್ಟ್ರದ ರಂಗಭೂಮಿಗೆ ಕರ್ನಾಟಕದ ಕೊಡುಗೆ ಸಾಕಷ್ಟಿದೆ. ಅದೇ ರೀತಿ ವಿವಿಧ ರಾಜ್ಯಗಳ ಮಧ್ಯೆ ಅನನ್ಯ ಸಾಂಸ್ಕೃತಿಕ ಬಾಂಧವ್ಯಗಳು ಬೆಸೆದಿವೆ' ಎಂದರು.

ಪ್ರಶಸ್ತಿ ಪ್ರದಾನ: 'ಗಡಿನಾಡ ಚೇತನ' ಪ್ರಶಸ್ತಿಯನ್ನು ಜತ್ತದ ಕನ್ನಡ ಹೋರಾಟಗಾರ ಎಂ.ಎಸ್. ಸಿಂಧೂರ, ಬೆಳಗಾವಿಯ ಅಶೋಕ್ ಚಂದರಗಿ ಹಾಗೂ ಕಾಸರಗೋಡಿನ ಕನ್ನಡದ ಅಸ್ಮಿತೆಯ ಸಾಂಸ್ಕೃತಿಕ ಪೀಠ ಎಂದೇ ಗುರುತಿಸಿಕೊಂಡ ಎಡನೀರು ಮಠಕ್ಕೆ ನೀಡಿದ ಪ್ರಶಸ್ತಿಯನ್ನು ರಾಜೇಂದ್ರ ಕಲ್ಲೂರಾಯ ಅವರಿಗೆ ಪ್ರದಾನ ಮಾಡಲಾಯಿತು.

ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ಮಾಜಿ ಸಚಿವೆಯರಾದ ಲೀಲಾದೇವಿ ಆರ್. ಪ್ರಸಾದ್, ರಾಣಿ ಸತೀಶ್ ಉಪಸ್ಥಿತರಿದ್ದರು.

ಆಂಬುಲೆನ್ಸ್‌ಗೆ ಸಿಗದ ದಾರಿ: ಮಗು ಸಾವು

ಬೆಂಗಳೂರು: ಹಾಸನದಿಂದ ಬೆಂಗಳೂರಿಗೆ ಚಿಕಿತ್ಸೆಗೆ ಕರೆತರುತ್ತಿದ್ದ ಒಂದೂವರೆ ವರ್ಷದ ಮಗು, ವಾಹನ ದಟ್ಟಣೆಯಲ್ಲಿ ಆಂಬುಲೆನ್ಸ್ ಸಿಲುಕಿದ ಕಾರಣ ಸಕಾಲದಲ್ಲಿ ಆಸ್ಪತ್ರೆಗೆ ದಾಖಲಿಸಲಾಗದೇ ಮಾರ್ಗಮಧ್ಯೆಯೇ ಮೃತಪಟ್ಟಿತು.

ಗುರುವಾರ ಅಪಘಾತ ಸಂಭವಿಸಿತ್ತು. ನೆಲಮಂಗಲದಿಂದ ಗೊರಗುಂಟೆಪಾಳ್ಯವರೆಗೆ ಮುಖ್ಯರಸ್ತೆಯಲ್ಲಿ ವಿಪರೀತ ದಟ್ಟಣೆ ಇತ್ತು ಎಂದು ಸಂಬಂಧಿಕರು ತಿಳಿಸಿದರು.

ಮಗುವನ್ನು ಆಸ್ಪತ್ರೆಗೆ ಸೇರಿಸಲು ನೆರವಾಗದ ಪೊಲೀಸರ ವಿರುದ್ಧ ಸಾರ್ವಜನಿಕರು ಆಕ್ರೋಶ ಹೊರಹಾಕಿದರು.

ಬೆಂಗಳೂರು ರೇಸ್

ಇವಾಲ್ಡೊ ಗೆಲ್ಲುವ ನಿರೀಕ್ಷೆ

ಸ್ಟೇಯರ್ಸ್ ಟ್ರಯಲ್ ಸ್ಟೇಕ್ಸ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಇವಾಲ್ಡೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಎಮ್ಮಾ 4, ವಾರ್ ಟ್ರೈಯಲ್ 7, ಆಕ್ಟಿವೇಟೆಡ್ 1
2ನೇ ರೇಸ್: ಸೀ ಮೈ ಹೀಲ್ಸ್ 2, ಮಾಸ್ಟರ್ ಆಫ್ ಸಕ್ಸಸ್ 7, ಬ್ರಹ್ಮಾಸ್ತ್ರಮ್ 6
3ನೇ ರೇಸ್: ಕೊನಾಬಾಸ್ 1, ಇಂಪಿಯಾನ 11, ಕ್ಲಕ, ನರ್ 2
4ನೇ ರೇಸ್: ರೋಮನ್ ಸ್ಪಿರಿಟ್ 3, ರೈನ್‌ಬೋ ಡ್ರೀಮರ್ 2, ಗ್ರೀನ್‌ವಿಚ್ 7
5ನೇ ರೇಸ್: ಸಂಟೋರಿನೊ 1, ಕಿಂಗ್ ಆಫ್ ವಾರ್ 2, ರಿಪಲ್ ಎನ್ ಸ್ಟಾರ್ಮ್ 3
6ನೇ ರೇಸ್: ಕ್ರೌನ್ ಕಾನ್ಸರ್ಟ್ 8, ಕ್ವೀನ್ ಸ್ಪಿರಿಟ್ 1, ಮಿಸ್ಟಿಕ್ ಐ 6
7ನೇ ರೇಸ್: ಇವಾಲ್ಡೊ 1, ಕರಣ್‌ವೀರ್ 3
8ನೇ ರೇಸ್: ನಿಕೋಲಿನ 2, ವೈಟ್ ರೋಸಸ್ 4, ಓಪನ್ ಒನ್ 7
9ನೇ ರೇಸ್: ಬೆಲ್ಡೋನ 5, ಹೋಪ್ ಐಲಾಂಡ್ 4, ಕ್ಲಾಸಿಕ್ ಚಾರ್ಮ್ 2

ಉತ್ತಮ ಬೆಟ್: ಕ್ರೌನ್ ಕಾನ್ಸರ್ಟ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
5,6,7,8,9	1,2,3	4,5,6	7,8,9

4ರಿಂದ ಚಿತ್ಪಾವನ ಸಮಾಜದ ಸುವರ್ಣ ಸಂಭ್ರಮ

ಬೆಂಗಳೂರು: ಚಿತ್ಪಾವನ ಸಮಾಜದ ವತಿಯಿಂದ ಫೆ. 4, 5ರಂದು 'ಸುವರ್ಣ ಸಂಭ್ರಮ' ಕಾರ್ಯಕ್ರಮವನ್ನು ಬಸವನಗುಡಿಯ ಗುರುನರಸಿಂಹ ಸಭಾ-ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

'ಫೆ.4ರಂದು ಸ್ವಾತಂತ್ರ್ಯ ಯೋಧರ ಚಿತ್ರ ಪ್ರದರ್ಶನದ ಉದ್ಘಾಟನೆ, ಯಕ್ಷಗಾನ ವಿದ್ವಾಂಸ ಪ್ರಭಾಕರ ಜೋಶಿ ಅವರಿಗೆ ಸನ್ಮಾನ, ಆರ್.ಎಸ್. ಮರಾಠೆ ಅವರ ಜೀವನಗಾಥೆ 'ರಂಗೊಮಾಮ್ಮಾ' ಪುಸ್ತಕ, ಚಿತ್ಪಾವನ ಸುವರ್ಣ ಭಾವಚಿತ್ರ ಸಂಪುಟ, ಚಿತ್ಪಾವನ ಸಮಾಜ ಸುವರ್ಣ ಸ್ಮೃತಿ ಬಿಡುಗಡೆ ಮಾಡಲಾಗುವುದು. ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಮಾಡಲಾಗುವುದು' ಎಂದು ಸಮಾಜದ ಅಧ್ಯಕ್ಷ ಎಂ.ಗಣಪತಿ ಜೋಶಿ ತಿಳಿಸಿದರು.

'ಫೆ.5ರಂದು ಗೋವಿಂದ ಎನ್. ಫಡಕೆ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದ ಚಿತ್ಪಾವನ ಸಂಘಗಳ ಪದಾಧಿಕಾರಿಗಳ ಸಭೆ ಹಮ್ಮಿಕೊಳ್ಳಲಾಗಿದೆ. ನೂಪುರ ತಂಡದವರು 'ಇದಂ ಬ್ರಾಹ್ಮ್ಯಂ ಇದಂ ಕ್ಷಾತ್ರಂ' ನಾಟಕ ಪ್ರಸ್ತುತ ಪಡಿಸಲಿದ್ದಾರೆ' ಎಂದು ಸುದ್ದಿ-ಗೋಷ್ಠಿಯಲ್ಲಿ ಹೇಳಿದರು.



ಹೂಡಿಯಲ್ಲಿ ಹಮ್ಮಿಕೊಂಡಿದ್ದ ಕಬಡ್ಡಿ, ಕ್ರಿಕೆಟ್ ಮತ್ತು ವಾಲಿಬಾಲ್ ಟೂರ್ನಿಗಳಲ್ಲಿ ವಿಜೇತರಾದ ತಂಡಗಳಿಗೆ ಶಾಸಕ ಅರವಿಂದ ಲಿಂಬಾವಳಿ ಬಹುಮಾನ ವಿತರಿಸಿದರು. ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಹೂಡಿ ಪಿಳ್ಳಪ್ಪ, ಹೂಡಿ ಮಂಜುನಾಥ್ ಇದ್ದರು

104 ಸೇವಾ ಕಾರ್ಯಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ವಿಧಾನಸಭಾ ಕ್ಷೇತ್ರದ ಶಾಸಕ ಅರವಿಂದ ಲಿಂಬಾವಳಿ ಅವರ ಹುಟ್ಟುಹಬ್ಬದ ಅಂಗವಾಗಿ ಕ್ಷೇತ್ರದ ಮುಖಂಡರು ಹಾಗೂ ಕಾರ್ಯಕರ್ತರು ಕ್ಷೇತ್ರದಾದ್ಯಂತ 19 ವಾರ್ಡ್‌ಗಳಲ್ಲಿ 104 ಬಿಜೆಪಿ ಶಕ್ತಿ ಕೇಂದ್ರಗಳಲ್ಲಿ 104 ಸೇವಾ ಕಾರ್ಯಗಳನ್ನು ಮಾಡಿದರು.

ಶಾಸಕ ಅರವಿಂದ ಲಿಂಬಾವಳಿ ಅವರು ಮಹದೇವಪುರ ಗ್ರಾಮಾಂತರ ಮಂಡಲದ ಜ್ಯೋತಿಪುರ ಗ್ರಾಮದ ಜ್ಯೋತಿಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನೂತನವಾಗಿ ನಿರ್ಮಿಸಿದ್ದ ಕಲ್ಯಾಣಿ ಉದ್ಘಾಟಿಸಿದರು.

ಎಇಸಿಎಸ್ ಬಡಾವಣೆಯ ಹಾಗೂ ಮಾರತ್ತಹಳ್ಳಿ ವ್ಯಾಪ್ತಿಗೆ ಸೇರುವ ಅಶ್ವಥ್ ನಗರದಲ್ಲಿ ಸಾರ್ವಜನಿಕರ ದಟ್ಟಣೆ ತಪ್ಪಿಸಲು ನಿರ್ಮಾಣ ಮಾಡಲಾಗಿರುವ ರೈಲ್ವೆ ಅಂಡರ್ ಪಾಸ್ ಉದ್ಘಾಟಿಸಿದರು.

ಕಾಡುಸೊಣ್ಣಪ್ಪನಹಳ್ಳಿ ಶಕ್ತಿ ಕೇಂದ್ರದ ಹೊಸೂರು ಬಂಡೆ ಗ್ರಾಮದ ಗೋವು ಆಶ್ರಮದಲ್ಲಿ ಗೋವುಗಳಿಗೆ ಮೇವು ವಿತರಣೆ ಬಡವರಿಗೆ ಹಾಸಿಗೆ ವಿತರಿಸಲಾಯಿತು. ಕೊಡತಿಯ ಹಾಲ-ನಾಯಕನಹಳ್ಳಿಯಲ್ಲಿ 100 ಕ್ಕೂ ಹೆಚ್ಚು ಹಿರಿಯ ನಾಗರೀಕರ ಮನೆಗಳಿಗೆ ತೆರಳಿ ಗೌರವ ಸನ್ಮಾನಿಸಿದರು.

ಕಾರ್ಯಕರ್ತರು ಹಮ್ಮಿಕೊಂಡಿದ್ದ ಯುವಕರಿಗೆ ಕ್ರೀಡಾ ಉತ್ಸವ, ಬಡವರಿಗೆ ಉಚಿತ ಅರೋಗ್ಯ ಶಿಬಿರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ಮಹಿಳೆಯರಿಗೆ ದಿನಸಿ ಕಿಟ್ ವಿತರಣೆಯಂತಹ ಹಲವಾರು ಸೇವಾ ಕಾರ್ಯಕ್ರಮಗಳು ನಡೆದವು.

ಅರವಿಂದ ಲಿಂಬಾವಳಿ ಮಾತನಾಡಿ, 'ನನ್ನ ಹುಟ್ಟುಹಬ್ಬದ ಅಂಗವಾಗಿ ಕ್ಷೇತ್ರದಾದ್ಯಂತ ಮುಖಂಡರು ಕಾರ್ಯಕರ್ತರು 104 ಸೇವಾ ಕಾರ್ಯಕ್ರಮಗಳು ಹಮ್ಮಿ-ಕೊಂಡಿರುವುದು ಸಂತಸ ತಂದಿದೆ' ಎಂದರು.

ಕ್ಷೇತ್ರ ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ಗ್ರಾಮಾಂತರ ಮಂಡಲ ಅಧ್ಯಕ್ಷ ನಟರಾಜ್, ಪ್ರಧಾನ ಕಾರ್ಯದರ್ಶಿ ರಾಜೇಶ್, ನಲ್ಲೂರಹಳ್ಳಿ ಚಂದ್ರಶೇಖರ್ ರೆಡ್ಡಿ, ಹೂಡಿ ಪಿಳ್ಳಪ್ಪ, ಮಂಜುನಾಥ್ ಇದ್ದರು.

'ಹಾಸನ–ಮಾರನಹಳ್ಳಿ ಚತುಷ್ಪಥ: ಮಳೆಗಾಲದ ನಂತರವೇ ಪೂರ್ಣ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹಾಸನ– ಸಕಲೇಶಪುರ–ಮಾರನಹಳ್ಳಿ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್ 75) 45 ಕಿ.ಮೀ. ಚತುಷ್ಪಥ ಯೋಜನೆಯಲ್ಲಿ 30 ಕಿ.ಮೀ. ಕಾಮಗಾರಿ ಆಗಿದೆ. ಸಂಪೂರ್ಣ ಕಾಮಗಾರಿ ಮಳೆಗಾಲದ ನಂತರವೇ ಮುಗಿಯಲಿದೆ' ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, '5 ಕಿ.ಮೀ. ಕಾಮಗಾರಿಯನ್ನು ಜೂನ್ ಒಳಗೆ ಪೂರ್ಣಗೊಳಿಸುವ ಗುರಿ ಇದೆ. ಉಳಿದ 10 ಕಿ.ಮೀ.ಯ ಕಾಮಗಾರಿ ಕೈಗೆತ್ತಿಕೊ-ಳ್ಳಲು ರಸ್ತೆ ಬಂದ್ ಮಾಡಬೇಕಾಗುತ್ತದೆ' ಎಂದು ತಿಳಿಸಿದರು.

ಈಶ ಯೋಗ ಕೇಂದ್ರ: ಯಥಾಸ್ಥಿತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರದ ಆವಲ-ಗುರ್ಕಿಯಲ್ಲಿ ಈಶ ಯೋಗ ಕೇಂದ್ರವು ನಿರ್ಮಿಸಿರುವ ಆದಿಯೋಗಿ ಪ್ರತಿಮೆಯ ಸ್ಥಳದಲ್ಲಿ ಪರಿಸರಕ್ಕೆ ಹಾನಿಯಾಗುವಂತಹ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸದೆ ಯಥಾಸ್ಥಿತಿ ಕಾಯ್ದುಕೊಂಡು ಹೋಗಬೇಕು' ಎಂಬ ಮಧ್ಯಂತರ ಆದೇಶವನ್ನು ಹೈಕೋರ್ಟ್ ಮುಂದುವರಿಸಿದೆ.

ನಂದಿಬೆಟ್ಟದ ಸಮೀಪ 112 ಅಡಿ ಎತ್ತರದ ಆದಿಯೋಗಿ ಪ್ರತಿಮೆ ನಿರ್ಮಿಸಿರುವುದನ್ನು ಪ್ರಶ್ನಿಸಿ ಚಿಕ್ಕಬಳ್ಳಾಪುರ ಕಸಬಾ ಹೋಬಳಿಯ ಚಂಬಳ್ಳಿಯ ನಿವಾಸಿ ಎಸ್.ಕ್ಯಾತಪ್ಪ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಈಶ ಯೋಗ ಕೇಂದ್ರದ ಪರ ವಕೀಲರು, 'ಯಥಾಸ್ಥಿತಿ ಆದೇಶವು ಪೂರ್ವಾಗ್ರಹ ಪೀಡಿತವಾಗಿದೆ. ಆದ್ಯತೆಯ ಮೇರೆಗೆ ಪ್ರಕರಣ ಆಲಿಸಬೇಕು' ಎಂದು ಅವರು ಮನವಿ ಮಾಡಿದರು.

ಇದಕ್ಕೆ ನ್ಯಾಯಪೀಠವು, 'ನಾವು ಪೂರ್ವಗ್ರಹ ಉಂಟುಮಾಡುವ ಯಾವುದೇ ಆದೇಶ ನೀಡಿಲ್ಲ. ಎಲ್ಲರ ಹಿತಾಸಕ್ತಿ ಕಾಪಾಡಲಾಗುವುದು. ಯಾರೊಬ್ಬರ ಇಚ್ಛೆಗೆ ಅನುಗುಣವಾಗಿ ನಡೆದುಕೊಳ್ಳಲಾಗದು. ಈಗ ನಿಮ್ಮ ಪ್ರಕರಣವನ್ನು ಕೈಗೆತ್ತಿಕೊಂಡರೆ ಎಲ್ಲರೂ ನಾಳೆ ನಮ್ಮ ಪ್ರಕರಣವನ್ನು ಪರಿಗಣಿಸಿ ಎಂದು ಕೋರಬಹುದು. ಪ್ರಾಯೋಗಿಕವಾಗಿ ಇದು ಸಾಧ್ಯವಿಲ್ಲ' ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ಏತನ್ಮಧ್ಯೆ, ಅರ್ಜಿದಾರರ ಪರ ವಕೀಲ ಎಂ.ಶಿವಕುಮಾರ್, 'ಟಿವಿ ಮಾಧ್ಯಮಗಳು ಸುಪ್ರೀಂಕೋರ್ಟ್ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರನ್ನು ಅಶಾಂತಿ ಭೂಷಣ್ ಎಂದು ಜರೆದಿವೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರು, 'ಅರ್ಜಿಯಲ್ಲಿ ಟಿವಿ ಮಾಧ್ಯಮಗಳು ಪ್ರತಿವಾದಿಗಳಲ್ಲ. ಈ ಕುರಿತು ಪ್ರತ್ಯೇವಾದ ಅರ್ಜಿ ದಾಖಲಿಸಿ' ಎಂದು ಸಲಹೆ ನೀಡಿದರು.

'25 ದೇವಸ್ಥಾನಗಳಲ್ಲಿ ಮಾಸ್ಟರ್‌ಪ್ಲಾನ್ ಶೀಘ್ರ ಜಾರಿ'

ಬೆಳಗಾವಿ: 'ಮುಜರಾಯಿ ಇಲಾಖೆಗೆ ಸೇರಿದ ರಾಜ್ಯದ 25 ಎ–ಗ್ರೇಡ್ ದೇವಸ್ಥಾನಗಳಲ್ಲಿ 'ಮಾಸ್ಟರ್ ಪ್ಲಾನ್' ಜಾರಿಗೆ ಸಿದ್ಧತೆ ನಡೆಸಲಾಗಿದೆ. ಬಜೆಟ್ ಅಧಿವೇಶನ ಮುಗಿದ ತಕ್ಷಣ ಇದನ್ನು ಕಾರ್ಯಗತ ಮಾಡಲಾಗುವುದು' ಎಂದು ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

'ಬೆಂಗಳೂರು ನಗರವೂ ಸೇರಿದಂತೆ ರಾಜ್ಯದ ಹಲವೆಡೆ ದೇವಸ್ಥಾನಗಳ ಜಾಗ ಅತಿಕ್ರಮಣವಾಗಿದೆ. ಮುಜರಾಯಿ ಹಾಗೂ ವಕ್ಫ್ ಭೂಮಿ ಅತಿಕ್ರಮ-ಣವನ್ನು 'ಮಾಸ್ಟರ್ ಪ್ಲಾನ್' ಮೂಲಕ ತೆರವು ಮಾಡಲಾಗುವುದು' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡ ದೇವಸ್ಥಾನ ಅಭಿವೃದ್ಧಿಗೆ ಸ್ವತಃ ಮುಖ್ಯಮಂತ್ರಿ ಆಸ್ಥೆ ವಹಿಸಿದ್ದಾರೆ. ಈಗಾಗಲೇ ಒತ್ತುವರಿ ತೆರವು ಮುಂದುವರಿದಿದೆ. ಮಾಸ್ಟರ್ ಪ್ಲಾನ್‌ನಲ್ಲಿ ಈ ದೇವಸ್ಥಾನದ ಅಭಿವೃದ್ಧಿ ಕೂಡ ಸೇರಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಕಾಶಿಯಾತ್ರೆ' ಯೋಜನೆ ಫೆ.15ರಿಂದ: 'ವಿಪರೀತ ಚಳಿ ಇದ್ದ ಕಾರಣ 'ಕಾಶಿಯಾತ್ರೆ' ಯೋಜನೆಯನ್ನು ಎರಡು ತಿಂಗಳಿಂದ ಸ್ಥಗಿತ ಮಾಡಲಾಗಿತ್ತು. ಫೆ.15ರಿಂದ ಮತ್ತೆ ಆರಂಭಿಸಲಾಗುವುದು' ಎಂದು ತಿಳಿಸಿದರು.

ಯಲಹಂಕದಲ್ಲಿ ಫೆ.13ರಿಂದ 17ರವರೆಗೆ ಏರೋ ಇಂಡಿಯಾ

'ಎಲ್‌ಸಿಎ-ತೇಜಸ್' ಯುದ್ಧ ವಿಮಾನ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ಣ ಪ್ರಮಾಣದಲ್ಲಿ ಅಂತಿಮ ಕಾರ್ಯಾಚರಣೆ ಅನುಮತಿ (ಎಫ್‌ಒಸಿ) ಪಡೆದಿರುವ 'ಎಲ್‌ಸಿಎ-ತೇಜಸ್' ಯುದ್ಧ ವಿಮಾನವು ಏರೋ ಇಂಡಿಯಾದ ಭಾರತೀಯ ಪೆವಿಲಿಯನ್‌ನಲ್ಲಿ ಪ್ರದರ್ಶಿತವಾಗಲಿದೆ.

ಫೆ.13ರಿಂದ 17ರವರೆಗೆ ಯಲಹಂಕ ವಾಯುನೆಲೆಯಲ್ಲಿ ನಡೆಯಲಿರುವ ಏರೋ ಇಂಡಿಯಾದ 14ನೇ ಆವೃತ್ತಿಯಲ್ಲಿ 'ಏರ್–ಶೋ' ಮತ್ತು ವೈಮಾನಿಕ ಕ್ಷೇತ್ರದ ಸಾಧನೆಗಳನ್ನು ಬಿಂಬಿಸಲಾಗುತ್ತಿದೆ.

ಭಾರತದ ವೈಮಾನಿಕ ಕ್ಷೇತ್ರದ ಸಾಧನೆಗಳನ್ನು ಬಿಂಬಿಸಲು ಪ್ರತ್ಯೇಕ ವಿಭಾಗವನ್ನು ತೆರೆಯಲಾಗಿದೆ.

ಖಾಸಗಿ ಸಹಭಾಗಿತ್ವದಲ್ಲಿ ಉತ್ಪಾದಿಸುತ್ತಿರುವ 'ಎಲ್‌ಸಿಎ-ತೇಜಸ್' ಯುದ್ಧ ವಿಮಾನದ ವಿವಿಧ ರಚನಾತ್ಮಕ ಮಾದರಿಗಳು, ಸಿಮ್ಯುಲೇಟರ್‌ಗಳನ್ನು (ಎಲ್‌ಆರ್‌ಯು) ಪ್ರದರ್ಶಿಸಲಾಗುತ್ತಿದೆ.



ತೇಜಸ್ ಯುದ್ಧ ವಿಮಾನ

ಎಲ್‌ಸಿಎ ತೇಜಸ್ ಒಂದೇ ಎಂಜಿನ್ ಹೊಂದಿದ್ದು, ಹಗುರ, ಚಾಕಚಕ್ಯತೆಯ ಬಹು-ಪಾತ್ರದ ಸೂಪರ್ ಸಾನಿಕ್ ಯುದ್ಧ ವಿಮಾನವಾಗಿದೆ. ಇದು ಸುಧಾರಿತ ವಿಮಾನ ನಿಯಂತ್ರಣಗಳನ್ನು ಹೊಂದಿದೆ.

ಗ್ಲಾಸ್ ಕಾಕ್‌ಪಿಟ್, ಹಾರಾಟದ ವೇಳೆಯೇ ಇಂಧನ ತುಂಬುವುದು ಸೇರಿದಂತೆ ಅತ್ಯಾಧುನಿಕ ವೈಶಿಷ್ಟ್ಯ-ಗಳನ್ನು ತೇಜಸ್ ಹೊಂದಿದೆ. ಪ್ರಸ್ತುತ ವಾಯುಪಡೆ ಯುದ್ಧ ವಿಮಾನ, ಎಲ್‌ಸಿಎ ನೌಕಾ ವಿಮಾನ ಮತ್ತು ಎರಡು ಆಸನಗಳಲ್ಲಿ ಲಭ್ಯವಿದೆ ಎಂದು ರಕ್ಷಣಾ ಇಲಾಖೆ ಪ್ರಕಟಣೆ ತಿಳಿಸಿದೆ.

ವಿಮಾನದ ವೈಶಿಷ್ಟ್ಯಗಳು

- ಇದು ಚಿಕ್ಕ ಮತ್ತು ಹಗುರವಾದ ಯುದ್ಧ ವಿಮಾನ
- ಅತ್ಯುತ್ತಮ ಸುರಕ್ಷತಾ ವ್ಯವಸ್ಥೆ
- ಗ್ರಾಹಕರ ಅಗತ್ಯಗಳಿಗೆ ತಕ್ಕಂತೆ ರೂಪಿಸಲಾದ ಯುದ್ಧ ವಿಮಾನ
- ಅತಿ ಎತ್ತರದಲ್ಲಿ ಹಾರಾಡುವ ಸೂಪರ್ ಸಾನಿಕ್
- ಕಾರ್ಯಾಚರಣೆಗೆ ಕಡಿಮೆ ವೆಚ್ಚ ಮತ್ತು ನಿರ್ವಹಣಾಸ್ನೇಹಿ

ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆ 23ರಿಂದ ಆರಂಭ

ಬೆಂಗಳೂರು: ರಾಜ್ಯದ ಎಲ್ಲ ಪ್ರೌಢ ಶಾಲೆಗಳಲ್ಲೂ ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆಗಳನ್ನು ಫೆ.23ರಿಂದ ಮಾರ್ಚ್ 1ರವರೆಗೆ ನಡೆಸುವಂತೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವೇಳಾಪಟ್ಟಿ ಬಿಡುಗಡೆ ಮಾಡಿದೆ.

ಫೆ.23ರಂದು ಪ್ರಥಮ ಭಾಷಾ ವಿಷಯಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ ಎಲ್ಲವೂ 100 ಅಂಕಗಳು), 24ರಂದು ದ್ವಿತೀಯ ಭಾಷೆ ಇಂಗ್ಲಿಷ್, ಕನ್ನಡ (80 ಅಂಕಗಳು), 25ರಂದು ತೃತೀಯ ಭಾಷಾ ವಿಷಯಗಳು (80 ಅಂಕಗಳು), 27ರಂದು ಗಣಿತ, 28ರಂದು ವಿಜ್ಞಾನ, ಮಾರ್ಚ್ 1ರಂದು ಸಮಾಜ ವಿಜ್ಞಾನ (ತಲಾ 80 ಅಂಕಗಳು) ಪರೀಕ್ಷೆಗಳು ನಡೆಯಲಿವೆ.

ಎಲ್ಲ ಪರೀಕ್ಷೆಗಳನ್ನೂ ಪ್ರತಿದಿನ ಬೆಳಿಗ್ಗೆ 10.30ರಿಂದ 1.30ರವರೆಗೆ ನಡೆಸಬೇಕು. ಜೆಟಿಎಸ್ ಸೇರಿದಂತೆ ಪರ್ಯಾಯ ವಿಷಯಗಳಿಗೆ ಶಾಲಾ ಹಂತದದಲ್ಲೇ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿಕೊಂಡ,ಪರೀಕ್ಷೆಗಳನ್ನು ನಡೆಸಲು ಮುಖ್ಯ ಶಿಕ್ಷಕರು ಕ್ರಮ ಕೈಗೊಳ್ಳಬೇಕು ಎಂದು ಮಂಡಳಿ ನಿರ್ದೇಶಕರು ಸೂಚಿಸಿದ್ದಾರೆ.

‘ಜಾನುವಾರು ರಕ್ಷಣೆಗೆ ಕೇಂದ್ರದ ನೆರವು’

ಬೆಂಗಳೂರು: ‘ರಾಜ್ಯದ ಜಾನುವಾರುಗಳ ರಕ್ಷಣೆ, ಪಾಲನೆ, ಪೋಷಣೆ ಹಾಗೂ ಅಭಿವೃದ್ಧಿಗೆ ವಿವಿಧ ಯೋಜನೆಗಳಡಿ ಕೇಂದ್ರ ಸರ್ಕಾರ ₹ 60 ಕೋಟಿ ಬಿಡುಗಡೆ ಮಾಡಿದೆ’ ಎಂದು ಪಶುಸಂಗೋಪನೆ ಸಚಿವ ಪ್ರಭು ಬಿ. ಚವ್ಹಾಣ್ ತಿಳಿಸಿದ್ದಾರೆ.

ಕೇಂದ್ರ ಪಶುಸಂಗೋಪನೆ ಸಚಿವ ಪುರಷೋತ್ತಮ್ ರೂಪಾಲ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ ಬಳಿಕ ಮಾಹಿತಿ ನೀಡಿದ ಸಚಿವರು, ‘2022-23ನೇ ಸಾಲಿನ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಜಾನುವಾರುಗಳ ವಿಮಾ ಸೌಲಭ್ಯಕ್ಕೆ ₹ 11.60 ಕೋಟಿ, ವಿಸ್ತರಣೆ, ತರಬೇತಿಗೆ ₹13.04 ಕೋಟಿ, ಪಶುಪಾಲಕರ ನೆರವಿಗೆ ₹ 30 ಕೋಟಿ ಅನುದಾನ ನೀಡಿದೆ’ ಎಂದು ವಿವರಿಸಿದ್ದಾರೆ.

'ನಟನ' ಬೇರು ನಟನೆ ಉಸಿರು



ರಂಗಭೂಮಿಯಲ್ಲಿ ಪುಟ್ಟಪುಟ್ಟ ಹೆಜ್ಜೆಯಿಟ್ಟು ಬೆಳ್ಳಿತೆರೆಯಲ್ಲಿ ಮಿಂಚುತ್ತಿರುವ ದಿಶಾ ರಮೇಶ್ ಇದೀಗ 'ಎಸ್‌ಎಲ್‌ವಿ'ಯಲ್ಲಿ ನಾಯಕಿ. ರಂಗಕರ್ಮಿ ಮಂಡ್ಯ ರಮೇಶ್ ಪುತ್ರಿಯಾಗಿರುವ ಅವರಿಗೆ ತಂದೆ ಕಟ್ಟಿದ 'ನಟನ'ವೇ ಗರಡಿಮನೆ. ಎಷ್ಟೇ ಬೆಳೆದರೂ ರಂಗಭೂಮಿಯೇ ನನ್ನ ತಾಯಿಬೇರು ಅನ್ನುತ್ತಿದ್ದಾರೆ ದಿಶಾ.

ಶರತ್ ಹೆಗ್ಡೆ

● ನಿಮ್ಮ ಸಿನಿಪಯಣದ ಹಾದಿ ಹೇಗಿದೆ?

ಒಳ್ಳೆಯ ಕಥೆ, ಸ್ಕ್ರಿಪ್ಟ್‌ಗೆ ಕಾಯುತ್ತಿದ್ದೆ. ಅವಕಾಶ ಬೇಕು ಎಂದು ಜಿದ್ದಿಗೆ ಬಿದ್ದು ಹೋದವಳಲ್ಲ. ಪದವಿ ಓದುತ್ತಿದ್ದಾಗಲೇ ಆ ನಿರೀಕ್ಷೆ ಇತ್ತು. ಆದರೆ ನನ್ನ ಆದ್ಯತೆ ಶಿಕ್ಷಣಕ್ಕೆ ಇತ್ತು. ರಂಗಭೂಮಿ ವಿಷಯದಲ್ಲೇ ಸ್ನಾತಕೋತ್ತರ ಪದವಿ ಮುಗಿಸಿದೆ. ಅಲ್ಲಲ್ಲಿ ನಾಟಕ ಪ್ರದರ್ಶನಗಳು, ಪ್ರಯೋಗಗಳು ನಡೆಯುತ್ತಲೇ ಇದ್ದವು. ಹೀಗಾಗಿ ದೇವರಕಾಡು ಚಿತ್ರದ ಬಳಿಕ ಹಿರಿತೆರೆ ಮಟ್ಟಿಗೆ ಕೊಂಚ ಅಂತರ ಉಂಟಾಯಿತು. ಎಸ್‌ಎಲ್‌ವಿ ಕಥೆ ಎಲ್ಲ ರೀತಿಯಿಂದಲೂ ಇಷ್ಟವಾಯಿತು. ಹಾಗಾಗಿ ಒಪ್ಪಿಕೊಂಡೆ.

● 'ದೇವರ ಕಾಡು, 'ಡಿ' , 'ಎಸ್‌ಎಲ್‌ವಿ' ಹೀಗೆ ಅಕ್ಷರಪ್ರಧಾನ ಶೀರ್ಷಿಕೆಗಳೆ ಇವೆಯಲ್ಲಾ?

ಹೌದು ನನಗೂ ಅದು ಗೊತ್ತಾಗಿಲ್ಲ. ಕಾಕತಾಳೀಯ ಇರಬಹುದು. 'ಡಿ' ಅನ್ನುವುದು ಒಂದು ಡಾಲರ್ ಹಾಗೂ ದಿವ್ಯಾ- ದೀಪಕ್ ಎಂಬ ಎರಡು ಪಾತ್ರಗಳ ಸುತ್ತ ನಡೆಯುವ ಕಥೆ, 'ಎಸ್‌ಎಲ್‌ವಿ' ಅನ್ನುವುದು ಸಿರಿ ಲಂಬೋದರ ವಿವಾಹ. ಶೀರ್ಷಿಕೆಯೂ ಜನರನ್ನು ಸೆಳೆಯಬೇಕಲ್ಲಾ.

● ಹೊಸ ನಿರ್ದೇಶಕರ ಜೊತೆ ಕೆಲಸ ಮಾಡುವುದು ಹೇಗೆನಿಸಿತು?

ಅವರು (ಸೌರಭ್ ಕುಲಕರ್ಣಿ) ಮೂಲತಃ ರಂಗಭೂಮಿ, ಕಿರುತೆರೆಯಿಂದ ಬಂದವರು. ತುಂಬಾ ಬದ್ಧತೆ ಅವರಲ್ಲಿದೆ. ಸಿನಿಮಾ ನಿರ್ದೇಶನ ಮಾಡುತ್ತಾರೆ ಅಂದಾಗ ನನಗೂ ಸಣ್ಣ ಆತಂಕವಿತ್ತು. ಆದರೆ, ಅಬುಧಾಬಿಯಲ್ಲಿ ಪ್ರದರ್ಶನವಾದಾಗ ಪ್ರೇಕ್ಷಕರ ಪ್ರತಿಕ್ರಿಯೆ ನೋಡಿದೆವು. ಸೌರಭ್ ಅವರು ತಮ್ಮ ಯೋಜನೆಯನ್ನು ಅವರು ಅಂದುಕೊಂಡಂತೇ ನಡೆಸಿದ್ದಾರೆ. ಅತ್ಯುತ್ತಮವಾಗಿ ಮೂಡಿಬಂದಿದೆ. ಅವರ ಪರಿಶ್ರಮವಂತೂ ತುಂಬಾ ಇದೆ.

● 'ಎಸ್‌ಎಲ್‌ವಿ'ಯನ್ನು ಯಾಕೆ ನೋಡಬೇಕು?

ಹೊಸ ಅಲೆಯ ಚಿತ್ರಗಳು ಕನ್ನಡದಲ್ಲಿ ಬರುತ್ತಿವೆ. ಜನರು ಅವುಗಳನ್ನು ಸ್ವೀಕರಿಸುತ್ತಿದ್ದಾರೆ. ಇದೊಂದು ಒಳ್ಳೆಯ ಬೆಳವಣಿಗೆ. ಈ ಸಂದರ್ಭದಲ್ಲಿ ನವಿರಾದ ಹಾಸ್ಯ, ಭಾವನಾತ್ಮಕ ಸನ್ನಿವೇಶ, ಒಂದಿಷ್ಟು ಮನೋರಂಜನಾತ್ಮಕ ವಿಷಯಗಳನ್ನಿಟ್ಟುಕೊಂಡು 'ಎಸ್‌ಎಲ್‌ವಿ' ಬಂದಿದೆ. ರಂಗಭೂಮಿ ಕಲಾವಿದರನ್ನೇ ಬಳಸಿಕೊಳ್ಳಲಾಗಿದೆ. ಇದು ಪೂರ್ಣ ಪೈಸಾ ವಸೂಲ್ ಸಿನಿಮಾ. ಎರಡು ಗಂಟೆ ಕಳೆದ ಬಳಿಕ ಪ್ರೇಕ್ಷಕ ನಿರಾಳನಾಗಿ ಬರುತ್ತಾನೆ. ಹೀಗಾಗಿ ನೀವು ಈ ಚಿತ್ರವನ್ನು ನೋಡಬೇಕು. ಇದರಲ್ಲಿ ನನ್ನದು ಲೀಲಾ ಹೆಸರಿನ ಪಾತ್ರ. ನಾಯಕ ಅಂಜನ್ ಅವರದ್ದು ಸಂಜಯ್ ಹೆಸರಿನ ಪಾತ್ರ. ಇಬ್ಬರೂ ಸಹೋದ್ಯೋಗಿಗಳೂ ಹೌದು, ಸ್ಪರ್ಧಿಗಳೂ ಹೌದು. ಮುಂದೇನು ಅನ್ನುವುದನ್ನು ಚಿತ್ರದಲ್ಲಿ ನೋಡಿ.

● ರಂಗಭೂಮಿಯ ತುಡಿತ ಇನ್ನೂ ಎಷ್ಟಿದೆ?

ಖಂಡಿತಾ. ಅದೇ ನನ್ನ ತಾಯಿಬೇರು. ಅಪ್ಪ ಅಮ್ಮ ಇಬ್ಬರೂ ಕಲಾಕ್ಷೇತ್ರದವರೇ ಆಗಿರುವುದರಿಂದ ಸಹಜವಾಗಿ ಬೆಂಬಲ ಇದ್ದೇ ಇದೆ. ನನ್ನ ಮನೆಯ ಮುಂದೆಯೇ 'ನಟನ' ಶಾಲೆ ಇದೆ. ಎದ್ದರೂ ಬಿದ್ದರೂ ಅಲ್ಲಿಯೇ ಇರಬೇಕು. ಅಪ್ಪ ಅಮ್ಮ ಇಬ್ಬರೂ ಮುಕ್ತವಾದ ವಾತಾವರಣ ಕಲ್ಪಿಸಿದ್ದಾರೆ. ಆದರೆ ಯಾವುದೇ ಹೆಜ್ಜೆ ಇಡುವ ಮುನ್ನ ಯೋಚಿಸಿ ಇಡು ಎಂದೂ ಎಚ್ಚರಿಸುತ್ತಾರೆ. ನನಗೆ ರಂಗಭೂಮಿಯಲ್ಲಿ ಇನ್ನಷ್ಟು ಹೊಸ ಪ್ರಯೋಗಗಳನ್ನು ಮಾಡಬೇಕು. ಹಳ್ಳಿಗಳಲ್ಲಿ ಹೋಗಿ ನಾಟಕ ಆಡಬೇಕು. ಹೀಗೆ ಹತ್ತಾರು ಕನಸುಗಳಿವೆ. ❖

ರೋಮಾಂಚಕ ಪಯಣ



ಈ ಹಿಂದೆ ಕಿರು ಚಿತ್ರಗಳನ್ನು ನಿರ್ದೇಶಿಸಿದ್ದೆ, ಆದರೆ ಒಂದು ಪೂರ್ಣ ಪ್ರಮಾಣದ ಚಲನಚಿತ್ರ ನಿರ್ದೇಶನ ಇದೇ ಮೊದಲು ಇದೊಂದು ರೋಮಾಂಚನಕಾರಿ ಪಯಣ ಮತ್ತು ಅನುಭವ. ಈ ಪಯಣದಲ್ಲಿ ಹಲವಾರು ತಂತ್ರಜ್ಞರು, ಹಿರಿಯ ಕಲಾವಿದರು ನನ್ನ ನಂಬಿ ಕೆಲಸ ಮಾಡಿದ್ದಾರೆ ಹಾಗೂ ಅನೇಕ ಹಿತೈಷಿಗಳು ಬಂಡವಾಳ ಹೂಡಿದ್ದಾರೆ, ಅವರೆಲ್ಲರಿಗೂ ನಾನು ಆಭಾರಿ. ಈಗಾಗಲೇ ವಿದೇಶದಲ್ಲಿ ಪ್ರದರ್ಶನ ಕಂಡಾಗ ಅಲ್ಲಿನ ಕನ್ನಡಿಗರಿಂದ ಅತ್ಯುತ್ತಮ ಪ್ರತಿಕ್ರಿಯೆ ಬಂದಿದೆ. ಈಗ ನಮ್ಮ ತಾಯ್ನಾಡಿನಲ್ಲೂ ನಮ್ಮ ಕನ್ನಡಿಗರು ಈ ಚಿತ್ರ ನೋಡಿ ಹರಸುತ್ತಾರೆಂಬ ನಂಬಿಕೆಯಿದೆ.

– **ಸೌರಭ್ ಕುಲಕರ್ಣಿ**, ನಿರ್ದೇಶಕ

ಸಂಜಯನಾದ ಅಂಜನ್...



ರಂಗಭೂಮಿಯಲ್ಲಿ ಸುಮಾರು 11 ವರ್ಷಗಳಿಂದ ಸಕ್ರಿಯರಾಗಿದ್ದಾರೆ 'ಎಸ್‌ಎಲ್‌ವಿ' ಚಿತ್ರದ ನಾಯಕ ಸಂಜಯ್ ಪಾತ್ರಧಾರಿ ಅಂಜನ್ ಎ. ಭಾರದ್ವಾಜ್. ಅವರು 100ಕ್ಕೂ ಹೆಚ್ಚು ನಾಟಕಗಳಲ್ಲಿ ಬಣ್ಣ ಹಚ್ಚಿದವರು. ಗಿರೀಶ್ ಕಾರ್ನಾಡರ 'ತುಘಲಕ್' ನಾಟಕದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ಅನುಭವ ಅವರದ್ದು. ಮುಂಬೈನ ಅನುಪಮ್ ಖೇರ್ ಅಭಿನಯ ಶಾಲೆಯಲ್ಲಿ ಡಿಪ್ಲೊಮಾ, ಪಾಂಡಿಚೆರಿಯ ಆದಿಶಕ್ತಿ ಸಮೂಹದ ತಂಡದಲ್ಲಿ ಮತ್ತು ನೀನಾಸಂನಲ್ಲಿ ತರಬೇತಿ ಪಡೆದವರು. ಸುಮಾರು 6 ಧಾರಾವಾಹಿಗಳಲ್ಲಿ ಅಭಿನಯಿಸಿದ್ದಾರೆ. ರಾಜ್ ಬಿ. ಶೆಟ್ಟಿ ಅವರ 'ರೂಪಾಂತರ' ಚಿತ್ರದಲ್ಲೂ ಅಭಿನಯಿಸುತ್ತಿದ್ದಾರೆ. 'ರೂಪಾಂತರ'ಕ್ಕಾಗಿ ತೂಕ ಇಳಿಸಿಕೊಂಡಿದ್ದ ಅವರು ಎಸ್‌ಎಲ್‌ವಿಗಾಗಿ 12 ಕೆಜಿಗಳಷ್ಟು ಹೆಚ್ಚಿಸಿಕೊಂಡಿದ್ದಾರಂತೆ. ಈ ಚಿತ್ರಕ್ಕಾಗಿ ಸಾಕಷ್ಟು ಪೂರ್ವತಯಾರಿ ನಡೆಸಿದ್ದರಂತೆ ಅಂಜನ್.

ಹೊಂದಿಸಿ ಬರೆಯಲು ಪತ್ರ ರವಾನೆ



ಐಶಾನಿ ಶೆಟ್ಟಿ

ಹೊಂದಿಸಿ ಬರೆಯಿರಿ ಎಂದು ಮನೆ ಮನೆಗೆ ಹೇಳುತ್ತಾ ಹೊರಟಿದೆ ಚಿತ್ರತಂಡ. ಸುಮಾರು 15 ಸಾವಿರಕ್ಕೂ ಹೆಚ್ಚು ಕಾರ್ಡ್‌ಗಳನ್ನು ಬರೆದು ಮನೆ ಮನೆಗೆ ಕಳುಹಿಸಿದ್ದಾರಂತೆ. ಪ್ರೇಕ್ಷಕರನ್ನು ವೈಯಕ್ತಿಕವಾಗಿ ತಲುಪುವ ಪ್ರಯತ್ನವಿದು. ರಾಮೇನಹಳ್ಳಿ ಜಗನ್ನಾಥ್ ನಿರ್ದೇಶನದ ಬಹು ತಾರಾಗಣದ 'ಹೊಂದಿಸಿ ಬರೆಯಿರಿ' ಚಿತ್ರ ಫೆಬ್ರುವರಿ 10ರಂದು ಬಿಡುಗಡೆಯಾಗುತ್ತಿದೆ.

'ಪತ್ರದಲ್ಲಿ ಆತ್ಮೀಯ ಸಂಬಂಧವಿದೆ. ಆದ್ದರಿಂದ ನಮ್ಮ ಸಿನಿಮಾವನ್ನು ಪತ್ರದ ಮೂಲಕ ಜನರಿಗೆ ತಲುಪಿಸಲು ತಯಾರಿ ಮಾಡಿಕೊಂಡಿದ್ದೇವೆ. ಪತ್ರದಲ್ಲಿ ಸಿನಿಮಾ ಬಗ್ಗೆ ಬರೆದು ಅದನ್ನು ನಾವು ಸಂಗ್ರಹಿಸಿರುವ ವಿಳಾಸಗಳಿಗೆ ಕಳುಹಿಸಿಕೊಡಲಾಗುವುದು' ಎಂದಿದ್ದಾರೆ ನಿರ್ದೇಶಕರು.

ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದ್ದಾರೆ. ಚಿತ್ರದಲ್ಲಿ ಪ್ರವೀಣ್ ತೇಜ್, ಭಾವನಾ ರಾವ್, ಸಂಯುಕ್ತ ಹೊರನಾಡು, ಐಶಾನಿ ಶೆಟ್ಟಿ, ನವೀನ್ ಶಂಕರ್, ಶ್ರೀಮಹಾದೇವ್, ಅರ್ಚನಾ ಜೋಯಿಸ್, ಅನಿರುದ್ಧ್ ಆಚಾರ್ಯ ಒಳಗೊಂಡ ಕಲರ್ ಫುಲ್ ಕಲಾವಿದರ ಮುಖ್ಯಭೂಮಿಕೆಯಿದೆ. ಶಾಂತಿ ಸಾಗರ್ ಎಚ್.ಜಿ. ಕ್ಯಾಮೆರಾ ನಿರ್ದೇಶನ, ಜೋ ಕೋಸ್ಟ ಸಂಗೀತ ನಿರ್ದೇಶನ, ಕೆ. ಕಲ್ಯಾಣ್, ಹೃದಯಶಿವ ಹಾಗೂ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ಸಾಹಿತ್ಯ ಚಿತ್ರಕ್ಕಿದೆ. ಮಾಸ್ತಿ, ಪ್ರಶಾಂತ್ ರಾಜಪ್ಪ ಹಾಗೂ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ. ಸಂಡೇ ಸಿನಿಮಾಸ್ ಬ್ಯಾನರ್ ಅಡಿ ನಿರ್ದೇಶಕರು ಹಾಗೂ ಸ್ನೇಹಿತರು ಸೇರಿ ಚಿತ್ರವನ್ನು ನಿರ್ಮಿಸಿದ್ದಾರೆ.

'ತಾಯಿ ಕಸ್ತೂರ್ ಗಾಂಧಿ'ಗೆ ಪ್ಯಾರಿಸ್ ಚಿತ್ರೋತ್ಸವ ಪ್ರಶಸ್ತಿ

ಕಸ್ತೂರ್ ಬಾ ಗಾಂಧಿಯವರ ಜೀವನವನ್ನು ಆಧರಿಸಿ ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿರುವ 'ತಾಯಿ ಕಸ್ತೂರ್ ಗಾಂಧಿ' ಸಿನಿಮಾವು ಪ್ಯಾರೀಸ್‌ನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಎರಡು ಪ್ರಶಸ್ತಿಗಳನ್ನು ಬಾಚಿಕೊಂಡಿದೆ.

ಚಿತ್ರಕ್ಕೆ 'ಶ್ರೇಷ್ಠ ಚಿತ್ರ' ಹಾಗೂ ಚಿತ್ರದ ಗಾಂಧಿ ಪಾತ್ರಧಾರಿ ಕಿಶೋರ್ ಅವರಿಗೆ 'ಶ್ರೇಷ್ಠ ನಟ' ಪ್ರಶಸ್ತಿ ಲಭಿಸಿದೆ. ಕಿಶೋರ್ ಅವರು ನೋಯ್ಡಾದಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲೂ 'ಶ್ರೇಷ್ಠ ನಟ' ಪ್ರಶಸ್ತಿಗೆ ಭಾಜನರಾಗಿದ್ದರು.

ಈ ಚಿತ್ರವು ಲಾಸ್ ಏಂಜಲಿಸ್ ಸನ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಸಿನಿಮಾ ಪ್ರದರ್ಶನ ಕಂಡಿತ್ತು. 12ನೇ ದಾದಾ ಸಾಹೇಬ್ ಫಾಲ್ಕೆ ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೂ ಈ ಚಿತ್ರ ಆಯ್ಕೆಯಾಗಿತ್ತು. ಅಮೆರಿಕದ ಡಲ್ಲಾಸ್ ಚಿತ್ರೋತ್ಸವದಲ್ಲಿ ಈ ಚಿತ್ರಕ್ಕೆ ಅತ್ಯುತ್ತಮ ಸಂಕಲನಕ್ಕಾಗಿ ಸಂಕಲನಕಾರ ಸುರೇಶ್ ಅರಸು ಅವರಿಗೆ ಪ್ರಶಸ್ತಿ ಲಭಿಸಿತ್ತು. ಬರಗೂರು ಅವರು ಬರೆದ 'ಕಸ್ತೂರ್ ಬಾ Vs ಗಾಂಧಿ' ಕಾದಂಬರಿಯನ್ನು ಈ ಚಿತ್ರವು ಆಧರಿಸಿದೆ. ಈ ಕಾದಂಬರಿ 'ಸುಧಾ' ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು.

'ಕಸ್ತೂರ್‌ಬಾ ಅವರು ತಾಯಿಯಾಗಿ ಮತ್ತು ಪತ್ನಿಯಾಗಿ ಎದುರಿಸಿದ ಬಿಕ್ಕಟ್ಟುಗಳು, ಅಪರೂಪದ ದಾಂಪತ್ಯ ಮತ್ತು ಸಾಮಾಜಿಕ ಕಾಳಜಿಗಳು ಸಿನಿಮಾದ ಮುಖ್ಯ ಕಥಾವಸ್ತು' ಎಂದಿದ್ದಾರೆ ಬರಗೂರು.

ಕಸ್ತೂರ್ ಬಾ ಪಾತ್ರದಲ್ಲಿ ನಟಿ ಹರಿಪ್ರಿಯಾ ಅಭಿನಯಿಸಿದ್ದಾರೆ. ಜನಮಿತ್ರ ಮೂವೀಸ್ ಬ್ಯಾನರ್ ಅಡಿ ಗೀತಾ ಅವರು ಈ ಚಿತ್ರ ನಿರ್ಮಿಸಿದ್ದಾರೆ.



ಹರಿಪ್ರಿಯಾ

ಟ್ರೇಲರ್‌ನಲ್ಲಿ ಮಾಟ ಮಂತ್ರ

ಮಾಟ ಮಂತ್ರದ ಕಥೆಯನ್ನು ಟ್ರೇಲರ್‌ನಲ್ಲೇ ಹೇಳಿದರೆ ಹೇಗೆ? ಹಾಗೊಂದು 'ಮಾಟ ಪ್ರಯೋಗ' ಮಾಡಿದೆ ಸಕೂಚಿ ಚಿತ್ರದ ಟ್ರೇಲರ್. ಜಂಕಾರ್ ಮ್ಯೂಸಿಕ್‌ನ ಯುಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆಯಾದ ಈ ಟ್ರೇಲರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚಿತ್ರ ಫೆ. 17ರಂದು ತೆರೆ ಕಾಣಲಿದೆ.

ಶಬ್ದ ಪರಿಣಾಮ, ದೃಶ್ಯ ಜೋಡಣೆ ವಿಶೇಷವಾಗಿ ಮೂಡಿಬಂದಿದೆ. 'ಸಕೂಚಿ' ಚಿತ್ರಕ್ಕೆ ಸಾವಿನ ಸೂಚಿ ಎಂಬ ಅಡಿಬರಹವಿದೆ. ಸಕೂಚಿ ಎಂದರೆ ಅತಿ ಘೋರ ಎಂದರ್ಥ. ನಿರ್ದೇಶಕ ಅಶೋಕ ಚಕ್ರವರ್ತಿ ಈ ಚಿತ್ರದಲ್ಲಿ ವಿಶೇಷ ಪಾತ್ರ ಮಾಡಿದ್ದಾರೆ. ಅಂದಹಾಗೆ ಇದು ಅವರ ನಿರ್ದೇಶನದ ಮೊದಲ ಚಿತ್ರ. ಮಾಟ ಮಂತ್ರ ವಿಷಯಕ್ಕೆ ಕಮರ್ಷಿಯಲ್ ಸ್ಪರ್ಶ ನೀಡಲಾಗಿದೆ ಎಂಬುದು ನಿರ್ದೇಶಕರ ವಿವರಣೆ.

ತ್ರಿವಿಕ್ರಮ್ ಸಾಮ್ರಾಟ್ ಈ ಚಿತ್ರದ ನಾಯಕ. ವಿಕ್ಕಿ ಮಾರ್ಟಿನ್ ಎಂಬುದು ಅವರ ಪಾತ್ರದ ಹೆಸರು. ಡಯಾನ ಈ ಚಿತ್ರದ ನಾಯಕಿ. ಚಿತ್ರದಲ್ಲಿ ಮುಗ್ಧ ಹುಡುಗಿ. ಸಂಗೀತವೇ ಚಿತ್ರದ ಮುಖ್ಯ ಅಂಶ. ಗಣೇಶ್ ಗೋವಿಂದಸ್ವಾಮಿ ಅವರು ಸಂಗೀತ ಸಂಯೋಜಿಸಿದ್ದಾರೆ ಎಂದಿದೆ ಚಿತ್ರತಂಡ.

ಅಶ್ವಿನ್ ಬಿ.ಸಿ. ನಿರ್ಮಾಪಕರು. ಮಧುಕರ್ ಜೆ., ಮಹಾವೀರ್ ಪ್ರಸಾದ್ ಸಹ ನಿರ್ಮಾಪಕರು. ಆನಂದ್ ಸುಂದ್ರೇಶ್ ಛಾಯಾಗ್ರಹಣ, ಮಹೇಶ್ ಸಂಕಲನ, ಕುಂಫು ಚಂದ್ರು ಸಾಹಸ, ಆನಂದ್ ನೃತ್ಯವಿದೆ. ಚಿತ್ರದಲ್ಲಿ ಸಂಜಯ್ ರಾಜ್ ನಟನೆಯ ಜೊತೆಗೆ ಸಹ ನಿರ್ದೇಶಕನಾಗಿ ಕೆಲಸ ಮಾಡಿದ್ದಾರೆ. ಚಿತ್ರದಲ್ಲಿ 30-40 ಮಂಗಳ ಮುಖಿಯರು ಅಭಿನಯಿಸಿದ್ದಾರೆ. ಚಿತ್ರದಲ್ಲಿ ಹರೀಶ್ ಅವರದ್ದು ಖಳ ಪಾತ್ರ. ❖



ಡಯಾನಾ ತ್ರಿವಿಕ್ರಮ್

'ತನುಜಾ'ಗೆ ಜೀವ ತುಂಬಿದ ಸಪ್ತಾ



ಅಭಿಲಾಷ್ ಪಿ.ಎಸ್.

ನಟ ರಿಷಬ್ ಶೆಟ್ಟಿ ನಿರ್ದೇಶನದ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಸಿನಿಮಾ ಮೂಲಕ 'ಪಲ್ಲವಿ'ಯಾಗಿ ಚಂದನವನದಲ್ಲಿ ಮಿಂಚಿದವರು ಮಂಗಳೂರಿನ ಸಪ್ತಾ ಪಾವೂರು. ಇದೀಗ 2020ರಲ್ಲಿ ನಡೆದ ನೈಜ ಘಟನೆ ಆಧಾರಿತ ಸಿನಿಮಾ 'ತನುಜಾ'ದಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಸಪ್ತಾ, ತನ್ನ ಸಿನಿಪಯಣ ಹಾಗೂ ಚಿತ್ರದ ಅನುಭವಗಳನ್ನು ತೆರೆದಿಟ್ಟಿದ್ದಾರೆ...

'ನಾನಿನ್ನೂ ಒಂದನೇ ತರಗತಿಯಲ್ಲಿ ಓದುತ್ತಿದ್ದೆ. ಆಗ ನಟ ವಿಜಯ ರಾಘವೇಂದ್ರ ಅವರ 'ಚೆಲ್ಲಾಪಿಲ್ಲಿ' ಸಿನಿಮಾದಲ್ಲಿ ನಟಿಸುವ ಮೂಲಕ ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟೆ. ಇದಾದ ಬಳಿಕ ಕೆಲ ತುಳು ಚಿತ್ರಗಳಲ್ಲಿ ನಟಿಸಿದೆ. ಬಳಿಕ 'ದ್ವೈತ', ರಿಷಬ್ ಶೆಟ್ಟಿ ಅವರ 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು', ಶಿವರಾಜ್‌ಕುಮಾರ್ ಅವರ ಜೊತೆಗೆ 'ಬೈರಾಗಿ' ಸಿನಿಮಾಗಳಲ್ಲಿ ನಟಿಸಿದೆ. ಈ ಪೈಕಿ ನನಗೆ ಒಂದು ಗುರುತು ನೀಡಿದ್ದು 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು' ಸಿನಿಮಾ. ಈಗಲೂ ಹಲವರು ನನ್ನನ್ನು 'ಪಲ್ಲವಿ' ಎಂದೇ ಕರೆಯುತ್ತಾರೆ. ಇದು ನನಗೆ ಖುಷಿ ನೀಡಿದೆ. ಈ ಯಶಸ್ಸನ್ನು ನಾನು ನಿರೀಕ್ಷಿಸಿಯೇ ಇರಲಿಲ್ಲ. ಸಿನಿಮಾ ಕ್ಷೇತ್ರದಲ್ಲಿ ಗುರುತಿಸಿಕೊಂಡರೂ, ಶಿಕ್ಷಣವನ್ನು ಅರ್ಧಕ್ಕೇ ಮೊಟಕುಗೊಳಿಸಿ ಮುಂದಕ್ಕೆ ಹೆಜ್ಜೆ ಇಡುವ ಯಾವುದೇ ಯೋಚನೆ ನನಗಿಲ್ಲ. ಹೀಗಾಗಿ ಓದಿಗೆ ಆದ್ಯತೆ ನೀಡಿದ್ದೇನೆ. ಈ ನಡುವೆ ಉತ್ತಮ ಪಾತ್ರಗಳು ಬಂದರೆ ಸಿನಿಮಾ ಒಪ್ಪಿಕೊಳ್ಳುತ್ತಿದ್ದೇನೆ. ಸಿನಿಮಾ ಆಯ್ಕೆ ವಿಚಾರದಲ್ಲಿ ಅಪ್ಪ-ಅಮ್ಮ ನಿರ್ಧಾರ ತೆಗೆದುಕೊಳ್ಳುತ್ತಾರೆ. ಇಂತಹ ಪಾತ್ರಗಳನ್ನೇ ಮಾಡಬೇಕು ಎನ್ನುವ ಯಾವುದೇ ಚೌಕಟ್ಟು ಹಾಕಿಕೊಂಡಿಲ್ಲ. ನಿರೀಕ್ಷೆಗಳೂ ಇಲ್ಲ. ಬಂದ ಅವಕಾಶಗಳನ್ನು ಬಾಚಿಕೊಳ್ಳುತ್ತಿದ್ದೇನೆ' ಎನ್ನುವುದು ಸಪ್ತಾ ಮಾತು.

'ತನುಜಾ' ಅನುಭವ: '2021ರಲ್ಲಿ ಈ ಚಿತ್ರದ ಚಿತ್ರೀಕರಣ ಆರಂಭವಾಗಿತ್ತು. ಚಿತ್ರದ ಕಥೆ ನನ್ನನ್ನು ಸೆಳೆದಿತ್ತು. ನಾನೂ ವಿದ್ಯಾರ್ಥಿನಿಯಾಗಿರುವ ಕಾರಣ, ಕಥೆಯನ್ನು ನಾನು ತಕ್ಷಣದಲ್ಲೇ ಗ್ರಹಿಸಿದೆ. ನಾನು ಇಲ್ಲಿಯವರೆಗೂ ಒಂದು ನೈಜ ಪಾತ್ರದ ಪಾತ್ರಧಾರಿಯಾಗಿ ನಟಿಸಿಲ್ಲ. ನೈಜ ಘಟನೆ ಆಧರಿತ ಸಿನಿಮಾವೊಂದರಲ್ಲಿ ಮೊದಲ ಬಾರಿಗೆ ನಟಿಸುತ್ತಿದ್ದೇನೆ. ನಿರ್ದೇಶಕರಾದ ಹರೀಶ್ ಎಂ.ಡಿ. ಹಳ್ಳಿ ಅವರ ಪೂರ್ಣ ಬೆಂಬಲದಿಂದಾಗಿ ಈ ಪಾತ್ರಕ್ಕೆ ಜೀವ ತುಂಬಿದೆ. 'ತನುಜಾ' ಅವರಿಗಿಂತ, ಅವರ ತಾಯಿ ಹಿರಿಯಮ್ಮ ಅವರ ಜೊತೆ ನನ್ನ ಮಾತುಕತೆ ಹೆಚ್ಚಾಗಿ ನಡೆಯುತ್ತಿತ್ತು. 'ತನುಜಾ'ಳ ವ್ಯಕ್ತಿತ್ವ, ಆಕೆಯ ಬಾಲ್ಯದ ಬಗ್ಗೆ ಅವರಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದೆ. ಇದು ನನ್ನ ನಟನೆಗೆ ಸಹಕಾರಿಯಾಯಿತು' ಎನ್ನುತ್ತಾರೆ ಸಪ್ತಾ.

'ಚಿತ್ರೀಕರಣದ ಆರಂಭದಲ್ಲೇ ಕಥೆಯ ಕ್ಲೈಮ್ಯಾಕ್ಸ್ ದೃಶ್ಯದ ಚಿತ್ರೀಕರಣವಿತ್ತು. 'ತನುಜಾ' ಒಂದೇ ಉಸಿರಿನಲ್ಲಿ ಮೆಟ್ರೋ ನಿಲ್ದಾಣದ ಮೆಟ್ಟಿಲುಗಳನ್ನು ಹತ್ತುವ ದೃಶ್ಯವದು. ಚಿತ್ರೀಕರಣದ ಆರಂಭದ ದಿನವಾದ ಕಾರಣ, ಆ ಅದ್ಭುತವಾದ ದೃಶ್ಯಕ್ಕೆ ಹೆಚ್ಚಿನ ಶ್ರಮ ಹಾಕಿದ್ದೆ. ಈ ಶಕ್ತಿಯೇ ಚಿತ್ರದುದ್ದಕ್ಕೂ ಇತ್ತು' ಎಂದು ನೆನಪಿಸಿಕೊಂಡರು ಸಪ್ತಾ. ❖


'ಕಬ್ಜ'ಗೆ 'ಕೆ.ಜಿ.ಎಫ್' ಪ್ರೇರಣೆ

2023ರ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ 'ಕಬ್ಜ' ಸದ್ಯ ಬಿಡುಗಡೆಗೆ ಭರ್ಜರಿಯಾಗಿ ಸಜ್ಜಾಗುತ್ತಿದೆ. ಟೀಸರ್ ಬಳಿಕ ಚಿತ್ರದ ಮೊದಲ ಲಿರಿಕಲ್ ಹಾಡು ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. ಮಾರ್ಚ್ 17ರಂದು ಬಿಡುಗಡೆ ಆಗಲಿರುವ ಈ ಸಿನಿಮಾದ ಮೊದಲ ಹಾಡು ಫೆ.4ರಂದು ಹೊರಬರಲಿದೆ.

ಸಿನಿಮಾ ಕುರಿತು ಮಾಹಿತಿ ನೀಡಿದ ನಿರ್ದೇಶಕ ಆರ್. ಚಂದ್ರು, 'ಒಂಬತ್ತು ಭಾಷೆಗಳಲ್ಲಿ 'ಕಬ್ಜ' ತೆರೆಕಾಣಲಿದೆ. ನಿರ್ದೇಶಕನಾಗಿ ಜೊತೆಗೆ ನಿರ್ಮಾಪಕನಾಗಿಯೂ ಖುಷಿಯಾಗಿದ್ದೇನೆ. ಈಗಾಗಲೇ ಸಿನಿಮಾವನ್ನು ಅಮೆಜಾನ್ ಪ್ರೈಂ ಒಟಿಟಿ ವೇದಿಕೆಗೆ ಮಾರಾಟ ಮಾಡಿದ್ದೇನೆ. ಉಳಿದ ಪ್ಯಾನ್ ಇಂಡಿಯಾ ಸಿನಿಮಾಗಳಿಗೆ ಸಿಕ್ಕಿದಂಥ ದೊಡ್ಡ ಮೊತ್ತವೇ 'ಕಬ್ಜ' ಸಿನಿಮಾಗೂ ಸಿಕ್ಕಿದೆ. ಕನ್ನಡದಲ್ಲಿ ಸಿನಿಮಾ ವಿತರಣೆಯ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ. ಹಿಂದಿ, ತೆಲುಗು, ಮಲಯಾಳಂನಲ್ಲಿ ವಿತರಣೆ ಹಕ್ಕುಗಳು ಮಾರಾಟವಾಗಿದೆ. ಉತ್ತರ ಅಮೆರಿಕ, ಜಪಾನ್, ಶ್ರೀಲಂಕಾ, ಮಲೇಷಿಯಾ, ಯುಎಇನಲ್ಲೂ 'ಕಬ್ಜ' ಸಿನಿಮಾಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಅಲ್ಲಿಗೂ ದೊಡ್ಡ ಮೊತ್ತಕ್ಕೆ ಸಿನಿಮಾ ಮಾರಾಟವಾಗಿದೆ' ಎಂದರು.

ಮಾರ್ಚ್ 17ರಂದೇ ಸಿನಿಮಾ ಬಿಡುಗಡೆ ಏಕೆ ಎನ್ನುವುದಕ್ಕೆ ಪ್ರತಿಕ್ರಿಯೆ ನೀಡಿ, 'ಪುನೀತ್ ಅವರು ನಮ್ಮ ಸೆಟ್‌ಗೆ ಹಲವು ಬಾರಿ ಭೇಟಿ ನೀಡಿದ್ದರು. 'ಇಷ್ಟೊಂದು ಖರ್ಚು ಮಾಡುತ್ತಿದ್ದೀಯಾ' ಎಂದು ಕೇಳುತ್ತಿದ್ದರು. ಮೋಷನ್ ಪೋಸ್ಟರ್ ನೋಡಿ 'ಸಖತ್ತಾಗಿದೆ' ಎಂದಿದ್ದರು. 'ಪ್ರಚಾರಕ್ಕೆ ಬೆಂಬಲವಾಗಿರುತ್ತೇನೆ. ಟೀಸರ್ ನಾನೇ ಬಿಡುಗಡೆ ಮಾಡಬೇಕು' ಎಂದು ಫೋನ್‌ನಲ್ಲಿ ಹೇಳಿದ್ದರು. ಈ ಸಿನಿಮಾ ಅಪ್ಪುಗೇ ಅರ್ಪಣೆ' ಎಂದು ನೆನಪಿಸಿಕೊಂಡರು ಚಂದ್ರು.

'ನಮ್ಮ ಕನ್ನಡದ ನೆಲದಿಂದ ಬಂದ ದೊಡ್ಡ ಪ್ಯಾನ್ ಇಂಡಿಯಾ ಸಿನಿಮಾವೊಂದು ಹೆದ್ದಾರಿ ಮಾಡಿಕೊಟ್ಟಿದೆ. ಈ ಹೆದ್ದಾರಿಯನ್ನು ನಾವು ಬಳಸಿಕೊಳ್ಳದೇ ಹೋದರೆ ದೊಡ್ಡ ತಪ್ಪು. ನನಗೆ ಪ್ರೇರಣೆಯೇ 'ಕೆ.ಜಿ.ಎಫ್'. ಹಾಗೆಂದು 'ಕಬ್ಜ' ಸಿನಿಮಾ 'ಕೆ.ಜಿ.ಎಫ್' ಅಲ್ಲ. ಆ ಸಿನಿಮಾ ರೀತಿಯೇ 'ಕಬ್ಜ' ಮಾಡಿದ್ದೇನೆ' ಎಂದರು. ❖



ಉಪೇಂದ್ರ

ಬಿಡುಗಡೆಗೆ ಸಜ್ಜಾಗ್ತಿದ್ದಾನೆ 'ಹೊಯ್ಸಳ'!

ನಟ 'ಡಾಲಿ' ಧನಂಜಯ ನಟನೆಯ 25ನೇ ಸಿನಿಮಾ, ವಿಜಯ್ ಎನ್. ಆ್ಯಕ್ಷನ್ ಕಟ್ ಹೇಳಿರುವ 'ಹೊಯ್ಸಳ' ಬಿಡುಗಡೆಗೆ ಸಜ್ಜಾಗುತ್ತಿದೆ. ಚಿತ್ರದ ತುಣುಕುಗಳು ಶೀಘ್ರದಲ್ಲೇ ಬಿಡುಗಡೆಯಾಗಲಿದೆ ಎಂದಿದ್ದಾರೆ ನಿರ್ಮಾಪಕ ಕಾರ್ತಿಕ್ ಗೌಡ.

ಈಗಾಗಲೇ ಸಿನಿಮಾದ ಆಡಿಯೊ ಹಕ್ಕುಗಳನ್ನು ಆನಂದ್ ಆಡಿಯೋ ದೊಡ್ಡ ಮೊತ್ತಕ್ಕೆ ಖರೀದಿಸಿದೆ. ಸಿನಿಮಾ ಮಾ.30ರಂದು ಬಿಡುಗಡೆಯಾಗಲಿದೆ. 'ಕಾಂತಾರ' ಸಿನಿಮಾಗೆ ಸಂಗೀತ ನಿರ್ದೇಶನ ಮಾಡಿರುವ ಅಜನೀಶ್ ಲೋಕನಾಥ್ ಅವರು 'ಹೊಯ್ಸಳ' ಸಿನಿಮಾಗೂ ಸಂಗೀತ ನೀಡಿದ್ದಾರೆ.

ಚಿತ್ರದಲ್ಲಿ ಧನಂಜಯ ಅವರು ಖಡಕ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರವು ಸಾಮಾಜಿಕ ಸಮಸ್ಯೆಗಳ ಬಗ್ಗೆ ಮಾತನಾಡಿದೆ ಎಂದಿದೆ ಚಿತ್ರತಂಡ. ಬೆಳಗಾವಿ ಮತ್ತು ಸುತ್ತಮುತ್ತಲ ಜಾಗಗಳನ್ನು ಆಧರಿಸಿ ಹೊಯ್ಸಳ ಕಥೆಯನ್ನ ಹೆಣೆಯಲಾಗಿದೆ. ಚಿತ್ರತಂಡ ಚಿತ್ರೀಕರಣ ಪೂರ್ಣಗೊಳಿಸಿದ್ದು, ಬಿಡುಗಡೆಯ ಸಿದ್ಧತೆಗಳು ನಡೆಯುತ್ತಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಕೊನೆಯ ಹಂತದಲ್ಲಿದ್ದು, ಚಿತ್ರತಂಡ ಡಬ್ಬಿಂಗ್‌ನಲ್ಲಿ ತೊಡಗಿಸಿಕೊಂಡಿದೆ.

'ಬಡವ ರಾಸ್ಕಲ್' ಸಿನಿಮಾದಲ್ಲಿ ಧನಂಜಯ ಅವರ ಜೊತೆಗೆ ನಟಿಸಿದ್ದ ಅಮೃತಾ ಅಯ್ಯಂಗಾರ್ ಅವರು ಮತ್ತೊಮ್ಮೆ 'ಡಾಲಿ'ಗೆ ಜೋಡಿಯಾಗಿದ್ದಾರೆ. ನವೀನ್ ಶಂಕರ್, ಅವಿನಾಶ್ ಬಿ.ಎಸ್., ಮಯೂರಿ ನಟರಾಜ ಮತ್ತು ಪ್ರತಾಪ್ ನಾರಾಯಣ್ ಅವರು ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹೊಂಬಾಳೆ ಫಿಲ್ಮ್ಸ್‌ನ ವಿಜಯ್ ಕಿರಗಂದೂರು ಪ್ರಸ್ತುತಿಯಲ್ಲಿ ಕೆಆರ್‌ಜಿ ಸ್ಟುಡಿಯೋಸ್‌ನ ಕಾರ್ತಿಕ್ ಮತ್ತು ಯೋಗಿ ಜಿ. ರಾಜ್ ಅವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ❖



ಧನಂಜಯ

ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರ ನಡುವೆ ಹೊಡೆದಾಟ • ಎಐಸಿಸಿ ಸದಸ್ಯ ಆನಂದ ದೇವಪ್ಪ ಅವರಿಗೆ ಗಾಯ

ಕೈ ಕೈ ಮಿಲಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು


ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ನಗರದಲ್ಲಿ ಫೆಬ್ರುವರಿ 3ರಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯಲಿರುವ 'ಪ್ರಜಾಧ್ವನಿ' ಯಾತ್ರೆಯ ಪೂರ್ವ ಸಿದ್ಧತಾ ಸಭೆಯಲ್ಲಿ ಗುರುವಾರ ಕ್ಷುಲ್ಲಕ ಕಾರಣಕ್ಕಾಗಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಬೆಂಬಲಿಗರು ಹೊಡೆದಾಡಿದ್ದಾರೆ. ಘಟನೆಯಲ್ಲಿ ಎಐಸಿಸಿ ಸದಸ್ಯ ಆನಂದ ದೇವಪ್ಪಗೆ ಗಾಯವಾಗಿದೆ.

ಯಾತ್ರೆಯ ಸಂಯೋಜಕ ಪ್ರಕಾಶ ರಾಠೋಡ ನೇತೃತ್ವದಲ್ಲಿ ನಗರದ ಅತಿಥಿ-ಗೃಹದಲ್ಲಿ ಸಭೆ ನಡೆದಿತ್ತು. ಬಸವಕಲ್ಯಾಣ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳು ಹಾಗೂ ಇತರ ಮುಖಂಡರು ಸಭೆಯಲ್ಲಿ ಹಾಜರಿದ್ದರು. ಕಾರ್ಯಕ್ರಮದ ಲೆಕ್ಕಪತ್ರದ ವಿಷಯ ಪ್ರಸ್ತಾಪವಾದಾಗ

ಎಐಸಿಸಿ ಸದಸ್ಯ ಆನಂದ ದೇವಪ್ಪ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್ ಬೆಂಬಲಿಗರ ಮಧ್ಯೆ ಜಗಳ ನಡೆಯಿತು.

ಪ್ರಕಾಶ ರಾಠೋಡ ಎದುರಲ್ಲೇ ಪರಿಸ್ಥಿತಿ ಕೈಮೀರಿ ಹೋಗಿ ಎರಡೂ ಕಡೆಯವರು ಹೊಡೆದಾಡಿದರು. ಈ ಸಂದರ್ಭದಲ್ಲಿ ಆನಂದ ದೇವಪ್ಪ ಅವರಿಗೆ ಪೆಟ್ಟಾಗಿದ್ದು, ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.


ಬಸವಕಲ್ಯಾಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆನಂದ ದೇವಪ್ಪ ಗುರುವಾರ ಚಿಕಿತ್ಸೆ ಪಡೆದರು

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

'ಕ್ಷುಲ್ಲಕ ಕಾರಣಕ್ಕೆ ಕೆಲವರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ. ಆಸ್ಪತ್ರೆಯಿಂದ ಹೊರ ಬಂದ ನಂತರ ಪೊಲೀಸರಿಗೆ ದೂರು ಕೊಡುತ್ತೇನೆ' ಎಂದು ಆನಂದ ದೇವಪ್ಪ ತಿಳಿಸಿದರು. ಸ್ಥಳದಲ್ಲಿದ್ದ ಕಾಂಗ್ರೆಸ್ ಹಿರಿಯ ಮುಖಂಡರು ಸಂಧಾನ ನಡೆಸಿದ್ದರಿಂದ ಎರಡೂ ಗುಂಪಿನವರು

ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಲು ಮುಂದೆ ಬರಲಿಲ್ಲ.

ಒಮ್ಮತದ ಆಯ್ಕೆಗೆ ಕಾಂಗ್ರೆಸ್ ಕಸರತ್ತು

ಬೆಂಗಳೂರು: 'ಗೆಲುವೊಂದೇ ಮಾನದಂಡ' ಎಂಬ ಸೂತ್ರದಡಿ ಮುಂಬರುವ ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಮುಂದಾಗಿರುವ ರಾಜ್ಯ ಕಾಂಗ್ರೆಸ್‌ನ ಚುನಾವಣಾ ಸಮಿತಿ ಸದಸ್ಯರು, ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನೇತೃತ್ವದಲ್ಲಿ ದೇವನಹಳ್ಳಿಯ ಕ್ಲಾರ್ಕ್ ಎಕ್ಸಾರ್ಟಿಕ ಹೋಟೆಲ್‌ನಲ್ಲಿ ಗುರುವಾರ ಸುಮಾರು ಮೂರು ತಾಸು ಸಮಾಲೋಚನೆ ನಡೆಸಿದರು.

ಗುರುವಾರದ ಸಭೆಗೂ ಮೊದಲೇ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಜೊತೆ ಬುಧವಾರ ತಡರಾತ್ರಿವರೆಗೆ ಸಮಾಲೋಚನೆ ನಡೆಸಿದ್ದ ಸುರ್ಜೇವಾಲಾ, ಚುನಾವಣಾ

ರಾಜ್ಯ ಚುನಾವಣಾ ಸಮಿತಿಯ ಸಭೆಯಲ್ಲಿ ಅಭ್ಯರ್ಥಿಗಳ ಪಟ್ಟಿ ಒಂದು ಹಂತಕ್ಕೆ ಬಂದಿದೆ. ಕೇಂದ್ರ ಚುನಾವಣಾ ಸಮಿತಿಯು ಪರಿಶೀಲಿಸಿ, ಪಟ್ಟಿ ಅಂತಿಮಗೊಳಿಸಿ ಪ್ರಕಟಿಸಲಿದೆ
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಸಮಿತಿ ಸಭೆಯ ಬಳಿಕ ಮತ್ತೊಮ್ಮೆ ಇಬ್ಬರು ನಾಯಕರೊಂದಿಗೆ ಪ್ರತ್ಯೇಕ ಸಭೆ ನಡೆಸಿದರು. ಆ ಮೂಲಕ, ಇಬ್ಬರ ಜೊತೆ ಚರ್ಚಿಸಿ, ಸಹಮತ ಮೂಡಿಸಿ ಸಂಭವನೀಯ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸುವ ಕಸರತ್ತು ನಡೆಸಿದರು.

'ಪಕ್ಷದ ಹಾಲಿ ಶಾಸಕರು ಪ್ರತಿನಿಧಿಸುವ ಕ್ಷೇತ್ರವೂ ಸೇರಿ 120ರಿಂದ 130 ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳನ್ನು ಪಟ್ಟಿಯನ್ನು ಅಂತಿಮಗೊಳಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಪಕ್ಷ ಮಾಜಿ ಶಾಸಕರ ಕ್ಷೇತ್ರಗಳು ಮತ್ತು ಕಗ್ಗಂಟಾಗಿರುವ ಕೆಲವು ಕ್ಷೇತ್ರಗಳಲ್ಲಿ ಏನು ಮಾಡಬೇಕೆಂಬ ಬಗ್ಗೆಯೂ ಗಂಭೀರ ಮಾತುಕತೆ ನಡೆಯಿತು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ಸಮಿತಿಯ ಎಲ್ಲ ಸದಸ್ಯರಿಂದ ಟಿಕೆಟ್ ಆಕಾಂಕ್ಷಿಗಳ ಕುರಿತು ಸುರ್ಜೇವಾಲಾ ಅಭಿಪ್ರಾಯ ಪಡೆದರು. ಇನ್ನೂ ಆಕಾಂಕ್ಷಿಗಳಿದ್ದರೆ ಚೀಟಿಯಲ್ಲಿ ಅಭಿಪ್ರಾಯ ತಿಳಿಸುವಂತೆ ಕೂಡಾ ಸಲಹೆ ನೀಡಿದರು. ಇದಕ್ಕೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದು, ಎಲ್ಲವೂ ಮೊದಲೇ ತೀರ್ಮಾನ ಆದಂತಿದೆ. ಚೀಟಿ ಕೊಡುವುದಾದರೆ ಸಭೆಗೆ ಯಾಕೆ ಬರಬೇಕಿತ್ತು ಎಂದು ಕೆಲವರು ಆಕ್ಷೇಪಿಸಿದರು' ಎಂದೂ ಮೂಲಗಳು ಹೇಳಿವೆ.

ಹಾಲಿ ಶಾಸಕರಿಗೆ ಟಿಕೆಟ್: ಸಭೆಯ ಬಳಿಕ ಮಾತನಾಡಿದ ಡಿ.ಕೆ.ಶಿವಕುಮಾರ್, 'ನಮ್ಮ ಪಕ್ಷದ ಎಲ್ಲ ಶಾಸಕರು ಉತ್ತಮವಾಗಿ ಕೆಲಸ ಮಾಡಿದ್ದಾರೆ. ಬಿಜೆಪಿ ಸಹಕಾರ ನೀಡದಿದ್ದರೂ ನಮ್ಮ ಶಾಸಕರು ಜನರ ಮಧ್ಯೆ ನಿಂತು ಕೆಲಸ ಮಾಡಿದ್ದಾರೆ. ಹೀಗಾಗಿ, ಬಹುತೇಕ ಎಲ್ಲ ಹಾಲಿ ಶಾಸಕರಿಗೆ ಟಿಕೆಟ್ ಸಿಗಲಿದೆ' ಎಂದರು.

ಪಟ್ಟಿ ಪ್ರಕಟ ವಿಳಂಬ?

ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಫೆ. 10ರ ಒಳಗೆ ಘೋಷಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ. ಆದಷ್ಟು ಬೇಗ ಪಟ್ಟಿ ಘೋಷಿಸಬೇಕೆಂಬ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ. ಆದರೆ, ಕೇಂದ್ರ ಚುನಾವಣಾ ಸಮಿತಿ, ಸ್ಕ್ರೀನಿಂಗ್ ಸಮಿತಿ ಇನ್ನಷ್ಟೆ ರಚನೆ ಆಗಬೇಕಿದೆ. ಈ ಸಮಿತಿಗಳು ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು. ಹೀಗಾಗಿ, ಈ ತಿಂಗಳ ಕೊನೆಯಲ್ಲಿ ಪಟ್ಟಿ ಪ್ರಕಟ ಆಗಬಹುದು ಎಂದು ಕಾಂಗ್ರೆಸ್ ನಾಯಕರೊಬ್ಬರು ತಿಳಿಸಿದರು.

'ನಾನು ಚುನಾವಣಾ ಸಮಿತಿಯಲ್ಲಿದ್ದೇನೆ. ಒಂದು ಕ್ಷೇತ್ರದಿಂದ ಎರಡರಿಂದ ಮೂರು ಹೆಸರು ಕಳುಹಿಸುವ ಬಗ್ಗೆ ಚರ್ಚೆ ಮಾಡಿದ್ದೇವೆ. ದೆಹಲಿಯಲ್ಲಿ ನಡೆಯುವ ಸಭೆಯಲ್ಲಿ ಅಭ್ಯರ್ಥಿ ಹೆಸರು ಅಂತಿಮಗೊಳ್ಳುತ್ತದೆ, ಮೊದಲ ಹಂತದಲ್ಲಿ 100 ಕ್ಷೇತ್ರಗಳ ಪಟ್ಟಿ ಬಿಡುಗಡೆ ಮಾಡುತ್ತೇವೆ. ಫೆ. 15ರ ಒಳಗೆ ಪಟ್ಟಿ ಬಿಡುಗಡೆ ಶೇ 100ರಷ್ಟು ಖಚಿತ' ಎಂದು ಕಾಂಗ್ರೆಸ್ ನಾಯಕ ಅಲ್ಲಂ ವೀರಭದ್ರಪ್ಪ ಅವರು ಹೇಳಿದರು.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ₹ 5,300 ಕೋಟಿ ಒದಗಿಸಿದ್ದು, ಇದು ಯೋಜನೆಯ ಚಿತ್ರಣವನ್ನೇ ಬದಲಿಸಲಿದೆ ಎಂದು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

11ರಂದು ಪುತ್ತೂರಿಗೆ ಅಮಿತ್ ಶಾ

ಮಂಗಳೂರು: ಕ್ಯಾಂಪ್ಕೊ ಸಂಸ್ಥೆಯ ಸುವರ್ಣಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಅವರು ಫೆ.11ರಂದು ಪುತ್ತೂರಿಗೆ ಭೇಟಿ ನೀಡಲಿದ್ದಾರೆ.

ಮಂಗಳೂರು ವಿಮಾನ ನಿಲ್ದಾಣದಲ್ಲಿ ರನ್ ವೇ ದುರಸ್ತಿ ಕಾಮಗಾರಿ ನಡೆ-ಯುತ್ತಿರುವುದರಿಂದ, ಶಾ ಅವರು ಮಧ್ಯಾಹ್ನ 1 ಗಂಟೆ ಸುಮಾರಿಗೆ ಕೇರಳದ ಕಣ್ಣೂರು ವಿಮಾನ ನಿಲ್ದಾಣಕ್ಕೆ ಬಂದು ಇಳಿಯುವರು. ಅಲ್ಲಿಂದ ಹೆಲಿಕಾಪ್ಟರ್ ಮೂಲಕ ಪುತ್ತೂರು ಸಮೀಪದ ಈಶ್ವರಮಂಗಲಕ್ಕೆ ಬರುವರು. ಮಧ್ಯಾಹ್ನ 1.30ರಿಂದ 2.30ರವರೆಗೆ ಈಶ್ವರಮಂಗಲದ ಭಾರತ್ ಮಾತಾ ಮಂದಿರ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಳಿಕ ಪಂಚಮುಖಿ ಆಂಜನೇಯ ದೇವಸ್ಥಾನಕ್ಕೆ ಭೇಟಿ ನೀಡಿ, 2.35ಕ್ಕೆ ಹೆಲಿಕಾಪ್ಟರ್ ಮೂಲಕವೇ ಪುತ್ತೂರಿನ ಸೇಂಟ್ ಫಿಲೋಮಿನಾ ಕಾಲೇಜಿಗೆ ಬರುವರು.

ಪುತ್ತೂರಿನ ವಿವೇಕಾನಂದ ಆಂಗ್ಲಮಾಧ್ಯಮ ಶಾಲೆ ಮೈದಾನದಲ್ಲಿ ಸಂಜೆ 3.30ರಿಂದ ಸಮಾವೇಶ ನಡೆಯಲಿದ್ದು, ಅಲ್ಲಿ ಕ್ಯಾಂಪ್ಕೊ ಸುವರ್ಣ ಮಹೋತ್ಸವಕ್ಕೆ ಚಾಲನೆ, ವಿವಿಧ ಉತ್ಪನ್ನಗಳ ಉದ್ಘಾಟನೆ, ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿದ ಬಳಿಕ ಚಾಕೊಲೇಟ್ ಫ್ಯಾಕ್ಟರಿಗೆ ಭೇಟಿ ನೀಡುವರು. 5.30ಕ್ಕೆ ಹೆಲಿಕಾಪ್ಟರ್ ಮೂಲಕ ಕಣ್ಣೂರಿಗೆ ತೆರಳಿ, ಅಲ್ಲಿಂದ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.


ಮಹಾರಥೋತ್ಸವ
ಕೊಪ್ಪಳ ಜಿಲ್ಲೆ ಅಳವಂಡಿ ಗ್ರಾಮದ ಸಿದ್ಧೇಶ್ವರ ಮಠದ ಜಾತ್ರೆಯ ಅಂಗವಾಗಿ ಮಹಾರಥೋತ್ಸವ ಗುರುವಾರ ವಿಜೃಂಭಣೆಯಿಂದ ನೆರವೇರಿತು
–ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

ಸಂತೋಷ್ ಲಾಡ್-ಸಚಿವ ಶ್ರೀರಾಮುಲು ಆಲಿಂಗನ: ರಾಜಕೀಯ ವಲಯದಲ್ಲಿ ಚರ್ಚೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕಾಂಗ್ರೆಸ್‌ನ ಮಾಜಿ ಸಚಿವ ಸಂತೋಷ್ ಲಾಡ್ ಹಾಗೂ ಸಚಿವ ಶ್ರೀರಾಮುಲು ಅವರ ಆಲಿಂಗನದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಶ್ರೀರಾಮುಲು ಮತ್ತು ಸಂತೋಷ್ ಲಾಡ್ ರಾಜಕೀಯವಾಗಿ ಬದ್ಧ ವೈರಿಗಳಾದರೂ ಬಹಳ ದಿನಗಳ ನಂತರ ಭೇಟಿಯಾದ ಹಿನ್ನೆಲೆಯಲ್ಲಿ ಪರಸ್ಪರ ಆಲಂಗಿಸಿಕೊಂಡು ನೆರೆದವರಿಗೆ ಅಚ್ಚರಿ ಮೂಡಿಸಿದರು. ಸಂಡೂರು ತಾಲ್ಲೂಕಿನ ಬನ್ನಿಹಟ್ಟಿ ಗ್ರಾಮದ ಉಡುಸಲಮ್ಮ ಜಾತ್ರಾ ಮಹೋತ್ಸವಕ್ಕೆ ಬುಧವಾರ ಬಂದಿದ್ದ ಉಭಯ ನಾಯಕರು ತಮ್ಮ ನಡುವಿನ ಆತ್ಮೀಯತೆಯನ್ನು ಪ್ರದರ್ಶಿಸಿದರು.

ಸಂಡೂರು ಕ್ಷೇತ್ರದ ಮೇಲೆ ಕಣ್ಣಿಟ್ಟಿರುವ ಸಚಿವ ಶ್ರೀರಾಮುಲು, ಕ್ಷೇತ್ರದಲ್ಲಿ ಸತತವಾಗಿ ಓಡಾಡುತ್ತಿದ್ದಾರೆ. ಕಲಘಟಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಸಂತೋಷ್ ಲಾಡ್ ಪ್ರಯತ್ನ ನಡೆಸಿದ್ದಾರೆ. ಇಬ್ಬರು ಸಾರ್ವಜನಿಕವಾಗಿ ಆತ್ಮೀಯತೆ ಪ್ರದರ್ಶಿಸಿರುವುದು ರಾಜಕೀಯ ಚರ್ಚೆಗೂ ಕಾರಣವಾಗಿದೆ.



ಕಾಂಗ್ರೆಸ್‌ನ ಮಾಜಿ ಸಚಿವ ಸಂತೋಷ ಲಾಡ್ ಹಾಗೂ ಸಚಿವ ಶ್ರೀರಾಮುಲು ಅವರು ಆಲಿಂಗನ ಮಾಡಿದರು

ರಾಜಕೀಯಕ್ಕೂ ಸಂಬಂಧವಿಲ್ಲ-ಲಾಡ್: 'ಜಾತ್ರೆಯಲ್ಲಿ ಸಚಿವ ಶ್ರೀರಾಮುಲು ಅವರನ್ನು ಆಲಿಂಗಿಸಿದ್ದಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ. 98ರಿಂದ ನಾವಿಬ್ಬರೂ ಸ್ನೇಹಿತರು ರಾಜಕೀಯದ ಹೊರತಾಗಿ ವೈಯಕ್ತಿಕ ಪ್ರೀತಿ, ಸಂಬಂಧ ಉಳಿಸಿಕೊಂಡಿದ್ದೇವೆ' ಎಂದು ಕಾಂಗ್ರೆಸ್ ಮುಖಂಡ ಸಂತೋಷ್ ಲಾಡ್ ಪ್ರತಿಕ್ರಿಯಿಸಿದ್ದಾರೆ.

'ಶ್ರೀರಾಮುಲು ಸಂಡೂರಿಗೆ ಬಂದು ಸ್ಪರ್ಧೆ ಮಾಡುವುದಾಗಿ ಹೇಳಿರುವುದಕ್ಕೂ ನಮ್ಮ ಭೇಟಿಗೂ ಯಾವುದೇ ಸಂಬಂಧವಿಲ್ಲ. ನಾನು ಬಳ್ಳಾರಿ ಜಿಲ್ಲೆ ಉಸ್ತುವಾರಿ ಸಚಿವನಾಗಿದ್ದಾಗ ಅನೇಕ ಸಲ ಭೇಟಿಯಾಗಿದ್ದೇವೆ. ಆಗ ವಿಡಿಯೋ ಕ್ಯಾಮರಾಗಳಿಗೆ ಸಿಕ್ಕಿರಲಿಲ್ಲ. ಈ ಸಲ ಸಿಕ್ಕಿದ್ದೇವೆ'' ಎಂದು ಲಾಡ್ ತಿಳಿಸಿದರು.

ಸಿಂದಗಿ: ಜೆಡಿಎಸ್ ಅಭ್ಯರ್ಥಿಯಾಗಿ ವಿಶಾಲಾಕ್ಷಿ ಪಾಟೀಲ

ಸಿಂದಗಿ (ವಿಜಯಪುರ ಜಿಲ್ಲೆ): ಸಿಂದಗಿ ವಿಧಾನಸಭಾ ಕ್ಷೇತ್ರದಲ್ಲಿ ದಿವಂಗತ ಶಿವಾನಂದ ಪಾಟೀಲ ಸೋಮಜಾಳ ಅವರ ಪತ್ನಿ ವಿಶಾಲಾಕ್ಷಿ ಪಾಟೀಲ ಅವರನ್ನು ಜೆಡಿಎಸ್ ಅಭ್ಯರ್ಥಿಯೆಂದು ತೀರ್ಮಾನಿಸಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.



ಸಿಂದಗಿ ಮತಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿದ್ದ ಶಿವಾನಂದ ಪಾಟೀಲ ಸೋಮಜಾಳ ಈಚೆಗೆ ನಿಧನರಾಗಿದ್ದು, ಶಹಾಪುರದಲ್ಲಿ ಪಕ್ಷದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪಾಟೀಲರಿಗೆ ಗೌರವ ಸಲ್ಲಿಸಬೇಕು ಎನ್ನುವ ಕಾರಣಕ್ಕೆ ಅವರ ಪತ್ನಿಯನ್ನೇ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿದೆ. ಚುನಾವಣೆಯಲ್ಲಿ ಅವರ ಬೆನ್ನಿಗೆ ಚೂರಿ ಹಾಕುವ ಕೆಟ್ಟ ಕಾರ್ಯ ಯಾರೂ ಮಾಡಕೂಡದು' ಎಂದು ಪಕ್ಷದ ಕಾರ್ಯಕರ್ತರಲ್ಲಿ ಮನವಿ ಮಾಡಿಕೊಂಡರು. 'ನಾನೊಬ್ಬ ಅಣ್ಣನಾಗಿ ಸಹೋದರಿಯ ಚುನಾವಣೆಯ ಸಮಸ್ತ ಜವಾಬ್ದಾರಿ ಹೊತ್ತುಕೊಳ್ಳುವೆ' ಎಂದು ಭರವಸೆ ನೀಡಿದರು.

ಸಂಕ್ಷಿಪ್ತ ಸುದ್ದಿ

ಬಿಜೆಪಿ ಪ್ರಮುಖ ನಾಯಕರ ಸಭೆ ಇಂದು

ಬೆಂಗಳೂರು: ವಿವಿಧ ನಾಯಕರ ರಥಯಾತ್ರೆಗಳು, ಕೇಂದ್ರ ನಾಯಕರ ರಾಜ್ಯ ಪ್ರವಾಸಗಳನ್ನು ನಿಗದಿ ಮಾಡುವುದೂ ಸೇರಿ ವಿಧಾನಸಭಾ ಚುನಾವಣೆಗೆ ಸಿದ್ಧತೆ ನಡೆಸುವ ಸಂಬಂಧ ಶುಕ್ರವಾರ ಸಂಜೆ ಬಿಜೆಪಿ ಪ್ರಮುಖ ನಾಯಕರ ಸಭೆ ನಡೆಯಲಿದೆ.

ಈಗಾಗಲೇ ವಿಜಯಸಂಕಲ್ಪ ಅಭಿಯಾನವೂ ಪೂರ್ಣಗೊಂಡಿದ್ದು, ಮುಂದಿನ ಹಂತದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ನಾಯಕರ ರಥಯಾತ್ರೆ ನಡೆಸಲು ತೀರ್ಮಾನಿಸಲಾಗಿದೆ. ಎಷ್ಟು ಕಡೆಯಿಂದ ಮತ್ತು ಯಾರೆಲ್ಲ ಯಾತ್ರೆಗಳ ನೇತೃತ್ವ ವಹಿಸಬೇಕು ಎಂಬ ಬಗ್ಗೆ ಚರ್ಚೆ ನಡೆಯಲಿದೆ. ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸುವ ಬಗ್ಗೆಯೂ ಚರ್ಚೆ ನಡೆಯಲಿದೆ. ಈ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಸೇರಿ ಎಲ್ಲ ಪ್ರಮುಖರೂ ಭಾಗವಹಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಕೊಂಡಯ್ಯಗೆ ನೋಟಿಸ್

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಪಟ್ಟಣದಲ್ಲಿ ಈಚೆಗೆ ಶಾಸಕ ಪಿ.ಟಿ.ಪರಮೇಶ್ವರನಾಯ್ಕ ವಿರುದ್ಧ ಹೇಳಿಕೆ ನೀಡಿದ್ದ ಮಾಜಿ ಸಂಸದ ಕೆ.ಸಿ.ಕೊಂಡಯ್ಯ ಅವರಿಗೆ ಕೆಪಿಸಿಸಿ ಶಿಸ್ತುಪಾಲನಾ ಸಮಿತಿ ನೋಟಿಸ್ ಜಾರಿ ಮಾಡಿದೆ.

'ಪಕ್ಷದ ನಾಯಕರಾದ ನೀವು ಶಾಸಕರ ವಿರುದ್ಧ ಮಾಧ್ಯಮದವರ ಬಳಿ ಮಾತನಾಡಿರುವುದು ಪಕ್ಷಕ್ಕೆ ಮುಜುಗರ ತಂದಿದೆ. ಈ ಬಗ್ಗೆ 10 ದಿನದೊಳಗೆ ವಿವರಣೆ ನೀಡಬೇಕು' ಎಂದು ಸಮಿತಿ ಸಂಚಾಲಕ ನಿವೇದಿತ್ ಆಳ್ವ ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

'ಪರಮೇಶ್ವರ ನಾಯ್ಕ ಗೆಲ್ಲಿಸಿರುವುದಕ್ಕೆ ಪಶ್ಚಾತ್ತಾಪವಾಗಿದೆ. ಅವರು ಜನರ ಹಿತ, ಕ್ಷೇತ್ರದ ಅಭಿವೃದ್ಧಿ ಮರೆತು ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಮುಂದಿನ ಚುನಾವಣೆಯಲ್ಲಿ ಹೊಸಬರಿಗೆ ಟಿಕೆಟ್ ನೀಡಬೇಕು ಎಂದು ವರಿಷ್ಠರಿಗೆ ಜನರ ಭಾವನೆ ತಿಳಿಸಿದ್ದೇವೆ' ಎಂದು ಕೊಂಡಯ್ಯ ಹೇಳಿದ್ದರು.

ಗ್ರಾ.ಪಂ: 25ರಂದು ಚುನಾವಣೆ

ಬೆಂಗಳೂರು: ಇದೇ ಜನವರಿಯಿಂದ ಏಪ್ರಿಲ್‌ವರೆಗೆ ಅವಧಿ ಮುಕ್ತಾಯವಾಗುವ ಎಂಟು ಗ್ರಾಮ ಪಂಚಾಯಿತಿಗಳ 127 ಸದಸ್ಯ ಸ್ಥಾನಗಳಿಗೆ ಫೆ. 25ರಂದು ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗ ನಿರ್ಧರಿಸಿದೆ. ವಿವಿಧ ಕಾರಣಗಳಿಂದ ಖಾಲಿ ಉಳಿದಿರುವ 103 ಗ್ರಾ. ಪಂ.ಗಳ 135 ಸದಸ್ಯ ಸ್ಥಾನಗಳಿಗೂ ಅದೇ ದಿನ ಉಪಚುನಾವಣೆ ನಡೆಯಲಿದೆ.

ವೇಳಾಪಟ್ಟಿ: ಚುನಾವಣಾ ಆಯೋಗ ಫೆ. 8ರಂದು ಅಧಿಸೂಚನೆ ಹೊರಡಿಸಲಿದೆ. ನಾಮಪತ್ರ ಸಲ್ಲಿಸಲು 14 ಕೊನೆಯ ದಿನ. 15ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು 17 ಕೊನೆಯ ದಿನ. 25ರಂದು ಬೆಳಿಗ್ಗೆ 7ರಿಂದ ಸಂಜೆ 5ರವರೆಗೆ ಮತದಾನ, ಅವಶ್ಯವಿದ್ದರೆ 27ರಂದು ಮರು ಮತದಾನ, 28ರ ಬೆಳಿಗ್ಗೆ 8 ಗಂಟೆಯಿಂದ ತಾಲ್ಲೂಕು ಕೇಂದ್ರಗಳಲ್ಲಿ ಮತಗಳ ಎಣಿಕೆ ನಡೆಯಲಿದೆ. ಗ್ರಾ. ಪಂ.ಗಳ ವ್ಯಾಪ್ತಿಯಲ್ಲಿ ಫೆ. 8ರಿಂದ 28ರವರೆಗೆ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿ ಇರಲಿದೆ ಎಂದು ಆಯೋಗ ತಿಳಿಸಿದೆ.

'ಡಯಟ್': ಶೇ 70ರಷ್ಟು ಹುದ್ದೆ ಕಡಿತ

ಒಂದನೇ ಪುಟದಿಂದ

ಜಿಲ್ಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಳ, ವಿವಿಧ ತರಬೇತಿಗಳ ನಿರಂತರ ಆಯೋಜನೆ, ಶಿಕ್ಷಣ ಪೂರ್ವ ತರಗತಿಗಳಿಗೆ ಪಾಠ, ವಸ್ತುನಿಷ್ಠ ಸಮೀಕ್ಷೆ, ಅಧ್ಯಯನ, ವಿವಿಧ ಪರೀಕ್ಷೆಗಳನ್ನು ನಡೆಸುವ ಹೊಣೆಗಾರಿಕೆಯನ್ನು ಡಯಟ್ ಉಪನ್ಯಾಸಕರು ನಿರ್ವಹಿಸುತ್ತಾ ಬಂದಿದ್ದಾರೆ.

ಎನ್‌ಇಪಿ ಜಾರಿಗಾಗಿ ಡಯಟ್‌ಗಳಲ್ಲಿ ಸೇವಾಪೂರ್ವ ಶಿಕ್ಷಕರ ಸಂಯೋಜಿತ ಬಿ.ಇಡಿ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ. ಗುಣಮಟ್ಟದ ಶಿಕ್ಷಣಕ್ಕಾಗಿ ಪ್ರತಿ ಜಿಲ್ಲೆಯಲ್ಲೂ 5 ಸಾವಿರದಿಂದ 6 ಸಾವಿರ ಶಿಕ್ಷಕರಿಗೆ ತರಬೇತಿ ನೀಡುವ ಜವಾಬ್ದಾರಿಯನ್ನು ನಿಭಾಯಿಸಲಾಗುತ್ತಿದೆ. ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2022ರ ಶಿಫಾರಸಿನಂತೆ ಪ್ರತಿ ಜಿಲ್ಲೆಯಲ್ಲಿ ಶಾಲಾ ಪೂರ್ವ ಶಿಕ್ಷಕರಿಗೆ (ಅಂಗನವಾಡಿ) ಸೇವಾನಿರತರಂತೆಯೇ ತರಬೇತಿ ನೀಡಿ ಹೆಚ್ಚುವರಿಯಾಗಿ ಕಾರ್ಯ ನಿರ್ವಹಣೆ ಮಾಡಬೇಕಾಗಿದೆ. ಇವರಿಗೆ ತರಬೇತಿ ನೀಡಬೇಕಾಗಿದೆ. ಪದವಿಪೂರ್ವ ಶಿಕ್ಷಣವನ್ನು ಹಿರಿಯ ಪ್ರೌಢಶಾಲೆಗಾಗಿ ಸರ್ಕಾರ ಮರು ರೂಪಿಸುತ್ತಿದ್ದು, ಪಿಯು ಉಪನ್ಯಾಸಕರಿಗೂ ಡಯಟ್‌ಗಳಲ್ಲಿ ತರಬೇತಿ ಆಯೋಜಿಸಲಾಗುತ್ತಿದೆ.

'ಶಾಲೆಗಳಿಗೆ ಭೇಟಿ ನೀಡಿ ಸಲಹೆ ಹಾಗೂ ತರಬೇತಿಗಳನ್ನು ನೀಡಲು ಡಯಟ್‌ಗಳು ಸಿಬ್ಬಂದಿ ಕೊರತೆ ಎದುರಿಸುತ್ತಿವೆ. ಇಂತಹ ಸಮಯದಲ್ಲಿ ಇಲಾಖೆಯ ನಿರ್ಧಾರ ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಿಯಾಗುತ್ತದೆ. ಕೇರಳದಲ್ಲಿ ಹುದ್ದೆಗಳನ್ನು ದ್ವಿಗುಣಗೊಳಿಸುವ ಮೂಲಕ ಬಲಪಡಿಸಲಾಗಿದೆ. ಅದೇ ಮಾದರಿ ರಾಜ್ಯದಲ್ಲೂ ಅನುಸರಿಸಬೇಕು' ಎನ್ನುತ್ತಾರೆ ರಾಜ್ಯ ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಕೆ.ಜಿ.ಅಂಜನಪ್ಪ.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು ಗ್ರಾಮೀಣ ವಿಶ್ವವಿದ್ಯಾಲಯಗಳಂತೆ ಅಭಿವೃದ್ಧಿಪಡಿಸಲು 2003ರಲ್ಲೇ ಡಾ. ರಾಜಾ ರಾಮಣ್ಣ ಅವರ ನೇತೃತ್ವದ ಸಮಿತಿ ಶಿಫಾರಸು ಮಾಡಿತ್ತು. ವರದಿ ಇದುವರೆಗೂ ಕಾರ್ಯಗತವಾಗಿಲ್ಲ.

ನಿಯಮ ಉಲ್ಲಂಘಿಸಿ ಪುಸ್ತಕ ಖರೀದಿಗೆ ಟೆಂಡರ್: ಪ್ರಕಾಶಕರ ದೂರು

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದ ವಿದ್ಯಾರ್ಥಿನಿಲಯಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಪೂರೈಕೆ ಮಾಡಲು ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಇದು ನಿಯಮಾವಳಿಗಳಿಗೆ ವಿರುದ್ಧವಾಗಿದೆ ಎಂದು ಪ್ರಕಾಶಕರು ದೂರಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ವಿದ್ಯಾರ್ಥಿ ನಿಲಯಗಳ ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸಲು ಇಲಾಖೆಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ 18 ಸದಸ್ಯರ ಆಯ್ಕೆ ಸಮಿತಿ ರಚಿಸಲಾಗಿದೆ. ಇದು ರಾಜ್ಯ ಮಟ್ಟದ ಸಮಿತಿಯಾಗಿದ್ದು, ಸಮಿತಿಯ ಶಿಫಾರಸ್ಸಿನ ಬಳಿಕವೇ ಪುಸ್ತಕಗಳ ಖರೀದಿಗೆ ಟೆಂಡರ್ ಕರೆಯಬೇಕು ಎಂದು ಪ್ರಕಾಶಕರು ಹೇಳಿದ್ದಾರೆ.

'ಹಾಸನ ಜಿಲ್ಲೆಯಲ್ಲಿ ಇಂತಹದ್ದೊಂದು ಟೆಂಡರ್ ಕರೆಯಲಾಗಿದ್ದು, ಜ.2 ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿತ್ತು. ಬೇರೆ ಜಿಲ್ಲೆಗಳಲ್ಲೂ ಇದೇ ರೀತಿ ಟೆಂಡರ್ ಕರೆಯಲಾಗಿದೆ ಎಂದು ಹೇಳಲಾಗಿದ್ದು, ಆ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಈ ಮೂಲಕ ಯಾವುದೋ ಒಂದೆರಡು ಪ್ರಕಾಶನಗಳಿಗೆ ಅನುಕೂಲ ಮಾಡಿಕೊಡುವ ಪ್ರಯತ್ನ ನಡೆದಿದೆ' ಎಂದು ಕರ್ನಾಟಕ ಪ್ರಕಾಶಕರ ಸಂಘದ ಸೃಷ್ಟಿ ನಾಗೇಶ್ ದೂರಿದರು.

'ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆಯ್ಕೆ ಸಮಿತಿ ಮೂಲಕವೇ ಖರೀದಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ತನ್ನ ಆದೇಶದಲ್ಲಿ ತಿಳಿಸಿದೆ. ಆದರೆ ಅದನ್ನು ಪಾಲಿಸುತ್ತಿಲ್ಲ' ಎಂದು ಅವರು ಹೇಳಿದರು.

ಸಿ.ಎಂ.ಗೆ ಪತ್ರ: ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಏಕಗವಾಕ್ಷಿ ಯೋಜನೆಯ ಪುಸ್ತಕ ಖರೀದಿಗೆ ಹಣ ಬಿಡುಗಡೆ ಮಾಡಬೇಕು ಮತ್ತು ಕನ್ನಡ ಪುಸ್ತಕಗಳ ಪುಟವಾರು ಬೆಲೆಯನ್ನು ಪರಿಷ್ಕರಿಸಿ, ತಕ್ಷಣವೇ ಜಾರಿ ಮಾಡಬೇಕು ಎಂದು ವಿಧಾನಪರಿಷ್ ಸದಸ್ಯ ಎಚ್.ವಿಶ್ವನಾಥ್ ಅವರು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ನಾಯಕಿಯರ ವಿರುದ್ಧ ಉಪ್ಪಾರಪೇಟೆ ಠಾಣೆಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ಶಿಕ್ಷಕಿಯರೆಂದು ಪರಿಗಣಿಸಬೇಕು. ಗ್ರ್ಯಾಚ್ಯುಟಿ ಪಾವತಿಸಬೇಕು' ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದ ನಾಯಕಿಯರ ವಿರುದ್ಧ ಉಪ್ಪಾರಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಪ್ರತಿಭಟನೆ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ಆದೇಶ ಉಲ್ಲಂಘಿಸಿದ್ದ ಪ್ರಮುಖರು, ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿದ್ದರು. ಹೀಗಾಗಿ, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಿಐಟಿಯು ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ, ಶಾಂತಾ ಘಂಟಿ, ಎಚ್.ಎಸ್. ಸುನಂದಾ, ಜಿ. ಕಮಲಾ ಹಾಗೂ ಜಿಲ್ಲಾ ಘಟಕಗಳ ಪ್ರಮುಖರನ್ನು ಆರೋಪಿಗಳನ್ನಾಗಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಿದ್ದ ಪ್ರತಿಭಟನೆಯಲ್ಲಿ 4 ಸಾವಿರದಿಂದ 5 ಸಾವಿರ ಮಹಿಳೆಯರು ಸೇರಿದ್ದರು. ಉದ್ಯಾನದ ಎದುರಿನ ರಸ್ತೆಯಲ್ಲಿ ಸಾರ್ವಜನಿಕರ ವಾಹನಗಳ ಸಂಚಾರ ತಡೆದು ಪ್ರತಿಭಟನೆ ನಡೆಸುವಂತೆ ಅವರು ಭಾಷಣದ ಮೂಲಕ ಕರೆ ನೀಡಿದ್ದರು. ಇದರಿಂದಾಗಿ ಸ್ಥಳದಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು' ಎಂದು ಮೂಲಗಳು ಹೇಳಿವೆ.

'ಕರ್ತವ್ಯದಲ್ಲಿದ್ದ ಸಿಬ್ಬಂದಿ, ಹೈಕೋರ್ಟ್ ಆದೇಶ ಪಾಲಿಸುವಂತೆ ಕೋರಿದ್ದರು. ಅವರ ಮಾತಿಗೂ ನಾಯಕಿಯರು ಸ್ಪಂದಿಸಿರಲಿಲ್ಲ. ಹೀಗಾಗಿ, ಎಲ್ಲರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಅಂಗನವಾಡಿ ಸಿಬ್ಬಂದಿಗೆ ಗ್ರ್ಯಾಚ್ಯುಟಿ: ಆದೇಶ

ಬೆಂಗಳೂರು: ಅಂಗನವಾಡಿ ಸಿಬ್ಬಂದಿಗೆ ಗ್ರ್ಯಾಚ್ಯುಟಿ ಸೌಲಭ್ಯ ಕಲ್ಪಿಸಿ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

2023–24ನೇ ಸಾಲಿನ ಆರ್ಥಿಕ ವರ್ಷದಿಂದ ಜಾರಿಗೆ ಬರುವಂತೆ ಗ್ರ್ಯಾಚ್ಯುಟಿ ನೀಡಲು ಆಡಳಿತಾತ್ಮಕ ಅನುಮತಿ ನೀಡಿದೆ. ಗ್ರ್ಯಾಚ್ಯುಟಿ ಮೊತ್ತ ಹಾಗೂ ಲೆಕ್ಕ ಹಾಕುವ ವಿಧಾನಗಳನ್ನು ಒಳಗೊಂಡ ಮಾರ್ಗಸೂಚಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಈ ಸಂಬಂಧ ಗುರುವಾರ ಬೆಳಿಗ್ಗೆ ಸಚಿವ ಹಾಲಪ್ಪ ಆಚಾರ್ ಅವರು ಅಂಗನವಾಡಿ ನೌಕರರ ಸಂಘದ ಪ್ರಮುಖರೊಂದಿಗೆ ಸಭೆ ನಡೆಸಿದ್ದರು.

'ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿ ಹಂತ–ಹಂತವಾಗಿ ಆದೇಶ ಹೊರಡಿಸಲಾಗುವುದು. ಗ್ರ್ಯಾಚ್ಯುಟಿ ಜತೆಗೆ ಕನಿಷ್ಠ ವೇತನ ನೀಡಬೇಕು ಎಂಬ ಬೇಡಿಕೆ ಬಗ್ಗೆ ಮುಖ್ಯಮಂತ್ರಿ ಅವರ ಜತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಭರವಸೆ ನೀಡಿದ್ದರು.

ಸುಧಾ, ಮಯೂರ ಓದಿರಿ

ನಿಯಮ ಉಲ್ಲಂಘನೆ ದಂಡ: ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಬಗ್ಗೆ ಇ-ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ 50ರಷ್ಟು ರಿಯಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ಒಂದು ಬಾರಿಗೆ ಅನ್ವಯವಾಗುವಂತೆ ನೀಡಿರುವ ಈ ರಿಯಾಯಿತಿಯು ಫೆಬ್ರುವರಿ 11ರೊಳಗೆ ಇತ್ಯರ್ಥಪಡಿಸಿಕೊಂಡು ದಂಡ ಪಾವತಿಸುವ ಪ್ರಕರಣಗಳಿಗೆ ಮಾತ್ರ ದೊರಕಲಿದೆ. ಕಾನೂನು ಇಲಾಖೆ ಮತ್ತು ಆರ್ಥಿಕ ಇಲಾಖೆಯ ಸಹಮತಿ ಪಡೆದು ಸಾರಿಗೆ ಇಲಾಖೆ ಈ ಆದೇಶ ಹೊರಡಿಸಿದೆ.

'ಪಾನಮತ್ತ ಚಾಲನೆ ಹೊರತುಪಡಿಸಿ ಉಳಿದೆಲ್ಲಾ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೂ ಈ ರಿಯಾಯಿತಿ ದೊರಕಲಿದೆ. ಸರ್ಕಾರದ ಆದೇಶ ನಮಗೆ ದೊರೆತಿದೆ. ದಂಡವನ್ನು ಯಾವ ರೀತಿ ಪಾವತಿಸಬೇಕು ಎಂಬುದನ್ನು ಸದ್ಯದಲ್ಲೇ ತಿಳಿಸಲಾಗುವುದು' ಎಂದು ಬೆಂಗಳೂರು ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ.ಸಲೀಂ ತಿಳಿಸಿದರು.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹೇಳಿಕೆ

'ಟಿಪ್ಪು ನಿಜ ಕನಸುಗಳು ಕೃತಿಗೆ ಗೆಲುವು'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಟಿಪ್ಪು ನಿಜ ಕನಸುಗಳು' ಕೃತಿಯನ್ನು ನಿಷೇಧಿಸಬೇಕು, ನಾಟಕ ಪ್ರದರ್ಶನಕ್ಕೆ ಅವಕಾಶ ನೀಡಬಾರದು ಎಂದು ಬಿ.ಎಸ್.ರಫೀವುಲ್ಲಾ ಎಂಬುವವರು ಬೆಂಗಳೂರು ಕೋರ್ಟ್‌ನಲ್ಲಿ ಸಲ್ಲಿಸಿರುವ ದೂರನ್ನು ಬುಧವಾರ ಹಿಂಪಡೆದು ಪಲಾಯನ ಮಾಡಿದ್ದಾರೆ, ಕೃತಿಗೆ ಗೆಲುವು ಸಿಕ್ಕಿದೆ' ಎಂದು ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹೇಳಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಟಿಪ್ಪು ನಿಜ ಕನಸುಗಳು' ನಾಟಕದಲ್ಲಿ ಟಿಪ್ಪು ಸುಲ್ತಾನ್‌ನನ್ನು ಅವಮಾನಿಸಲಾಗಿದೆ, ಆಜಾನ್ ಅನ್ನು ನಾಟಕದಲ್ಲಿ ಬಳಸಲಾಗಿದೆ ಮತ್ತು ಮುಸ್ಲಿಮರನ್ನು ತುರುಕರು ಎಂದು ಸಂಬೋಧಿಸಿ ನೋವುಂಟು ಮಾಡಿ, ಸಮಾಜದಲ್ಲಿ ಅಶಾಂತಿ ಮೂಡಿಸಲಾಗುತ್ತಿದೆ ಎಂಬುದಾಗಿ ರಫೀವುಲ್ಲಾ ದೂರು ದಾಖಲಿಸಿದ್ದರು' ಎಂದು ಹೇಳಿದರು.

ದೂರಿನ ಹಿನ್ನೆಲೆಯಲ್ಲಿ ಕೃತಿ ನಿಷೇಧಿಸಿ ಕೋರ್ಟ್ ಆದೇಶಿಸಿತ್ತು. ಆದರೆ, ನಾಟಕ ಪ್ರದರ್ಶನಕ್ಕೆ ಯಾವುದೇ ಅಡ್ಡಿ ಇಲ್ಲ ಎಂದು ಆದೇಶದಲ್ಲಿ ತಿಳಿಸಿತ್ತು' ಎಂದರು.

'ಕೃತಿ ಮತ್ತು ನಾಟಕದಲ್ಲಿ ಎಲ್ಲಿಯೂ ಕೂಡ ಮುಸ್ಲಿಮರನ್ನು ಅವಮಾನಿಸಿಲ್ಲ. ಟಿಪ್ಪು ಮುಸ್ಲಿಂ ಎಂಬ ಕಾರಣಕ್ಕೆ ಆತ ಮುಸ್ಲಿಮರ ಪ್ರತಿನಿಧಿಯಲ್ಲ ಎಂದು ಕೋರ್ಟ್‌ಗೆ ಮನವರಿಕೆ ಮಾಡಲಾಗಿತ್ತು. ಅಷ್ಟರಲ್ಲೇ ದೂರನ್ನು ಹಿಂಪಡೆಯಲಾಗಿದೆ. ಹೀಗಾಗಿ ನಾಟಕ ಕೃತಿಗೆ ಗೆಲುವು ಸಿಕ್ಕಂತಾಗಿದೆ' ಎಂದು ಸಂತಸ ವ್ಯಕ್ತಪಡಿಸಿದರು.

'ವ್ಯವಸ್ಥೆ ಮೇಲೆ ಮುಸ್ಲಿಮರಿಗೆ ನಂಬಿಕೆ ಹೋಗಿದೆ'

ಚಿಕ್ಕಬಳ್ಳಾಪುರ: 'ಟಿಪ್ಪು ನಿಜ ಕನಸುಗಳು' ಕೃತಿ ನಿಷೇಧಿಸುವಂತೆ ಮತ್ತು ನಾಟಕ ಪ್ರದರ್ಶನಕ್ಕೆ ಅವಕಾಶ ನೀಡದಂತೆ ಬೆಂಗಳೂರು ನ್ಯಾಯಾಲಯದಲ್ಲಿ ಹೂಡಿದ್ದ ದಾವೆ ವಾಪಸ್ ಪಡೆದಿದ್ದೇವೆ ಎಂದು ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷ ಬಿ.ಎಸ್.ರಫೀವುಲ್ಲಾ ಹೇಳಿದ್ದಾರೆ. ದಾವೆ ವಾಪಸ್ ಪಡೆದ ಕುರಿತು ಗುರುವಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಯ ಆಡಳಿತದಲ್ಲಿ ನಮಗೆ ಯಾವ ವ್ಯವಸ್ಥೆ ಬಗ್ಗೆಯೂ ಭರವಸೆ ಉಳಿದಿಲ್ಲ. ಇಲ್ಲಿ ನಮ್ಮದೇನು ನಡೆಯುತ್ತದೆ? ಯಾರೂ ಸಹ ನಮ್ಮ ಧ್ವನಿ ಕೇಳುವುದಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಬಿಜೆಪಿ ಆಡಳಿತದಲ್ಲಿ ಅಲ್ಪಸಂಖ್ಯಾತರಿಗೆ ಯಾವುದೇ ರೀತಿಯ ರಕ್ಷಣೆ ಮತ್ತು ಭರವಸೆ ಇಲ್ಲ. ನ್ಯಾಯಾಲಯದಲ್ಲಿ ದಾವೆ ಹೂಡಿದ್ದರಿಂದ ನಮ್ಮ ಸಮಯ, ಹಣ ವ್ಯಯವಾಗುತ್ತದೆ ಅಷ್ಟೆ' ಎಂದರು.

'ಲಕ್ಷಾಂತರ ರೂಪಾಯಿ ಹಣವನ್ನು ವಕೀಲರಿಗೆ ಶುಲ್ಕ ನೀಡಿ ವಾದ ಮಾಡಬೇಕಾಗಿದೆ. ನಮ್ಮ ಬೆಂಬಲಕ್ಕೆ ಯಾವುದೇ ಸಂಘ– ಸಂಸ್ಥೆಗಳು ಇಲ್ಲ. ನಮಗೆ ಬಂಡವಾಳ ಹೂಡುವವರು ಯಾರೂ ಇಲ್ಲ. ಅವರಿಗೆ ಸಂಘ ಪರಿವಾರ, ಸರ್ಕಾರದಿಂದ ಹಣ ಬರುತ್ತದೆ. ನ್ಯಾಯಾಲಯಕ್ಕೆ ಬಂದಾಗ ಅವರ ಜತೆ ಎಂಟು ವಕೀಲರು ಇದ್ದರು' ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಕಾರ್ಯಯೋಜನೆ ರೂಪಿಸುವುದನ್ನು ನೀವು ಕಲಿಯಬೇಕು. ಇದು, ಆದ್ಯತೆಯ ಮೇರೆಗೆ ನಿಮಗೆ ನಾನು ನೀಡುವ ಮೊದಲ ಸಲಹೆ.

-ಮಾರ್ಕ್ ಜುಕರ್‌ಬರ್ಗ್

‘ಸುಪ್ರೀಂ’ ತೀರ್ಪು ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸುವ ನಿರ್ಧಾರ ಶ್ಲಾಘನೀಯ

ತೀರ್ಪುಗಳನ್ನು ಭಾರತೀಯ ಭಾಷೆಗಳಿಗೆ ಅನುವಾದಿಸಿ ಜನರಿಗೆ ಒದಗಿಸಬೇಕು ಎಂಬ ಸುಪ್ರೀಂ ಕೋರ್ಟ್‌ನ ನಿರ್ಧಾರವು ಸ್ವಾಗತಾರ್ಹ. ಏಕೆಂದರೆ, ಇದರಿಂದಾಗಿ ತೀರ್ಪುಗಳು ಬಹು ಸಂಖ್ಯೆಯ ಜನರಿಗೆ ದೊರಕುವಂತಾಗುತ್ತದೆ. ಜನರು ಅರ್ಥ ಮಾಡಿಕೊಳ್ಳಬಲ್ಲ ಭಾಷೆಯಲ್ಲಿಯೇ ತೀರ್ಪುಗಳು ಜನರಿಗೆ ದೊರಕುವಂತಾಗಬೇಕು ಎಂಬುದಕ್ಕೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಒತ್ತು ನೀಡಿದ್ದಾರೆ. ಈ ನಿರ್ಧಾರದ ಜಾರಿಯ ದಿಸೆಯಲ್ಲಿ ಕೆಲಸ ಮಾಡುವುದಕ್ಕಾಗಿ ನ್ಯಾಯಮೂರ್ತಿ ಅಭಯ್ ಓಕ ನೇತೃತ್ವದ ಸಮಿತಿಯನ್ನು ರಚಿಸಲಾಗಿದೆ. ಅನುಷ್ಠಾನದ ಮೊದಲ ಹೆಜ್ಜೆಯಾಗಿ ನಾಲ್ಕು ಭಾಷೆಗಳಿಗೆ ತೀರ್ಪುಗಳನ್ನು ಅನುವಾದ ಮಾಡಲಾಗುವುದು. ಆ ಭಾಷೆಗಳೆಂದರೆ, ಹಿಂದಿ, ತಮಿಳು, ಗುಜರಾತಿ ಮತ್ತು ಒಡಿಯಾ. ಮುಂದಿನ ದಿನಗಳಲ್ಲಿ, ಇತರ ಭಾಷೆಗಳಿಗೂ ತೀರ್ಪು ಅನುವಾದ ಆಗಬಹುದು ಎಂಬ ಭರವಸೆಯನ್ನು ಇರಿಸಿಕೊಳ್ಳಬಹುದು. ಮಾಹಿತಿ ಕೊರತೆ ಮತ್ತು ಭಾಷಿಕ ತೊಡಕನ್ನು ನಿವಾರಿಸಿಕೊಳ್ಳಲು ತಂತ್ರಜ್ಞಾನವು ನೆರವಾಗುತ್ತದೆ. ಹಾಗಾಗಿ, ಕೃತಕ ಬುದ್ಧಿಮತ್ತೆಯನ್ನು ಅನುವಾದಕ್ಕಾಗಿ ಬಳಸಿಕೊಳ್ಳಬಹುದು ಎಂದೂ ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ. ಆಯ್ದ ಕೆಲವು ತೀರ್ಪುಗಳನ್ನು ಅನುವಾದಿಸುವ ಕೆಲಸವನ್ನು ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿಯು ಈಗಾಗಲೇ ಆರಂಭಿಸಿದೆ. ಕನ್ನಡ ಸೇರಿ ಕೆಲವು ಭಾಷೆಗಳಿಗೆ ಅನುವಾದ ಮಾಡಲಾಗುತ್ತಿದೆ. ಆದರೆ, ಹೆಚ್ಚಿನ ತೀರ್ಪುಗಳು ಹಿಂದಿಗೆ ಮಾತ್ರ ಅನುವಾದ ಆಗುತ್ತಿವೆ. ‘ಇಂಗ್ಲಿಷ್‌ನಲ್ಲಿ ಬರೆಯಲಾದ ಕಾನೂನು ವಿಷಯಗಳು ದೇಶದ ಶೇ 99.9ರಷ್ಟು ಜನರಿಗೆ ಅರ್ಥವಾಗುವುದು ಕಷ್ಟ. ತಾವು ಮಾತನಾಡುವ ಮತ್ತು ಅರ್ಥ ಮಾಡಿಕೊಳ್ಳಬಲ್ಲ ಭಾಷೆಯಲ್ಲಿ ಜನರಿಗೆ ತೀರ್ಪುಗಳು ಸಿಗದೇ ಇದ್ದರೆ ನ್ಯಾಯದ ಲಭ್ಯತೆಯೇ ಅರ್ಥಹೀನ ಅನ್ನಿಸಿಬಿಡುತ್ತದೆ’ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ.



ತೀರ್ಪುಗಳ ಅನುವಾದವು ಮಹತ್ವದ ಉದ್ದೇಶವೊಂದನ್ನು ಸಾಧಿಸುತ್ತದೆ. ಇದು, ಕಾನೂನು ಶಿಕ್ಷಣದಲ್ಲಿ ಬಹಳ ಉಪಯುಕ್ತವೆನಿಸುತ್ತದೆ ಮತ್ತು ಕಾನೂನು ಸಾಕ್ಷರತೆಯನ್ನು ಉತ್ತಮಪಡಿಸುವುದಕ್ಕೂ ನೆರವಾಗುತ್ತದೆ

ದೇಶದ ಬಹುಪಾಲು ಜನರಿಗೆ ಇಂಗ್ಲಿಷ್ ಅರ್ಥವಾಗುವುದಿಲ್ಲ. ಮಾತ್ರವಲ್ಲ, ತೀರ್ಪುಗಳಲ್ಲಿ ಬಳಸುವ ಭಾಷೆಯಲ್ಲಿ ಕಾನೂನುಗಳಿಗೆ ಸಂಬಂಧಿಸಿದ ಹಲವು ಪಾರಿಭಾಷಿಕ ಪದಗಳು ಇರುತ್ತವೆ. ಇಂತಹ ಪದಗಳು ಜನರಿಗೆ ತಿಳಿಯುವುದಿಲ್ಲ. ವಕೀಲರಿಗೆ ಕೂಡ ಕೆಲವು ಸಂದರ್ಭಗಳಲ್ಲಿ ತೀರ್ಪುಗಳನ್ನು ಅರ್ಥ ಮಾಡಿಕೊಳ್ಳುವುದು ಕಠಿಣವಾಗುತ್ತದೆ. ಹಾಗಾಗಿಯೇ ತೀರ್ಪುಗಳ ಅನುವಾದವು ಮಹತ್ವದ ಉದ್ದೇಶವೊಂದನ್ನು ಸಾಧಿಸುತ್ತದೆ. ಇದು ಕಾನೂನು ಶಿಕ್ಷಣದಲ್ಲಿ ಬಹಳ ಉಪಯುಕ್ತವೆನಿಸುತ್ತದೆ ಮತ್ತು ಕಾನೂನು ಸಾಕ್ಷರತೆಯನ್ನು ಉತ್ತಮಪಡಿಸುವುದಕ್ಕೂ ನೆರವಾಗುತ್ತದೆ. ಪ್ರಾದೇಶಿಕ ಭಾಷೆಗಳಲ್ಲಿ ಕಾನೂನನ್ನು ಕುರಿತ ಬರಹಗಳು ಬಹಳವೇನೂ ಇಲ್ಲ. ಸುಪ್ರೀಂ ಕೋರ್ಟ್‌ನ ಕ್ರಮದಿಂದಾಗಿ ಪ್ರಾದೇಶಿಕ ಭಾಷೆಗಳು ಶ್ರೀಮಂತವಾಗುತ್ತವೆ. ಈ ಹಿಂದೆ ಬಂದಿರುವ ತೀರ್ಪುಗಳನ್ನೂ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಲಾಗುವುದೇ ಎಂಬುದು ತಿಳಿದುಬಂದಿಲ್ಲ. ಆದರೆ, ಈ ಹಿಂದೆ ಬಂದ ಮಹತ್ವದ ತೀರ್ಪುಗಳನ್ನೂ ಅನುವಾದ ಮಾಡಿದರೆ ಉಪಯುಕ್ತವಾಗುತ್ತದೆ. ಸುಪ್ರೀಂ ಕೋರ್ಟ್‌ನ ಈ ಕ್ರಮದಿಂದ ಉತ್ತೇಜನ ಪಡೆದುಕೊಂಡು ಹೈಕೋರ್ಟ್‌ಗಳು ಕೂಡ ತಮ್ಮ ತೀರ್ಪುಗಳನ್ನು ಅನುವಾದ ಮಾಡಲು ಮುಂದಾಗಬೇಕು. ಕೊನೇಪಕ್ಷ ಆಯಾ ಹೈಕೋರ್ಟ್‌ನ ವ್ಯಾಪ್ತಿಯ ಪ್ರಾದೇಶಿಕ ಭಾಷೆಗಾದರೂ ಭಾಷಾಂತರ ಮಾಡಬೇಕು.

ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಿಗೆ ಸಮರ್ಪಕವಾಗಿ ಮತ್ತು ನಿಖರವಾಗಿ ಅನುವಾದ ಮಾಡುವುದು ಸವಾಲಿನ ಕೆಲಸ. ಏಕೆಂದರೆ, ಪ್ರಾದೇಶಿಕ ಭಾಷೆಗಳಲ್ಲಿ ಕಾನೂನು ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳು ಇಲ್ಲದೇ ಇರಬಹುದು. ಆಯಾ ಭಾಷೆಗಳ ವಿದ್ವಾಂಸರ ನೆರವಿನಿಂದ ಅಂತಹ ಪದಗಳನ್ನು ಸೃಷ್ಟಿಸಬೇಕು. ಅನುವಾದಗಳು ಸರಿಯಾಗಿವೆಯೇ ಎಂಬುದನ್ನು ಪರಿಶೀಲಿಸಲು ನ್ಯಾಯಾಂಗ ಕ್ಷೇತ್ರದಲ್ಲಿ ಕೆಲಸ ಮಾಡಿ ನಿವೃತ್ತರಾದವರ ಸೇವೆ ಪಡೆದುಕೊಳ್ಳಲಾಗುವುದು ಎಂದೂ ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ. ಇದು ಕೂಡ ಉತ್ತಮವಾದ ಯೋಚನೆಯೇ ಆಗಿದೆ. ಕೋರ್ಟ್‌ನ ಕೆಲವು ಕಲಾಪಗಳ ನೇರ ಪ್ರಸಾರವು ನ್ಯಾಯಾಲಯವು ಜನರ ಹತ್ತಿರಕ್ಕೆ ತಲುಪಲು ನೆರವಾಗಿದೆ. ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಿಗೆ ಅನುವಾದ ಮಾಡಿದರೆ ಮತ್ತೊಂದು ಹೆಜ್ಜೆ ಮುಂದಕ್ಕೆ ಇಟ್ಟಂತೆ ಆಗುತ್ತದೆ. ಸಂಸ್ಕೃತವನ್ನು ದೇಶದ ಅಧಿಕೃತ ಭಾಷೆಯಾಗಿ ಘೋಷಿಸಬೇಕು ಮತ್ತು ನ್ಯಾಯಾಲಯಗಳ ಕಲಾಪಗಳು ಆ ಭಾಷೆಯಲ್ಲಿಯೇ ನಡೆಯಬೇಕು ಎಂದು ನಿವೃತ್ತ ಮುಖ್ಯ ನ್ಯಾಯಮೂರ್ತಿ ಶರದ್ ಬೊಬ್ಡೆ ಇತ್ತೀಚೆಗೆ ಹೇಳಿದ್ದರು. ಆದರೆ, ಸುಪ್ರೀಂ ಕೋರ್ಟ್‌ನ ಈಗಿನ ನಿಲುವು ಇದಕ್ಕೆ ವ್ಯತಿರಿಕ್ತವಾಗಿ ಇದೆ.

ನೈತಿಕ ಮೌಲ್ಯಗಳ ಶಿಕ್ಷಣ ರೂಪಿಸಬೇಕಾದ ಆಲೋಚನಾ ಕ್ರಮ ಎಲ್ಲಕ್ಕಿಂತ ಮುಖ್ಯವಾದುದು

ಮೌಲಿಕ ಶಿಕ್ಷಣ: ಆಲೋಚನಾ ಕ್ರಮ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ


ನೈತಿಕ ಶಿಕ್ಷಣದ ಕುರಿತ ಚರ್ಚೆಗಳು ಸದಾಕಾಲ ಇರುತ್ತವೆ. ಸಮಾಜದಲ್ಲಿ ಅನೈತಿಕತೆ ಕಾಣಿಸಿದಾಗೆಲ್ಲ ಶಿಕ್ಷಣದ ಮೂಲಕ ಅನೈತಿಕತೆಯನ್ನು ತಡೆಯುವ ಒಂದು ಚಿಂತನೆ ಸಮಾಜದಲ್ಲಿ ಜಾಗೃತವಾಗುತ್ತದೆ. ಇದೊಂದು ವಿರೋಧಾಭಾಸದ ಶೈಕ್ಷಣಿಕ ಪರಿಕಲ್ಪನೆ. ನೈತಿಕತೆಯು ವ್ಯಕ್ತಿಯಲ್ಲಿ ಅಂತಃಸತ್ವವಾಗಿ ರೂಢಿಯಾಗಿ ನಡವಳಿಕೆಯಲ್ಲಿ ಕಂಡುಬರಬೇಕಾದ ಕಲಿಕಾಂಶವೇ ವಿನಾ ಬೌದ್ಧಿಕ ಕಲಿಕೆಯಾಗಿ ಉಳಿದು ಪರೀಕ್ಷೆಯಲ್ಲಿ ಉತ್ತರ ಬರೆದು ಅಂಕಗಳನ್ನು ಪಡೆದು ಕೈಬಿಡುವಂಥದ್ದಲ್ಲ.

ರೂಢಿಯಾಗಬೇಕಾದ ಕಲಿಕೆ ಬರೀ ಬೋಧನೆಯಿಂದ ಬರುವುದಿಲ್ಲ. ಅತ್ಯುತ್ತಮವಾದದ್ದು ಎಲ್ಲರಿಗೂ ಗೊತ್ತಿರುತ್ತದೆ. ಎಲ್ಲರೂ ಉಪದೇಶಿಸುತ್ತಾರೆ. ಆದರೆ ಆಚರಿಸಲು ಆಗುವುದಿಲ್ಲ. ಉದಾಹರಣೆಗೆ, ಒಂದು ತರಗತಿಯಲ್ಲಿ ಸತ್ಯ ಹರಿಶ್ಚಂದ್ರನ ಕಥೆಯನ್ನು ಬೋಧಿಸಿದ ನಂತರ, ವಿದ್ಯಾರ್ಥಿ ಮಾಡಬೇಕಾದ ಕೆಲಸವನ್ನು ಮಾಡದೇ ಇದ್ದಾಗ ಆತನೇನಾದರೂ ‘ಸೋಮಾರಿ ತನದಿಂದ ಮಾಡಲಿಲ್ಲ’ ಎಂದು ಸತ್ಯವನ್ನೇ ಹೇಳಿದರೆ ಏನಾದೀತು? ವಿದ್ಯಾರ್ಥಿಯು ಶಿಕ್ಷೆಯ ಅನುಭವವನ್ನೇ ಪಡೆಯಬೇಕಾಗುತ್ತದೆ. ಆಗ ಉಂಟಾಗುವ ನಿಜವಾದ ಕಲಿಕೆ ಏನು? ಸತ್ಯ ಹೇಳಿದರೆ ತೊಂದರೆಯಾಗುತ್ತದೆ ಎಂದು ವಿದ್ಯಾರ್ಥಿಗೆ ಗೊತ್ತಾಗುತ್ತದೆ. ಸತ್ಯವನ್ನು ಹೇಳಬೇಕೆಂದು ಬೌದ್ಧಿಕವಾಗಿ ಗೊತ್ತಿರುತ್ತದೆ. ಆದರೆ ರೂಢಿಯ ನಡವಳಿಕೆಯಲ್ಲಿ ಸುಳ್ಳೇ ಕಾಣಿಸಿಕೊಳ್ಳುತ್ತದೆ.

ಭ್ರಷ್ಟಾಚಾರ ಮಾಡಬಾರದು ಎಂದು ಗೊತ್ತಿಲ್ಲದೇ ಇರುವ ಯಾವ ಭ್ರಷ್ಟನೂ ಜಗತ್ತಿನಲ್ಲಿ ಇರಲು ಸಾಧ್ಯವಿಲ್ಲ. ಆಗ ಭಗವದ್ಗೀತೆ, ಕುರಾನ್, ಬೈಬಲ್, ತ್ರಿಪಿಟಕಗಳನ್ನೆಲ್ಲ ಇಟ್ಟುಕೊಂಡು ಬೋಧಿಸಿದಾಗ ಅವುಗಳ ವಿಷಯಗಳು ಬೌದ್ಧಿಕ ತಿಳಿವಳಿಕೆಯಾಗಿ ವಿದ್ಯಾರ್ಥಿಗೆ ಸಿಗಬಹುದೇ ವಿನಾ ವರ್ತನೆಯನ್ನು ರೂಪಿಸುವುದಿಲ್ಲ. ವರ್ತನೆಗಳನ್ನು ಜೀವನದ ಕಠೋರ ವಾಸ್ತವಗಳು ರೂಪಿಸುತ್ತವೆ. ತನ್ನ ಪರಿಸರದ ನಡವಳಿಕೆಗಳಲ್ಲಿ ನೈತಿಕ ಮೌಲ್ಯಗಳು ಇದ್ದಾಗ ವಿದ್ಯಾರ್ಥಿಗಳು ಅವುಗಳನ್ನು ವರ್ತನೆಯಲ್ಲಿ ರೂಢಿಸಿಕೊಳ್ಳುತ್ತಾರೆ. ಆದರೆ ಆಗ ಅಲ್ಲಿ ಇನ್ನೊಂದು ಪ್ರಶ್ನೆ ಉದ್ಭವಿಸುತ್ತದೆ. ಇಡೀ ಸಮಾಜದಲ್ಲೇ ನೈತಿಕ ಮೌಲ್ಯಗಳು ಆಚರಣೆಯಲ್ಲಿ ಇದ್ದರೆ ಅವನ್ನು ಶಿಕ್ಷಣದಲ್ಲಿ ಕಲಿಸಬೇಕಾದ ಅಗತ್ಯವೇ ಇರುವುದಿಲ್ಲ. ಅಂದರೆ, ಸಮಾಜದಲ್ಲಿ ನೈತಿಕತೆ ಇಲ್ಲದಿದ್ದರೆ ನೈತಿಕತೆಯನ್ನು ಕಲಿಸಿ ಉಪಯೋಗವಿಲ್ಲ. ಸಮಾಜದಲ್ಲಿ ನೈತಿಕತೆ ಇದ್ದರೆ ಶಿಕ್ಷಣದಲ್ಲಿ ಅದನ್ನು ಕಲಿಸಬೇಕಾದ ಅಗತ್ಯವಿಲ್ಲ. ಇದು ನೈತಿಕ ಶಿಕ್ಷಣದ ಬಿಕ್ಕಟ್ಟು. ಯಾವ ಕಾಲದ ಸಮಾಜವೂ ಪರಿಪೂರ್ಣ ನೈತಿಕ ಮೌಲ್ಯಗಳನ್ನು ಹೊಂದಿರಲಿಲ್ಲ. ಸಮಾಜವನ್ನು ಅರ್ಥೈಸುವಾಗ ಏಕಕಾಲಕ್ಕೆ ಎರಡು ಮಾನದಂಡಗಳು ಬಳಕೆಯಾಗುತ್ತವೆ. ವರ್ತಮಾನದ ಎಲ್ಲ ಅನುಭವಗಳೂ ನಮಗಾಗುವುದರಿಂದ ಅದರ ನಕಾರಾತ್ಮಕ ಅನುಭವಗಳಿಗೆ ಹೆಚ್ಚಿನ ಮಹತ್ವ ಸಿಗುತ್ತದೆ. ಇತಿಹಾಸದ ಸಮಾಜವನ್ನು ಪರಿಗಣಿಸುವಾಗ ಅದರ ಅನುಭವದಲ್ಲಿ ನಾವು ಪಾಲುದಾರರಲ್ಲ ಮತ್ತು ನಕಾರಾತ್ಮಕ ಸಂಗತಿಗಳು ಹುದುಗಿಹೋಗಿರುತ್ತವೆ. ಆದ್ದರಿಂದ ಒಳ್ಳೆಯ ವಿಷಯಗಳನ್ನು ಜಾಸ್ತಿ ಪರಿಗಣಿಸುತ್ತೇವೆ. ಆದ್ದರಿಂದ ಹಿಂದೆಯೆಲ್ಲ ಚೆನ್ನಾಗಿತ್ತು ಎನ್ನುವ ಒಂದು ಕಾಲ್ಪನಿಕ ನೀತಿವಂತ ವ್ಯವಸ್ಥೆ ಪರಿಗಣನೆಗೆ ಬರುತ್ತದೆ. ಹಾಗಿರುವಾಗ ನೈತಿಕ ಶಿಕ್ಷಣ ಕೊಡಬೇಕೆ ಎನ್ನುವುದೇ ಪ್ರಶ್ನಾರ್ಹ. ಆದರೆ, ಬೇರೆ ಯಾವ ಕಾರಣಗಳಲ್ಲದೆ ಹೋದರೂ ನೈತಿಕ ಶಿಕ್ಷಣವೊಂದು ಇದೆ ಎಂಬ ಭಾವನಾತ್ಮಕ ಭದ್ರತೆ ಮತ್ತು ವ್ಯವಸ್ಥೆಗೆ ನೈತಿಕ ಮೌಲ್ಯಗಳ ಬಗ್ಗೆ ಕಾಳಜಿ ಇದೆ ಎನ್ನುವುದನ್ನು ಸೂಚಿಸಲು ಇಂಥ ಶಿಕ್ಷಣ ಬೇಕಾಗುತ್ತದೆ.

ಸಾಮಾನ್ಯವಾಗಿ ನೈತಿಕ ಮೌಲ್ಯಗಳು ಎಂದ ತಕ್ಷಣ ಅವು ತಾನೇ ತಾನಾಗಿ ಧಾರ್ಮಿಕ ರಚನೆಗಳೊಂದಿಗೆ ಗುರುತಿಸಿಕೊಳ್ಳತೊಡಗುತ್ತವೆ. ಮತಧರ್ಮಗಳಿಗೂ ನೈತಿಕತೆಗೂ ಸಂಬಂಧ ಇಲ್ಲವೇ ಎಂದು ಕೇಳಿದರೆ ಸಂಬಂಧ ಇದೆ. ಮತಧರ್ಮಗಳು ಬಹಳಷ್ಟು ಹಿಂದಿನವು. ಇಂದು ನೈತಿಕತೆಗೆ ಸಂಬಂಧಿಸಿದ ನಿಯಮಗಳಾಗಿ ಕಾಣಿಸುವ ಸಂಗತಿಗಳೆಲ್ಲವೂ ಮತಧರ್ಮಗಳ ಪ್ರಾರಂಭದ ಕಾಲಕ್ಕೆ ಕಾನೂನುಗಳ ರೂಪದಲ್ಲಿ ಕೆಲಸ ಮಾಡಿದವುಗಳೇ ಆಗಿವೆ. ಕ್ರಮೇಣ ಪ್ರಭುತ್ವಗಳು ಬದಲಾದಂತೆ ಅವು ಶಾಸನದ ರೂಪವನ್ನು ಕಳೆದುಕೊಂಡು ನೈತಿಕ ಮೌಲ್ಯಗಳ ರೂಪಕ್ಕೆ ಬಂದಿವೆ. ನೈತಿಕ ಮೌಲ್ಯಗಳಿಗೆ ಶಾಸನಗಳಿಗಿರುವ ಅಧಿಕಾರಾತ್ಮಕ ಶಕ್ತಿ ಇರುವುದಿಲ್ಲ. ಆದರೆ ಮನುಷ್ಯನ ಪ್ರಜ್ಞೆಯ ಭಾಗವಾಗಿ ಅವು ಬಹು ಬೇಗ ಬಂದುಬಿಡುತ್ತವೆ. ಆದ್ದರಿಂದ ನೈತಿಕ ಮೌಲ್ಯಗಳಿಗೆ ಆಲೋಚನಾ ಕ್ರಮಗಳನ್ನು ರೂಪಿಸುವ ಶಕ್ತಿ ಇರುತ್ತದೆ. ಅವಶ್ಯವಾಗಿ ಆ ಆಲೋಚನಾ ಕ್ರಮಗಳಿಗೆ ಪರಂಪರೆಯ ನೈತಿಕ ಮೌಲ್ಯಗಳು ಎಷ್ಟು ಮಹತ್ವದವುಗಳೋ ಆಧುನಿಕ ಸಾಂವಿಧಾನಿಕ ಮೌಲ್ಯಗಳು ಮತ್ತು ಅಂತರರಾಷ್ಟ್ರೀಯ ತತ್ವಗಳೂ ಅಷ್ಟೇ ಮಹತ್ವದ್ದಾಗಿವೆ.

ನೈತಿಕ ಮೌಲ್ಯಗಳು ಯಾವಾಗಲೂ ಸಾಮಾಜಿಕ ಸನ್ನಿವೇಶವನ್ನು ಅವಲಂಬಿಸಿರುತ್ತವೆ. ಇಂದಿನದ್ದು ಜಾಗತಿಕ ಸಾಮಾಜಿಕ ಸನ್ನಿವೇಶವಾಗಿದೆ. ಆಗ ಕೊಡುವ ನೈತಿಕ ಶಿಕ್ಷಣವೂ ಜಾಗತಿಕ ಸನ್ನಿವೇಶವನ್ನು ಅರ್ಥ ಮಾಡಿಕೊಂಡದ್ದಾಗಿರಬೇಕಾಗುತ್ತದೆ. ಅಂಥ ನೈತಿಕ ಶಿಕ್ಷಣದ ಪಠ್ಯದಲ್ಲಿ ಒಂದು ತಿಳಿವಳಿಕೆಯಾಗಿ ವಿವಿಧ ಮತಧರ್ಮಗಳ ಮೌಲ್ಯಗಳನ್ನು ಸೇರಿಸಿಕೊಳ್ಳಬೇಕು. ಆದರೆ ಅವೇ ಮೌಲ್ಯ ಎಂದು ಆಗಬಾರದು. ವರ್ತಮಾನದ ಜಾಗತಿಕ ಮೌಲ್ಯಗಳೊಂದಿಗೆ ಅವು ಬೆಸೆಯುವಂತಿರಬೇಕು. ಮತಧರ್ಮಗಳು ರೂಪಿಸಿದ ಸಮುದಾಯಗಳು ಇವೆ. ಆದರೆ ಅವು ರೂಪಿಸಿದ ನೈತಿಕ ಮೌಲ್ಯಗಳ ವ್ಯಾಪ್ತಿಯನ್ನು ಮೀರಿ ತಂತ್ರಜ್ಞಾನವು ಎಲ್ಲರನ್ನೂ ವಿಕಾಸಗೊಳಿಸಿದೆ. ಆದ್ದರಿಂದ ಆಧುನಿಕ ನೈತಿಕ ಮೌಲ್ಯಗಳ ಸ್ವರೂಪ ವೈಜ್ಞಾನಿಕವಾಗಿ ಸಮಾಜಶಾಸ್ತ್ರವನ್ನು ಅರ್ಥ ಮಾಡಿಕೊಂಡಿರಬೇಕಾಗುತ್ತದೆ.



ಈ ತಳಹದಿಯ ಪಠ್ಯಕ್ರಮವನ್ನು ಯಾವ ವಿಧಾನಗಳಲ್ಲಿ ವಿದ್ಯಾರ್ಥಿಗಳಿಗೆ ತಲುಪಿಸಬೇಕು ಎನ್ನುವುದು ಬಹಳ ಮುಖ್ಯ. ಮೊದಲು ಮೌಲ್ಯಗಳ ಸಾಪೇಕ್ಷತಾ ರೂಪದ ಅರಿವು ವಿದ್ಯಾರ್ಥಿಗಳಿಗೆ ಉಂಟಾಗಬೇಕು. ಅಂದರೆ ಒಂದು ಸನ್ನಿವೇಶದಲ್ಲಿ ನೈತಿಕ ಮೌಲ್ಯವಾಗಿದ್ದದ್ದೇ ಎಲ್ಲ ಸನ್ನಿವೇಶಕ್ಕೂ ಆಗುವುದಿಲ್ಲ ಎನ್ನುವುದು. ಉದಾಹರಣೆಗೆ, ಅಹಿಂಸೆಯು ಜಾಗತಿಕ ಸಮಾಜದ ಮೌಲ್ಯ. ಆದರೆ ಯುದ್ಧ ರಂಗದಲ್ಲಿ ಅದು ಮೌಲ್ಯವಾಗುವುದಿಲ್ಲ. ಮೌಲ್ಯಗಳಲ್ಲಿ ಮೇಲು ಮಟ್ಟದ ಮೌಲ್ಯ ಮತ್ತು ಕೆಳ ಮಟ್ಟದ ಮೌಲ್ಯಗಳೂ ಇವೆ. ಏಕಕಾಲಕ್ಕೆ ಎರಡೆರಡು ಮೌಲ್ಯಗಳು ಪರಸ್ಪರ ಸಂಘರ್ಷಕ್ಕಿಳಿದಾಗ ಯಾವುದು ಪ್ರಧಾನ ಆದ್ಯತೆಯಾಗುತ್ತದೆಯೋ ಆ ಸನ್ನಿವೇಶಕ್ಕೆ ಅದು ಮೇಲ್ಮಟ್ಟದ ಮೌಲ್ಯ. ಇನ್ನೊಂದು ಮೌಲ್ಯವು ಕೆಳಮಟ್ಟದ ಮೌಲ್ಯ. ಮತ್ತೊಂದು ಸನ್ನಿವೇಶದಲ್ಲಿ ಅವು ಅದಲುಬದಲು ಆಗಲೂಬಹುದು. ನೈತಿಕ ಮೌಲ್ಯಗಳ ಚಲನಶೀಲ ಸ್ವಭಾವವನ್ನು ಅರ್ಥ ಮಾಡಿಸಬೇಕು.

ಬಹಳಷ್ಟು ಮೌಲ್ಯಗಳು ಮನುಷ್ಯನ ಸಹಜ ಮೃಗೀಯ ವರ್ತನೆಗಳನ್ನು ನಿಯಂತ್ರಿಸುವ ರೂಪದಲ್ಲಿವೆ. ಉದಾಹರಣೆಗೆ, ಲೈಂಗಿಕತೆ ಎಲ್ಲ ಜೀವಿಗಳಲ್ಲಿರುವ ಸಹಜ ವ್ಯವಸ್ಥೆ. ಅದನ್ನು ದೇವರ ಭಯದಿಂದ, ಗದರಿಸುವುದರಿಂದ, ಮೊಬೈಲ್ ಫೋನ್ ಕೊಡದೆ ಇರುವುದರಿಂದ ನಿಯಂತ್ರಿಸಲು ಸಾಧ್ಯವಿಲ್ಲ. ಅಜ್ಜನ ಕಾಲದಲ್ಲಿ ಮರದ ಮರೆಯಲ್ಲಿ ನೀರಿಗೆ ಹೋಗುವ ಯುವತಿಯರನ್ನು ನೋಡುವ ರೂಪದಲ್ಲಿದ್ದ ಆ ಪ್ರವೃತ್ತಿಯು ಮಕ್ಕಳ ಕಾಲಕ್ಕೆ ಮೊಬೈಲ್ ಫೋನ್ ನೋಡುವ ವಿಧಾನಕ್ಕೆ ಬದಲಾಗಿರುತ್ತದೆ. ಆದರೆ ಮೂಲ ಪ್ರವೃತ್ತಿ ಸಾರ್ವಕಾಲಿಕವೆ ಆಗಿರುತ್ತದೆ. ಹಾಗೆಂದು ಒಂದು ವಯಸ್ಸಿನಲ್ಲಿ ಕಾಣಿಸುವ ಈ ಪ್ರವೃತ್ತಿ ಮುಂದೆ ಬದಲಾಗುತ್ತದೆ ಎನ್ನುವುದೂ ಸಾರ್ವಕಾಲಿಕ ಸತ್ಯವೇ ಆಗಿರುತ್ತದೆ. ಆಗ, ಆಸೆಗಳನ್ನು ಮುಂದಕ್ಕೆ ಹಾಕುವ ಮೂಲಕ ಮನುಷ್ಯರ ಅಂತಃಶಕ್ತಿ ಹೇಗೆ ಜಾಸ್ತಿಯಾಗುತ್ತದೆ ಎಂದು ಅರ್ಥ ಮಾಡಿಸಬೇಕು.

ಎಲ್ಲಕ್ಕಿಂತ ಮುಖ್ಯವಾದದ್ದು ನೈತಿಕ ಮೌಲ್ಯಗಳ ಶಿಕ್ಷಣವು ರೂಪಿಸಬೇಕಾದ ಆಲೋಚನಾ ಕ್ರಮವಾಗಿದೆ. ಸತ್ಯ ಹರಿಶ್ಚಂದ್ರನ ಕಥೆಯನ್ನು, ಸತ್ಯಕ್ಕೆ ನಿಷ್ಠನಾದ್ದರಿಂದ ಅವನು ಲೋಕೋತ್ತರ ನಾಯಕನಾದ ಎಂಬ ಅರ್ಥದಲ್ಲೂ ತೆಗೆದುಕೊಳ್ಳಲು ಬರುತ್ತದೆ. ಸತ್ಯಕ್ಕೆ ನಿಷ್ಠನಾದ್ದರಿಂದ ಅಷ್ಟೆಲ್ಲ ಕಷ್ಟಗಳನ್ನು ಅನುಭವಿಸಬೇಕಾಯಿತು ಎಂಬ ಅರ್ಥದಲ್ಲೂ ತೆಗೆದುಕೊಳ್ಳಲು ಬರುತ್ತದೆ. ವಿದ್ಯಾರ್ಥಿ ಯಾವ ಅರ್ಥದಲ್ಲಿ ತೆಗೆದುಕೊಳ್ಳಬಹುದು ಎನ್ನುವುದು ಅವರಲ್ಲಿ ರೂಪುಗೊಂಡ ಆಲೋಚನಾ ಕ್ರಮದಿಂದ ನಿರ್ಧಾರವಾಗುತ್ತದೆ. ಈ ರೀತಿಯ ಆಲೋಚನಾ ಕ್ರಮ ರೂಪುಗೊಳ್ಳಬೇಕಾದರೆ ಮೌಲ್ಯ ಶಿಕ್ಷಣದ ಅರಿವು ಎಲ್ಲ ಶಿಕ್ಷಕರಿಗೂ ಇದ್ದು ಅವರು ತಮ್ಮ ತಮ್ಮ ವಿಷಯಗಳನ್ನು ಬೋಧಿಸುವಾಗ ಸೂಕ್ತವಾದ ಆಲೋಚನಾ ಕ್ರಮಕ್ಕೆ ಹೊಂದಿಸಿ ಬೋಧಿಸಬೇಕಾಗುತ್ತದೆ. ಕೇವಲ ಯಾರೋ ಒಬ್ಬರು ಹೋಗಿ ಕಥೆ ಹೇಳುವುದರಿಂದ ಉಪಯೋಗವಾಗುವುದಿಲ್ಲ. ಸದ್ಯ ನಮ್ಮಲ್ಲಿ ನಡೆಯುತ್ತಿರುವ ನೈತಿಕ ಶಿಕ್ಷಣದ ಬಗೆಗಿನ ಚರ್ಚೆಗಳು ಇಂತಹ ಅಗತ್ಯಗಳನ್ನು ಗಮನಿಸಬೇಕಾಗಿದೆ.

ಚುರುಮುರಿ



ಬಜೆಟ್ ನೋಡಿದ್ರಾ?

• ಬಿ.ಎನ್.ಮಲ್ಲೇಶ್

‘ರೀ... ಬಜೆಟ್ ನೋಡಿದ್ರಾ?’ ಮಡದಿ ರಾಗವಾಗಿ ಕೇಳಿದಾಗ, ಇವಳಿಗ್ಯಾವಾಗ ಬಜೆಟ್ ಮೇಲೆ ಆಸಕ್ತಿ ಬಂತು ಅಂತ ಆಶ್ಚರ್ಯವಾಯಿತು.

‘ಯಾಕೆ? ನೋಡಿದ್ನಲ್ಲ, ಅದೇ ಭದ್ರಾ ಮೇಲ್ದಂಡೆಗೆ ದುಡ್ಡು ಕೊಟ್ಟರೋದು ತಾನೆ?’ ಕೇಳಿದೆ.

‘ಅಯ್ಯೋ ಅದಲ್ಲರೀ...’

‘ಮತ್ತೇನು? ಸಿಗರೇಟು, ಡ್ರಿಂಕ್ಸ್ ರೇಟು ಜಾಸ್ತಿ ಮಾಡಿರೋದಾ? ನನ್ನ ಜೇಬಿಗೆ ಕತ್ತರಿ ಬಿತ್ತು ಅಂತ ಖುಷಿನಾ?’

‘ಥೋ... ಅದಲ್ಲರಿ, ರೇಟು ಎಷ್ಟಾದ್ರೂ ನೀವೇನು ಅದನ್ನ ಬಿಡ್ತೀರಾ?’

‘ಏನೋ ವೀಕೆಂಡ್ ಅಂತ ಹೋಗ್ತೀವಪ್ಪ, ಈ ಸರ್ಕಾರದೋರಿಗೆ ನಮ್ಮ ಮೇಲೇ ಕಣ್ಣು, ಸರಿ, ಬೇರೆ ಏನು? ಮೊಬೈಲ್ ರೇಟು ಕಮ್ಮಿ ಆಯ್ತು ಅಂತ ಹೊಸ ಮೊಬೈಲ್‌ಗೆ ಪ್ಲೇಟ್ ಹಾಕ್ತಿದೀಯಾ?’

‘ಇರೋ ಮೊಬೈಲ್‌ನೇ ಸರಿಯಾಗಿ ನೋಡಲ್ಲ ನಾನು, ನಂಗ್ಯಾಕೆ ಹೊಸ ಮೊಬೈಲು?’

‘ಇನ್ನೇನು? ಚಿನ್ನ ದುಬಾರಿ, ವಜ್ರದ ರೇಟು ಇಳಿಕೆ ಅಂತಿದೆ. ಆದ್ರೆ ನನ್ನ ಜೇಬು ಅಷ್ಟು ದೊಡ್ಡದಿಲ್ಲ’.

‘ನಂಗೆ ಚಿನ್ನಾನೂ ಬೇಡ, ವಜ್ರಾನೂ ಬೇಡ, ನೀವು ಬಜೆಟ್ ಸರಿಯಾಗಿ ನೋಡಿದ್ರಾ?’

‘ನೋಡಿದ್ನಲ್ಲೇ... ಏನಿದೆ ಅದ್ರಲ್ಲಿ ಅಂಥದ್ದು?’

‘ನಮ್ಮ ನಿರ್ಮಲಕ್ಕನ್ನ ನೋಡಿದ್ರಾ?’

‘ನೋಡಿದ್ನಲ್ಲ, ಅವರೇ ಬಜೆಟ್ ಮಂಡಿಸಿದ್ದು. ಇದು ಐದನೇ ಬಾರಿಯಂತೆ, ಗ್ರೇಟ್ ಅಲ್ವ?’

‘ಅದಿರ್ಲಿ, ನಿರ್ಮಲಕ್ಕ ಉಟ್ಟಿದ್ದ ಸೀರೆ ನೋಡಿದ್ರಾ?’

‘ಓ...ಇದಾ ವಿಷ್ಯಾ? ನಿನ್ನ ಕಣ್ಣು ಬಜೆಟ್‌ನಲ್ಲ, ಅವರು ಉಟ್ಟಿದ್ದ ಸೀರೆ ನೋಡ್ತಿತ್ತು ಅನ್ನು’.

‘ಹ್ಞೂರೀ... ಎಷ್ಟ್ ಚೆನ್ನಾಗಿದೆ ಆ ಸೀರೆ, ಧಾರವಾಡದ್ದಂತೆ, ಕೈಮಗ್ಗದಲ್ಲಿ ನೇಯ್ದಿದ್ದಂತೆ, ಕಸೂತಿ ಎಷ್ಟ್ ಚೆನ್ನಾಗಿ ಹಾಕಿದಾರೆ ಅಂತೀರಿ, ಆ ಕಲರ್ ನಂಗೆ ತುಂಬಾ ಇಷ್ಟ ಆಯ್ತು, ನಂಗೂ ಒಂದು ಕೊಡಿಸ್ತೀರಾ?’

ತಲೆ ಕೆರೆದುಕೊಂಡೆ. ‘ಕೊಡ್ಸೋಣ ಬಿಡು, ನಿಂಗಿಲ್ಲಾಂತೀನಾ? ಆದ್ರೆ ಈ ತಿಂಗಳ ಬಜೆಟ್ ಖೋತಾ. ಮುಂದಿನ ತಿಂಗಳು ಓಕೆನಾ?’ ಮೆಲ್ಲಗೆ ಜಾರಿಕೊಂಡೆ.

ದಿನದ ಟ್ವೀಟ್

ಸಲ್ಲದ ಬೆಳವಣಿಗೆ



ಜನಸಂಖ್ಯೆ ಆಧಾರಿತ ಪ್ರಾತಿನಿಧ್ಯವನ್ನು ಪರಿಗಣಿಸುವ 2026ರ ಕ್ಷೇತ್ರ ಪುನರ್‌ವಿಂಗಡಣೆಯಿಂದ ಕೇಂದ್ರದಲ್ಲಿ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ಇನ್ನಷ್ಟು ಕಡಿಮೆಯಾಗಲಿದೆ. ದಕ್ಷಿಣದ ರಾಜ್ಯಗಳಿಗೆ ಸಂಪನ್ಮೂಲ ಹಂಚಿಕೆಯ ಮೇಲೂ ಇದು ಪರಿಣಾಮ ಬೀರುತ್ತದೆ. ಇದರ ಜೊತೆಗೆ ದಕ್ಷಿಣದ ರಾಜ್ಯಗಳ ಜನಸಂಖ್ಯಾ ಚಿತ್ರಣ ಸಹ ಇನ್ನಷ್ಟು ಬದಲಾಗುವ ನಿರೀಕ್ಷೆಗಳಿವೆ. ಇದು ಒಳ್ಳೆಯ ಬೆಳವಣಿಗೆಯಲ್ಲ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ

ಮನುಷ್ಯ ಸೃಷ್ಟಿಸುವ ಬಿಕ್ಕಟ್ಟು ಅಥವಾ ಹಗರಣವನ್ನು ಕೆಲವು ವರ್ಷಗಳಿಗೆ ಒಮ್ಮೆ ಎದುರಿಸಬೇಕಿರುವುದು ಭಾರತದ ಷೇರು ಮಾರುಕಟ್ಟೆಗಳ ಪಾಲಿಗೆ ಒಂದು ಶಾಪವಾಗಿ ಪರಿಣಮಿಸಿದೆ.



ಡಿ. ಮುತ್ತುಕೃಷ್ಣನ್, ಹೂಡಿಕೆದಾರ

25 ವರ್ಷಗಳ ಹಿಂದೆ

ಮಂಗಳವಾರ, 3-2-1998

- **ಕಾಂಗ್ರೆಸ್ ಪಕ್ಷಕ್ಕೆ ತಾರಾದೇವಿ ರಾಜೀನಾಮೆ**

ನವದೆಹಲಿ, ಫೆ. 2 (ಪಿಟಿಐ)– ಕೇಂದ್ರದ ಮಾಜಿ ಸಚಿವೆ ಹಾಗೂ ಕರ್ನಾಟಕದ ಚಿಕ್ಕಮಗಳೂರು ಕ್ಷೇತ್ರಕ್ಕೆ ಪಕ್ಷದಿಂದ ಸ್ಪರ್ಧಿಸಲು ಟಿಕೆಟ್ ನಿರಾಕರಿಸಲಾಗಿರುವ ಡಿ.ಕೆ. ತಾರಾದೇವಿ ಅವರು ಇಂದು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ತಾರಾದೇವಿ ಅವರ ಪತಿ ಹಾಗೂ ದಿವಂಗತ ರಾಜೀವ್ ಗಾಂಧಿಯವರ ಸಹಚರ ಆಂಧ್ರ ಪ್ರದೇಶದ ಸಿದ್ಧಾರ್ಥ ರೆಡ್ಡಿ ಅವರೂ ಕಾಂಗ್ರೆಸ್ ಪಕ್ಷ ತೊರೆದಿದ್ದಾರೆ.

‘ಅದೊಂದು ವ್ಯಾಪಾರ ಕೇಂದ್ರ’ ಎಂದು ಕಾಂಗ್ರೆಸ್ ಪಕ್ಷವನ್ನು ಕಟುವಾಗಿ ಟೀಕಿಸಿರುವ ತಾರಾದೇವಿ ಅವರು ‘ಅದು ತನ್ನ ವರ್ತನೆಯಲ್ಲಿ ಭಾರತೀಯವೂ ಅಲ್ಲ ರಾಷ್ಟ್ರೀಯವೂ ಅಲ್ಲ’ ಎಂದು ಜರೆದಿದ್ದಾರೆ.

- **ಚುನಾವಣೆ: ಶಿಕ್ಷಕರ ಸೇವೆ ಬಳಕೆಗೆ ಅನುಮತಿ**

ನವದೆಹಲಿ, ಫೆ. 2 (ಪಿಟಿಐ)– ವಿಶ್ವವಿದ್ಯಾಲಯದ ಶಿಕ್ಷಕರ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರನ್ನು ಚುನಾವಣಾ ಕಾರ್ಯಕ್ಕೆ ನೇಮಿಸುವುದನ್ನು ಏಕಪಕ್ಷೀಯವಾಗಿ ನಿಷೇಧಿಸಿದ ಅಲಹಾಬಾದ್ ಹೈಕೋರ್ಟಿನ ಆಜ್ಞೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

‘ಇದರಿಂದಾಗಿ ಚುನಾವಣಾಧಿಕಾರಿಗಳು ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ಹಾಗೂ ಇತರರನ್ನು ಚುನಾವಣಾ ಕಾರ್ಯಕ್ಕೆ ನೇಮಿಸಬಹುದು’ ಎಂದು ಉಪಚುನಾವಣಾ ಆಯುಕ್ತ ಸುಭಾಷ್ ಪಾಣಿ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 3-2-1973

- **ಭಟ್ಕಳ ಬಳಿ ಬಾಂಬ್ ಸ್ಫೋಟ: 13 ಮಂದಿ ಸಾವು**

ಹೊನ್ನಾವರ, ಫೆ. 2– ಮುರುಡೇಶ್ವರದಿಂದ ಸುಮಾರು 15 ಮೈಲು ದೂರದಲ್ಲಿರುವ ನೇತ್ರಾಣಿ ನಡುಗಡ್ಡೆಯಲ್ಲಿ ಇಂದು ಬೆಳಿಗ್ಗೆ ಬಾಂಬ್ ಸ್ಫೋಟಗೊಂಡು ಇಬ್ಬರು ಮಕ್ಕಳು ಸೇರಿ 13 ಮಂದಿ ಸತ್ತು, ಮೂವರು ಗಾಯಗೊಂಡರು.

ಗಾಯಗೊಂಡ ಮೂವರನ್ನು ಭಟ್ಕಳದ ಕಾಟೇಜ್ ಆಸ್ಪತ್ರೆಗೆ ಸೇರಿಸಲಾಗಿದ್ದು, ಅವರ ಪೈಕಿ ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಲಾಗಿದೆ.

14 ಮಂದಿ ಮೀನುಗಾರರಿದ್ದ ತಂಡವೊಂದು ಇಂದು ಬೆಳಿಗ್ಗೆ ಎರಡು ನಾವೆಗಳಲ್ಲಿ ದುರ್ಗಾ ಪೂಜೆ ನಡೆಸಲು ನೇತ್ರಾಣಿ ನಡುಗಡ್ಡೆಗೆ ತೆರಳಿತ್ತು.

ನಡುಗಡ್ಡೆಯಲ್ಲಿರುವ ಗುಡ್ಡದ ಮೇಲೆ ಅವರು ದುರ್ಗಾಪೂಜೆ ನಡೆಸಿ ವಾಪಸು ಬರುತ್ತಿದ್ದಾಗ ರಸ್ತೆಯಲ್ಲಿ ಪಂಪ್‌ವೆಲ್ ಕಂಡುಬಂತು. ಆಗ ಅವರ ಪೈಕಿ ಒಬ್ಬನು ಅದನ್ನು ತೆರೆಯಲು ಯತ್ನಿಸಿದಾಗ ಸ್ಫೋಟವಾಗಿ 13 ಮಂದಿ ಸತ್ತರೆಂದು ತಿಳಿದುಬಂದಿದೆ.

- **ಗಂಗಾ– ಕಾವೇರಿ ಸಂಪರ್ಕ ಯೋಜನೆ ಕೈಗೊಳ್ಳುವ ಸಾಮರ್ಥ್ಯ ಭಾರತಕ್ಕಿದೆ**

ನವದೆಹಲಿ, ಫೆ. 2– ಗಂಗಾ– ಕಾವೇರಿ ನದಿಗಳನ್ನು ಒಂದುಗೂಡಿಸುವಂಥ ಬೃಹತ್ ಯೋಜನೆಯನ್ನು ಕೈಗೊಳ್ಳಲು ಬೇಕಾಗುವ ತಾಂತ್ರಿಕ ಮತ್ತು ಆರ್ಥಿಕ ಸಂಪನ್ಮೂಲಗಳು ಭಾರತಕ್ಕೆ ಇವೆ ಎಂದು ವಿಶ್ವಸಂಸ್ಥೆ ತಜ್ಞರ ತಂಡ ಅಭಿಪ್ರಾಯಪಟ್ಟಿದೆ.

ಈ ವಿಷಯವನ್ನು ಕೇಂದ್ರ ನೀರಾವರಿ ಖಾತೆ ಸಚಿವ ಡಾ. ಕೆ.ಎಲ್. ರಾವ್ ಅವರು ಇಂದು ಸುದ್ದಿಗಾರರಿಗೆ ತಿಳಿಸಿದರು.

ಸಂಗತ

ಭೂದಾನ ಚಳವಳಿ: ಆಗಲಿ ಮೌನಕ್ರಾಂತಿ

ಭೂರಹಿತ ಕೃಷಿಕರು, ಕೃಷಿ ಕಾರ್ಮಿಕರಿಗೆ ಭೂಮಿಯ ಹಕ್ಕು ಕೊಟ್ಟು ದುಡಿಮೆಗೆ ದಾರಿ ಮಾಡಿಕೊಡುವುದು ಬಹುದೊಡ್ಡ ಪರಿವರ್ತನೆಗೆ ಕಾರಣವಾಗಬಲ್ಲದು

• ಮಲ್ಲಿಕಾರ್ಜುನ ಹೆಗ್ಗಳಗಿ

ಭೂರಹಿತ ಕೃಷಿ ಕಾರ್ಮಿಕರಿಗೆ, ಕೃಷಿಕರಿಗೆ ಉಚಿತವಾಗಿ ಒಂದಿಷ್ಟು ಭೂಮಿಯ ಒಡೆತನದ ಹಕ್ಕು ಕೊಟ್ಟು ಕೃಷಿಗೆ ಪ್ರೇರೇಪಿಸುವುದರ ಹಿಂದಿನ ಮಹತ್ವ ಕುರಿತು ಚರ್ಚಿಸಲು ವಿಚಾರ ಸಂಕಿರಣವೊಂದು ಮುಧೋಳದ ಸರ್ವೋದಯ ವಾತ್ಸಲ್ಯಧಾಮದಲ್ಲಿ ಈಚೆಗೆ ನಡೆಯಿತು. ಭೂದಾನ ಚಳವಳಿಯಲ್ಲಿ ಭಾಗವಹಿಸಿದ್ದ ಸರ್ವೋದಯ ಹಿರಿಯ ಕಾರ್ಯಕರ್ತರು ತಮ್ಮ ಅನುಭವದ ಬುತ್ತಿ ಬಿಚ್ಚಿಟ್ಟರು. ದೇಶದಲ್ಲಿ ಭೂದಾನ ಚಳವಳಿಯನ್ನು ಮತ್ತೆ ಆರಂಭಿಸುವುದು ತೀರಾ ಅವಶ್ಯ ಎನ್ನುವ ಸಂದೇಶವನ್ನು ಅವರು ರವಾನಿಸಿದರು.

ದೇಶದಲ್ಲಿ ಸರ್ಕಾರದ ಉಚಿತ ಕೊಡುಗೆಗಳ ಭರಾಟೆ ಜೋರಾಗಿ ನಡೆಯುತ್ತಿರುವ ಈ ಸಂದರ್ಭದಲ್ಲಿ, ಈ ವಿಚಾರ ಸಂಕಿರಣವು ಹೆಚ್ಚು ಮಹತ್ವ ಪಡೆದಿತ್ತು. ಉಚಿತವಾಗಿ ಆಹಾರಧಾನ್ಯ, ವಿದ್ಯುತ್, ಪ್ರವಾಸ ಭಾಗ್ಯ, ಕೈ ಖರ್ಚಿಗೆ ಒಂದಿಷ್ಟು ಹಣ ಕೊಡುವ ಕುರಿತು ಸ್ಪರ್ಧೆಗೆ ನಿಂತವರಂತೆ ರಾಜಕಾರಣಿಗಳು ವರ್ತಿಸುತ್ತಿದ್ದಾರೆ. ಅವಶ್ಯವಿದ್ದವರಿಗೆ ಸಹಾಯವಿರಲಿ, ಅದರೊಂದಿಗೆ ದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಭೂರಹಿತ ಕೃಷಿಕರಿಗೆ, ಕೃಷಿ ಕಾರ್ಮಿಕರಿಗೆ ಒಂದಿಷ್ಟು ಭೂಮಿಯ ಹಕ್ಕು ಕೊಟ್ಟು ದುಡಿಮೆಗೆ ದಾರಿ ಮಾಡಿಕೊಡುವುದು ಬಹುದೊಡ್ಡ ಪರಿವರ್ತನೆಗೆ ಕಾರಣವಾಗಬಲ್ಲದು.

ಕೃಷಿ ಕಾರ್ಮಿಕರು ಭೂಮಾಲೀಕರ ಹೊಲಗಳಲ್ಲಿ ಕೂಲಿಗಳಾಗಿ ದುಡಿದು ಬದುಕು ಸಾಗಿಸುತ್ತಿದ್ದಾರೆ. ಅವರು ಸ್ವಂತಕ್ಕೆ ಭೂಮಿ ಹೊಂದಿದರೆ ಹೆಚ್ಚು ಕ್ರಿಯಾತ್ಮಕವಾಗಿ ಸ್ವಂತದ ಜಮೀನು ಹಾಗೂ ಭೂಮಾಲೀಕರ ಹೊಲಗಳಲ್ಲಿ ಕೆಲಸ ಮಾಡುವ ಉತ್ಸಾಹ ತೋರಿಸುತ್ತಾರೆ. ತಾನು ಬರೀ ಕೂಲಿಕಾರ ಎನ್ನುವ ಕೀಳರಿಮೆ ದೂರವಾಗುತ್ತದೆ.


ಆದರೆ, ಜಮೀನಿನ ಜತೆ ನಮ್ಮಲ್ಲಿ ಭಾವನಾತ್ಮಕ ನಂಟಿದೆ. ಅದು ಭೌತಿಕವಾಗಿ ದೊಡ್ಡ ಸಂಪತ್ತು ಎಂಬ ಭಾವನೆ ಅನೇಕರಲ್ಲಿ ಇದೆ. ಭೂಮಿಯ ಬೆಲೆ ತುಂಬಾ ಹೆಚ್ಚಾಗಿದೆ, ಹೀಗಾಗಿ ದಾನ ಕೊಡುವವರು ಸಿಕ್ಕಲಿಕ್ಕಿಲ್ಲ ಎನ್ನುವ ಅನುಮಾನ ಕೆಲವರಲ್ಲಿದೆ.

ಭೂಮಿ ಇಲ್ಲದ ಎಲ್ಲರಿಗೂ ಭೂಮಿ ಹಂಚಲು ಸರ್ಕಾರದ ಬಳಿ ಬಹಳಷ್ಟು ಭೂಮಿ ಇಲ್ಲ. ಸರ್ಕಾರವೇ ಭೂಮಿ ಖರೀದಿಗೆ ನಿಂತರೆ ಬೆಲೆ ಮತ್ತೆ ಹತ್ತು ಪಟ್ಟು ಹೆಚ್ಚುತ್ತದೆ. ಉಳ್ಳವರಿಂದ ಭೂಮಿ ದಾನ ಪಡೆದು ಹಂಚುವುದು ಸೂಕ್ತ ಮಾರ್ಗ ಎನಿಸುತ್ತದೆ. ಭೂಒಡೆಯರ ಮನಃ ಪರಿವರ್ತನೆಯಿಂದ ಭೂಮಿ ದಾನ ಪಡೆಯಬೇಕು. ಸರಿಯಾಗಿ ಮನವರಿಕೆ ಮಾಡಿದರೆ ದಾನ ನೀಡುವುದಕ್ಕೆ ಅನೇಕರು ಮುಂದೆ ಬರಬಹುದು.

ಬಡವರನ್ನು ಗುರುತಿಸಿ ನೆರವಾಗುವ ಪ್ರಾಮಾಣಿಕ ಕೆಲಸ ಶ್ರದ್ಧೆಯಿಂದ ನಡೆದರೆ ದಾನ ಕೊಡುವವರು ಸ್ವಸಂತೋಷದಿಂದ ಮುಂದೆ ಬರುತ್ತಾರೆ. ಆಸ್ತಿ ಸಂಪಾದಿಸುವ ಆಸೆ ಇರುವಂತೆ ಸಮಾಜಕ್ಕೆ ನೆರವಾಗಬೇಕು ಎಂಬ ತುಡಿತ ಕೂಡ ಮನುಷ್ಯರ ಸಹಜ ಗುಣವಾಗಿದೆ. ವಿನೋಬಾ ಅವರ ನೇತೃತ್ವದಲ್ಲಿ ನಡೆದ ಭೂದಾನ ಚಳವಳಿಯ ಮಾದರಿ ನಮ್ಮ ಮುಂದಿದೆ.

ಗಾಂಧೀಜಿ ಪ್ರಿಯ ಶಿಷ್ಯ ವಿನೋಬಾ ಭಾವೆ ಅವರು ಭೂರಹಿತ ಬಡವರಿಗೆ ಭೂಮಿ ಹಂಚುವ ಭೂದಾನ ಚಳವಳಿಯನ್ನು 1951ರಲ್ಲಿ ಆರಂಭಿಸಿದ್ದರು. ಹೆಚ್ಚು ಭೂಮಿ ಹೊಂದಿದ್ದ ಶ್ರೀಮಂತರು ಸ್ವಪ್ರೇರಣೆಯಿಂದ ಭೂಮಿ ನೀಡುವ ಈ ವಿಧಾಯಕ ಕಾರ್ಯವನ್ನು ಅವರು ಬಹುದೊಡ್ಡ ಚಳವಳಿಯಾಗಿ ರೂಪಿಸಿದರು. ಸಾವಿರಾರು ಕಾರ್ಯಕರ್ತರನ್ನು ಈ ಕಾರ್ಯದಲ್ಲಿ ತೊಡಗಿಸಿದರು. ಸುಮಾರು ಎಂಟು ವರ್ಷ ದೇಶದ ಉದ್ದಗಲಕ್ಕೂ ಪಾದಯಾತ್ರೆ ಮಾಡಿದರು. ಜವಾಹರಲಾಲ್ ನೆಹರೂ, ರಾಜೇಂದ್ರ ಪ್ರಸಾದ್, ಜಯಪ್ರಕಾಶ ನಾರಾಯಣ್ ಈ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದ್ದರು. ದೇಶದ ತುಂಬಾ 45 ಲಕ್ಷ ಎಕರೆ ಭೂಮಿ ದಾನವಾಗಿ ಬಂದಿತು. ವ್ಯವಸ್ಥಿತವಾಗಿ ಹಂಚುವುದಕ್ಕೆ ರಾಜ್ಯ ಸರ್ಕಾರಗಳು ಕಾನೂನು ಕೂಡ ರೂಪಿಸಿದವು.

ತೆಲಂಗಾಣದ ಪೋಚಂಪಲ್ಲಿ ಹಳ್ಳಿಯಲ್ಲಿ ಭೂಮಾಲೀಕ ವಿ. ರಾಮಚಂದ್ರಾರೆಡ್ಡಿ ಅವರು ನೂರು ಎಕರೆ ಭೂಮಿಯನ್ನು ಸ್ಥಳೀಯ ದಲಿತರಿಗೆ ಹಂಚಲು ವಿನೋಬಾ ಅವರಿಗೆ ದಾನಪತ್ರ ನೀಡಿದರು. ಈ ಬೆಳವಣಿಗೆ ಭೂದಾನ ಚಳವಳಿಯ ಪರಿಕಲ್ಪನೆಗೆ ನಾಂದಿ ಹಾಡಿತು.



ಚಳವಳಿಗಳಿಗೂ ಆಯುಷ್ಯದ ಮಿತಿ ಇರುವಂತೆ ಕಾಣುತ್ತದೆ. 1975ರ ಅವಧಿಯಲ್ಲಿ ಭೂದಾನ ಚಳವಳಿ ಸ್ಥಗಿತಗೊಂಡಿತು. ದಾನ ಬಂದ ಭೂಮಿಯ ಕೆಲವು ಭಾಗ ಹಂಚಿಕೆಯಾಗದೇ ಉಳಿದಿದೆ. ಇಲ್ಲಿಂದಲೇ ಈ ಕೆಲಸವನ್ನು ಮತ್ತೆ ಆರಂಭಿಸಬಹುದು.

ರಾಜ್ಯಸಭೆಯ ಸದಸ್ಯರಾಗಿದ್ದ ಬೀಳಗಿಯ ರಾಚಪ್ಪ ಮಲ್ಲಪ್ಪ ದೇಸಾಯಿ ತಮ್ಮ ಹೊಲದಲ್ಲಿ ದುಡಿಯುತ್ತಿದ್ದ ಕೂಲಿ ಕಾರ್ಮಿಕರಿಗೆ 1970ರ ದಶಕದಲ್ಲಿ ಸ್ವಪ್ರೇರಣೆಯಿಂದ 500 ಎಕರೆ ದಾನ ನೀಡಿದ್ದರು. ಈಗ ಈ ಕುಟುಂಬಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಬಹಳ ಪ್ರಗತಿ ಸಾಧಿಸಿವೆ. ಭೂಮಿ ಒಡೆತನ ಪ್ರತೀ ಕುಟುಂಬಕ್ಕೆ ಘನತೆಯನ್ನು ತಂದುಕೊಟ್ಟಿದೆ.

ಸಾಮಾಜಿಕ ಕಾರ್ಯಕರ್ತರು ಭೂದಾನ ಚಳವಳಿಯ ಮೌನಕ್ರಾಂತಿಗೆ ಮುಂದಾಗಬೇಕು. ಇದು ಜಾತಿ, ಮತ, ಪಂಥ, ಭಾಷೆ, ಗಡಿಗಳಿಂದ ಮುಕ್ತವಾದ ಸಾಮಾಜಿಕ ಬದಲಾವಣೆಯ ಚಳವಳಿ. ಸರ್ಕಾರ ಕಾನೂನಾತ್ಮಕವಾಗಿ ಎಲ್ಲ ಸಹಕಾರ ನೀಡಬೇಕು. ಅರ್ಹರನ್ನು ಗುರುತಿಸುವಾಗ ದಕ್ಷತೆ ವಹಿಸಬೇಕು. ವಿಧಾಯಕ ಚಳವಳಿಗಳು ಆರಂಭವಾದರೆ, ವಿಭಜಿಸುವ ಚಟುವಟಿಕೆಗಳು ಕ್ರಮೇಣ ಮೌನವಾಗುತ್ತವೆ.

ವಾಚಕರ ವಾಣಿ

ಕಾಟನ್ನೋ ಸಿಂಥೆಟಿಕ್ಕೋ... ಬೆಲೆ ಎಷ್ಟೋ?!

ಟಿ.ವಿ.ಯಲ್ಲಿ ಕೇಂದ್ರದ ಬಜೆಟ್ ಮಂಡನೆ ವೀಕ್ಷಿಸುತ್ತಿದ್ದೆವು. ನಮ್ಮ ಚರ್ಚೆ, ವಿಮರ್ಶೆ ಸಾಗಿತ್ತು. ಅಜ್ಜಿಯೂ ನಮ್ಮೊಂದಿಗಿದ್ದರು. ಸಂಜೆಗೆ ಅವರಲ್ಲಿ ‘ಹೇಗಿತ್ತು?’ ಎಂದು ಬಜೆಟ್ ಬಗ್ಗೆ ವಿಚಾರಿಸಿದಾಗ ‘ಚೆನ್ನಾಗಿದೆ’ ಎಂದರು. ನಮಗೆ ಆಶ್ಚರ್ಯವಾಗಿ, ‘ಹೌದಾ? ಯಾವುದು? ಏನು?’ ಎಂದು ಪ್ರಶ್ನಿಸಿದಾಗ ‘ಅದೇ ಕಣಪ್ಪಾ, ಬಜೆಟ್ ಓದುತ್ತಾ ಇದ್ದರಲ್ಲಾ ಹೆಣ್ಮಗಳು, ಆಕೆ ಉಟ್ಟಿದ್ದ ಸೀರೆ ಚೆನ್ನಾಗಿತ್ತು’ ಎಂದರು! ಕಾಟನ್ನೋ, ಸಿಂಥೆಟಿಕ್ಕೋ, ಬೆಲೆ ಎಷ್ಟೋ ಎಂದೆಲ್ಲ ಗುನುಗಿದ್ದೂ ಆಯಿತು.

ಮಾರನೇ ದಿನ ಪತ್ರಿಕೆಯಲ್ಲಿ, ಅವರು ಉಟ್ಟಿದ್ದುದು ಧಾರವಾಡದ ಕಸೂತಿ ಸೀರೆ ಎಂಬ ವಿವರವನ್ನು ಓದಿ ಅಜ್ಜಿಗೆ ತಿಳಿಸಿದೆ. ‘ಬೆಲೆ ಎಷ್ಟು?’ ಎಂದರು. ಪತ್ರಿಕೆ ನೋಡಿ ‘ಅಂದಾಜು ₹ 27 ಸಾವಿರ’ ಅಂದಾಗ, ಅಜ್ಜಿ ‘ಇದು ಜನಸಾಮಾನ್ಯರ, ಮಧ್ಯಮ ವರ್ಗದವರ ಪಾಲಿನ ಬಜೆಟ್ಟಿಗೆ ಎಟುಕದು!’ ಎಂದರು. ಮುಂದುವರಿಯುತ್ತಾ ‘ಅವರಾದ್ರೂ ಟಿ.ವಿ.ಯಲ್ಲಿ ಬರ್ತಾರೆ, ನಾವೆಲ್ಲಿ ಬರ್ತೀವಿ? ನೋಡುತ್ತೇವೆ ಅಷ್ಟೇ. ಇನ್ನು ಮುಂದೆ ಮಂದಿ ಸೀರೆ ಅಂಗಡಿಯಲ್ಲಿ ಬಜೆಟ್ ಸೀರೆ ತೋರಿಸಿ ಎನ್ನಲು ಅಡ್ಡಿಯಿಲ್ಲ’ ಎನ್ನುತ್ತಾ ಬಜೆಟ್ ಮೇಲಿನ ಅಜ್ಜಿಯ ವಿಮರ್ಶೆ ಮುಗಿದಿತ್ತು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಹೂಳು ಕೆರೆಯಲ್ಲಲ್ಲ, ತಲೆಯಲ್ಲಿ ತುಂಬಿದೆಯೆ?

ಕೆರೆಕುಂಟೆ, ನದಿತೀರ, ಅಳಿವೆಯಂಥ ಜೌಗು ಭೂಮಿಗಳ ಸಂರಕ್ಷಣೆಗೆಂದೇ ಗುರುವಾರ (ಫೆ. 2) ‘ವಿಶ್ವ ತರಿ ಭೂಮಿ ದಿನ’ವನ್ನು ಜಾಗತಿಕ ಮಟ್ಟದಲ್ಲಿ ಆಚರಿಸಲಾಯಿತು. ಮನುಷ್ಯರಿಗಷ್ಟೇ ಅಲ್ಲ, ಒಟ್ಟಾರೆ ಜೀವಲೋಕಕ್ಕೆ ಆಸರೆ ನೀಡುವ ಈ ಜೌಗು ಭೂಮಿಗಳು ಜಗತ್ತಿನ ಎಲ್ಲೆಡೆ ನಿರಂತರ ಅವನತಿಗೀಡಾಗುತ್ತಿವೆ. ಅರಣ್ಯನಾಶಕ್ಕಿಂತ ಮೂರು ಪಟ್ಟು ವೇಗದಲ್ಲಿ ಈ ಜಲಸೆಲೆಗಳು ದುರ್ಗತಿಗೀಡಾಗುತ್ತಿವೆ ಎಂದು ವಿಶ್ವಸಂಸ್ಥೆ ಹೇಳಿದೆ. ಈ ಕುರಿತು ಜನಜಾಗೃತಿ ಮೂಡಿಸಲೆಂದು 130ಕ್ಕೂ ಹೆಚ್ಚು ದೇಶಗಳಲ್ಲಿ ಗುರುವಾರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕದಲ್ಲಿ ಜನನಾಯಕರಿಗಂತೂ ಇಂಥ ಗಂಭೀರ ವಿಷಯಗಳ ಬಗ್ಗೆ ಗಮನಹರಿಸಲು ಬಿಡುವಿಲ್ಲ.

ಆಡಳಿತಯಂತ್ರಕ್ಕೆ ಏನಾಗಿದೆ? ಕನಿಷ್ಠ ಆರು ಸರ್ಕಾರಿ ಇಲಾಖೆಗಳ ಮತ್ತು ಹತ್ತಾರು ಪ್ರಾಧಿಕಾರ, ನಿಗಮ, ಮಂಡಳಿಗಳ ಸಾವಿರಾರು ಅಧಿಕಾರಿಗಳು ನೀರಿಗೆ ಸಂಬಂಧಿಸಿದ ಕೆಲಸಕ್ಕೆ ಸಂಬಳ ಪಡೆಯುತ್ತಿದ್ದಾರೆ. ಇತರ ಜಿಲ್ಲೆಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮ ಬಿಡಿ; ಬೆಂಗಳೂರಿನಲ್ಲಿ ಒಂದೇ ಒಂದಾದರೂ ಸಾರ್ವಜನಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಇವರಿಂದ ಸಾಧ್ಯವಾಗಿಲ್ಲವೆ? ಇಲ್ಲಿನ ಕೆರೆಗಳ ಜೀರ್ಣೋದ್ಧಾರಕ್ಕೆ ನೀರಿನಂತೆ ಹಣ ಚೆಲ್ಲಿದ ಕಾಟಾಚಾರಕ್ಕೆ ಒಂದು ಜಾಹೀರಾತನ್ನಾದರೂ ನೀಡಿ ಕೈತೊಳೆದುಕೊಳ್ಳಬಹುದಿತ್ತು. ಅದನ್ನೂ ಮಾಡಿಲ್ಲ. ಜೌಗು ಭೂಮಿಗಳಲ್ಲಿ ತುಂಬಿದಷ್ಟೇ ಪ್ರಮಾಣದ ಹೂಳು ಆಡಳಿತಯಂತ್ರದೊಳಕ್ಕೂ ತುಂಬಿದೆಯೆ?

ನಾಗೇಶ ಹೆಗಡೆ, ಕೆಂಗೇರಿ

‘ಪಾತಾಳ’ ಲೋಕಕ್ಕೆ ಇನ್ನಷ್ಟು ಹಸಿವು?

ಕೇಂದ್ರ ಸರ್ಕಾರದಿಂದ 2023- 24ನೇ ಸಾಲಿಗೆ ಭಾರಿ ಗಾತ್ರದ (ಸಾಲದ) ಬಜೆಟ್ ಮಂಡನೆ ಆಗಿದೆ. ಯಾವಾಗಲೂ ಲಾಭದಲ್ಲೇ ಇರುವ ಉಳ್ಳವರ ಲೋಕದ ಜನರಿಗೆ ಬಜೆಟ್ ಹೇಗಿದ್ದರೂ ಹೆಚ್ಚಿನ ಪರಿಣಾಮ ಬೀರದು. ಶೇ 30-35ರಷ್ಟು ಮಾತ್ರ ಮರ್ತ್ಯಲೋಕದ ಜನರಿದ್ದಾರೆ (ಮಧ್ಯಮ ವರ್ಗ). ಮಂಡಿಸಿರುವ ಬಜೆಟ್‌ನಲ್ಲಿ ಇವರ ದುಡಿಮೆ ಮತ್ತು ಸಂಬಳದ ಮೇಲೆ ಕಣ್ಣಿಟ್ಟು ಕೆಲವು ವಸ್ತುಗಳನ್ನು ಖರೀದಿಸಲು ಉತ್ತೇಜನ ನೀಡಲಾಗಿದೆ. ಉಳಿದಂತೆ ಶೇ 55-60ರಷ್ಟು ಪಾತಾಳ ಲೋಕದ (ಆರ್ಥಿಕವಾಗಿ ಕೆಳಮಟ್ಟ) ಕೂಲಿ ಮಾಡುವ ಜನರ ಬದುಕಿನ ಸುಧಾರಣೆಗಾಗಿ ಬಜೆಟ್‌ನಲ್ಲಿ ಸಾರಾಂಶ ಏನಿದೆ? ಗ್ರಾಮೀಣ ಉದ್ಯೋಗ ಖಾತರಿಯಲ್ಲಿ ಅನುದಾನ ಕಡಿತ, ಆಹಾರದ ಸಬ್ಸಿಡಿ ಕಡಿತ, ರಸಗೊಬ್ಬರದ ಸಬ್ಸಿಡಿ ಕಡಿತ, ಕೈಗಾರಿಕಾ ಅಭಿವೃದ್ಧಿಗೆ, ಅಲ್ಪಸಂಖ್ಯಾತರ ಕಲ್ಯಾಣ ನಿಧಿಗೆ, ಗ್ರಾಮೀಣಾಭಿವೃದ್ಧಿಗೆ, ಅಪೌಷ್ಟಿಕತೆಯ ನಿವಾರಣೆಗೆ ಈ ಹಿಂದೆ ತೆಗೆದಿರಿಸುತ್ತಿದ್ದ ಅನುದಾನಕ್ಕೆ ಹೋಲಿಸಿದರೆ ಈ ಸಲ ಅನುದಾನದಲ್ಲಿ ಕಡಿತ ಮಾಡಲಾಗಿದೆ.

ಬಜೆಟ್ ಈ ವರ್ಗದ ಜನರನ್ನು ಮೇಲೆತ್ತುವ ಕೆಲಸ ಮಾಡಬೇಕಾಗಿತ್ತು. ಆದರೆ ಈಗ ಮಂಡಿಸಿರುವ ಬಜೆಟ್, ಪಾತಾಳ ಲೋಕದ ಈ ಜನರಿಗೆ ಇನ್ನಷ್ಟು ಹಸಿವು, ರೋಗ ಬಾಧೆ, ಶಿಕ್ಷಣ ವಂಚನೆ, ಸಂಕಷ್ಟಗಳ ಯಾದಿ ದೊಡ್ಡದಾಗಲು ಪೂರಕವಾಗಿ ಇದ್ದಂತಿದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮತ್ತೆ ನಡೆಯಲಿ ದುರ್ಗೋತ್ಸವ

ರಾಜ್ಯದ ಹಲವು ಜಿಲ್ಲೆಗಳಲ್ಲಿ ಜಿಲ್ಲಾ ಉತ್ಸವಗಳು ನಡೆಯುತ್ತವೆ. ಆದರೆ ನಮ್ಮ ಚಿತ್ರದುರ್ಗದಲ್ಲಿ ‘ದುರ್ಗೋತ್ಸವ’ ಎಂಬ ಹೆಸರಿನಲ್ಲಿ ಒಂದೆರಡು ಬಾರಿ ಜಿಲ್ಲಾ ಉತ್ಸವ ನಡೆದದ್ದು ಬಿಟ್ಟರೆ ಮತ್ತೆ ನಡೆದಿಲ್ಲ. ಚಿತ್ರದುರ್ಗ ಸೇರಿದಂತೆ ಜಿಲ್ಲೆಯ ಅನೇಕ ತಾಲ್ಲೂಕುಗಳು ಗತ ವೈಭವವನ್ನು ಹೇಳುತ್ತವೆ. ವರ್ಷಕ್ಕೊಮ್ಮೆ ಜಿಲ್ಲಾ ಉತ್ಸವ ನಡೆದರೆ ಆ ಹೆಸರಿನಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ಆದಾವು. ಅದರಂತೆ ಕಲೆ, ಕ್ರೀಡೆಗೆ ಪ್ರೋತ್ಸಾಹ, ಸಾಹಿತ್ಯ, ಸಂಸ್ಕೃತಿ ಬಗೆಗೆ ಚರ್ಚೆ, ಸಂವಾದ ನಡೆಯಲು ಅವಕಾಶ ಸೇರಿದಂತೆ ಪ್ರವಾಸೋದ್ಯಮದ ಪ್ರಗತಿ, ಆ ಮೂಲಕ ಉದ್ಯೋಗ ಸೃಷ್ಟಿ ಸಾಧ್ಯವಾಗುತ್ತದೆ. ಸರ್ಕಾರ ‘ದುರ್ಗೋತ್ಸವ’ ಮಾಡಲು ಮುಂದಾಗುವುದೇ?

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಕುಶಲಕರ್ಮಿಗಳಿಗೆ ಪುನರುಜ್ಜೀವನ ನೀಡಲಿ

2023- 24ನೇ ಸಾಲಿನ ಕೇಂದ್ರ ಬಜೆಟ್, ಕುಶಲಕರ್ಮಿಗಳಿಗಾಗಿ ಪರಿಚಯಿಸಿರುವ ‘ವಿಶ್ವಕರ್ಮ ಕೌಶಲ ಸಮ್ಮಾನ್ ಯೋಜನೆ’ ಸ್ವಾಗತಾರ್ಹ. ದೊಡ್ಡ ಕೈಗಾರಿಕೆಗಳು ಉತ್ಪಾದಿಸುವ ಸರಕುಗಳು ಮತ್ತು ಆಮದು ಸರಕುಗಳೊಂದಿಗೆ ಪೈಪೋಟಿ ಮಾಡಲಾಗದೆ ಎಷ್ಟೋ ಕರಕುಶಲ ಕೈಗಾರಿಕೆಗಳು ಅವನತಿ ಹೊಂದಿ ಕುಶಲಕರ್ಮಿಗಳು ನಿರುದ್ಯೋಗ, ಬಡತನದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಭಾಗಶಃ ಅವನತಿ ಹೊಂದಿದ ಕರಕುಶಲ ಕೈಗಾರಿಕೆಗಳಿಗೆ ಈ ಯೋಜನೆಯು ಸ್ಫೂರ್ತಿ ತುಂಬಲಿ. ಉತ್ಪಾದನೆಯ ಗುಣಮಟ್ಟ ಹೆಚ್ಚಿಸುವುದರ ಬಗ್ಗೆ ತರಬೇತಿ ಮತ್ತು ಕುಶಲಕರ್ಮಿಗಳು ಉತ್ಪಾದಿಸುವ ಕರಕುಶಲ ಸರಕುಗಳಿಗೆ ಜಗತ್ತಿನಾದ್ಯಂತ ಬೇಡಿಕೆ ಬರುವಂತೆ ಮಾಡಲಿ.

ನಿರ್ಮಲ ನಾಗೇಶ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಾಧ್ಯಮ ಸ್ವಾತಂತ್ರ್ಯ ಮೇಲಿನ ಕರಿ ಚುಕ್ಕೆಗಳು

ಪ್ರಜಾವಾಣಿ ವಾರ್ತೆ



ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಸ್ಥೆಯು ಪ್ರತಿ ವರ್ಷ ಮಾಧ್ಯಮ ಸ್ವಾತಂತ್ರ್ಯದ ಸ್ಥಿತಿ ಹೇಗಿದೆ ಎಂಬ ಶ್ರೇಯಾಂಕ ಪಟ್ಟಿಯೊಂದನ್ನು ತಯಾರಿಸುತ್ತದೆ. ಭಾರತವು 2022ರಲ್ಲಿ 150ನೇ ರ್‍ಯಾಂಕ್ ಪಡೆದುಕೊಂಡಿದೆ. 2002ರಲ್ಲಿ 80ನೇ ಸ್ಥಾನದಲ್ಲಿದ್ದ ಭಾರತವು ಈಗ 150ನೇ ಸ್ಥಾನಕ್ಕೆ ಇಳಿದು ಪಾತಾಳಕ್ಕೆ ಕುಸಿದಿದೆ. ಕಮಿಟಿ ಟು ಪ್ರೊಟೆಕ್ಟ್ ಜರ್ನಲಿಸ್ಟ್ಸ್ (ಸಿಪಿಜೆ) ಸಂಸ್ಥೆಯು ಕಳೆದ ವರ್ಷ ಡಿಸೆಂಬರ್‌ನಲ್ಲಿ ಪ್ರಕಟಿಸಿದ ವರದಿಯ ಪ್ರಕಾರ, ತಮ್ಮ ಕರ್ತವ್ಯ ನಿರ್ವಹಣೆಯ ನಡುವೆಯೇ ಬಂಧನಕ್ಕೆ ಒಳಗಾದ ಏಳು ಪತ್ರಕರ್ತರು ಜೈಲಿನಲ್ಲಿದ್ದಾರೆ. ಅವರ ಪೈಕಿ ಸಿದ್ದೀಕ್ ಕಪ್ಪನ್ ಅವರೊಬ್ಬರು ಮಾತ್ರ ಗುರುವಾರ ಬಿಡುಗಡೆ ಆಗಿದ್ದಾರೆ.

ಪತ್ರಕರ್ತರು ಹತ್ಯೆ ಆಗಿರುವ ಉದಾಹರಣೆಗಳು ಇವೆ. ಕಳೆದ ವರ್ಷ ಭಾರತದಲ್ಲಿ ಒಬ್ಬ ಪತ್ರಕರ್ತನ ಹತ್ಯೆ ಆಗಿದೆ. ವಿವಿಧ ರೀತಿಯ ಪ್ರಕರಣಗಳನ್ನು ದಾಖಲಿಸಿ ಪತ್ರಕರ್ತರನ್ನು ವಿಚಾರಣೆಗೆ ಒಳಪಡಿಸುವುದು, ವಿದೇಶಕ್ಕೆ ಹೋಗುವುದನ್ನು ತಡೆಯುವುದು, ಮನೆ, ಕಚೇರಿಗಳಲ್ಲಿ ಶೋಧ ನಡೆಸಿದ ಹಲವು ಪ್ರಕರಣಗಳು ಇವೆ.

ಕಳೆದ ವರ್ಷದ ಆರಂಭದಲ್ಲಿಯೇ ಅಂದರೆ, ಜನವರಿ 31ರಂದು ಮೀಡಿಯಾಒನ್ ಎಂಬ ಸುದ್ದಿವಾಹಿನಿಯು ತನ್ನ ಪ್ರಸಾರವನ್ನು ನಿಲ್ಲಿಸಿತು. ಪ್ರಸಾರವನ್ನು ಅಮಾನತಿನಲ್ಲಿ ಇರಿಸುವಂತೆ ವಾರ್ತಾ ಮತ್ತು ಪ್ರಸಾರ ಸಚಿವಾಲಯದಿಂದ ಇ–ಮೇಲ್ ಮೂಲಕ ಸೂಚನೆ ಬಂದಿತ್ತು ಎಂದು ಸಂಪಾದಕ ಪ್ರಮೋದ್ ರಾಮನ್ ಹೇಳಿದ್ದಾರೆ ಎಂದು ಸಿಪಿಜೆ ವರದಿ ಮಾಡಿದೆ.


2013ರಲ್ಲಿ ಪ್ರಸಾರ ಆರಂಭಿಸಿದ್ದ ಈ ಸುದ್ದಿವಾಹಿನಿಯ ಪರವಾನಗಿಯನ್ನು ನವೀಕರಿಸಲು ಕೇಂದ್ರ ಗೃಹ ಸಚಿವಾಲಯವು ನಿರಾಕರಿಸಿತ್ತು. ‘ಭದ್ರತಾ ಕಾರಣ’ಗಳಿಂದಾಗಿ ಪರವಾನಗಿ ನವೀಕರಣ ಸಾಧ್ಯವಿಲ್ಲ ಎಂದಿತ್ತು ಎನ್ನಲಾಗಿದೆ. ಬಳಿಕ, ಸುಪ್ರೀಂ ಕೋರ್ಟ್, ಸರ್ಕಾರದ ಆದೇಶಕ್ಕೆ ತಡೆ ನೀಡಿತ್ತು.


ಜಮ್ಮು ಮತ್ತು ಕಾಶ್ಮೀರದ ಪತ್ರಕರ್ತ ಫಹಾದ್ ಶಾ ಅವರನ್ನು 2022ರ ಫೆಬ್ರುವರಿ 4ರಂದು ಪೊಲೀಸರು ಬಂಧಿಸಿದ್ದರು. ಅವರು ಕಾಶ್ಮೀರಿವಾಲಾ ಎಂಬ ಸುದ್ದಿ ಪೋರ್ಟಲ್ ನಡೆಸುತ್ತಿದ್ದಾರೆ. ವಿಚಾರಣೆಗೆಂದು ಕರೆಸಿಕೊಂಡು ಬಳಿಕ ಅವರನ್ನು ಬಂಧಿಸಲಾಗಿದೆ ಎಂದು ಅವರ ಆಪ್ತರು ಹೇಳಿದ್ದರು. ಫೇಸ್‌ಬುಕ್‌ನ ಕೆಲವು ಬಳಕೆದಾರರು ಮತ್ತು ಕೆಲವು ಪೋರ್ಟಲ್‌ಗಳು ‘ದೇಶ ವಿರೋಧಿ ವಿಚಾರ’ಗಳನ್ನು ಪ್ರಕಟಿಸಿವೆ. ಆ ಕಾರಣಕ್ಕಾಗಿ ಫಹಾದ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದರು. ಆದರೆ, ಪ್ರಕಟಿಸಿದ ವಿಚಾರಗಳು ಯಾವುವು ಎಂಬುದನ್ನು ಅವರು ಸ್ಪಷ್ಟಪಡಿಸಿಲ್ಲ.

ಮಧ್ಯಂತರ ಜಾಮೀನು ದೊರೆತು ಹೊರಬಂದ ಫಹಾದ್ ಅವರನ್ನು ಕಳೆದ ಫೆಬ್ರುವರಿ 26ರಂದು ಮತ್ತೆ ಬಂಧಿಸಲಾಯಿತು.

ಫಹಾದ್ 2022ರ ಮಾರ್ಚ್ 5ರಂದು ಮತ್ತೆ ಜಾಮೀನು ಪಡೆದುಕೊಂಡರು. ಆದರೆ, ಕೆಲವೇ ತಾಸುಗಳಲ್ಲಿ ಅವರನ್ನು ಮತ್ತೆ ಬಂಧಿಸಲಾಯಿತು.


ಛತ್ತೀಸಗಢದ ಪತ್ರಕರ್ತ ನಿಲೇಶ್ ಶರ್ಮಾ ಅವರನ್ನು ರಾಯಪುರ ಪೊಲೀಸರು ಕಳೆದ ಮಾರ್ಚ್ 2ರಂದು ಬಂಧಿಸಿದ್ದಾರೆ. ಅವರು ಇಂಡಿಯಾರೈಟರ್ಸ್ ಡಾಟ್ ಕೊ ಡಾಟ್ ಇನ್ ಎಂಬ ವೆಬ್‌ಸೈಟ್‌ನ ಸಂಪಾದಕ.


ರಾಣಾ ಅಯ್ಯೂಬ್


ಜುಬೇರ್

ಕಾಂಗ್ರೆಸ್ ಪಕ್ಷದ ಖೈಲಾವನ್ ನಿಶಾದ್ ಎಂಬವರು ಕೊಟ್ಟ ದೂರಿನ ಆಧಾರದಲ್ಲಿ ಶರ್ಮಾ ಅವರನ್ನು ಬಂಧಿಸಲಾಗಿದೆ. ಶರ್ಮಾ ಅವರ ವಿಡಂಬನಾ ವೆಬ್‌ಸೈಟ್‌ನಲ್ಲಿ ಪ್ರಕಟವಾಗುವ ಅಂಕಣಗಳಲ್ಲಿ ತಮ್ಮ ಪಕ್ಷದ ಸಚಿವರು ಮತ್ತು ಶಾಸಕರನ್ನು ಹೋಲುವ ವ್ಯಕ್ತಿಗಳನ್ನು ಗೇಲಿ ಮಾಡಲಾಗುತ್ತಿದೆ ಎಂದು ದೂರಿನಲ್ಲಿ ಹೇಳಲಾಗಿತ್ತು.

ಪರ್ತಕರ್ತೆ ರಾಣಾ ಅಯ್ಯೂಬ್ ಅವರು ಲಂಡನ್‌ಗೆ ಹೋಗುವುದನ್ನು ಕಳೆದ ಮಾರ್ಚ್ 29ರಂದು ತಡೆಯಲಾಗಿತ್ತು. ಕೋವಿಡ್ ಸಂತ್ರಸ್ತರಿಗಾಗಿ ಸಂಗ್ರಹಿಸಿದ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಅವರ ಮೇಲಿದೆ. ತೆರಿಗೆ ವಂಚನೆ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪದ ಕುರಿತು ತನಿಖೆ ನಡೆಯುತ್ತಿದೆ ಎಂಬ ಕಾರಣಕ್ಕೆ ಅವರು ಲಂಡನ್‌ಗೆ ಹೋಗುವುದನ್ನು ತಡೆಯಲಾಗಿತ್ತು.


ಸಿದ್ಧಾರ್ಥ ವರದರಾಜನ್

ರಾಣಾ ಅವರು ಸರ್ಕಾರ ಮತ್ತು ಬಲಪಂಥೀಯ ಸಂಘಟನೆಗಳ ಕುರಿತಂತೆ ವಿಮರ್ಶಾತ್ಮಕವಾಗಿ ಬರೆದಿದ್ದಾರೆ ಮತ್ತು ಹಲವು ಟ್ವೀಟ್‌ಗಳನ್ನು ಮಾಡಿದ್ದಾರೆ. ಅವರಿಗೆ ಆನ್‌ಲೈನ್ ಬೆದರಿಕೆಗಳು ಹಲವು ಬಾರಿ ಬಂದಿವೆ. ಅವರು ಟ್ರೋಲ್ ಆಗಿರುವುದು ಕಡಿಮೆ ಏನಲ್ಲ. ಎರಡು ಮುಸ್ಲಿಂ ವಿರೋಧಿ ಆ್ಯಪ್‌ಗಳಲ್ಲಿ ಅವರ ಚಿತ್ರ ಹಾಕಿ ‘ಅವರು ಹರಾಜಿಗಿದ್ದಾರೆ’ ಎಂದು ಹೇಳಲಾಗಿತ್ತು. ನೀಲಿ ವಿಡಿಯೊವನ್ನು ತಿರುಚಿ ರಾಣಾ ಅವರ ಮುಖವನ್ನು ಸೇರಿಸಿ, ಆ ವಿಡಿಯೊವನ್ನು ವಾಟ್ಸ್‌ಆ್ಯಪ್ ಮೂಲಕ ಹಂಚಲಾಗಿತ್ತು.

ಮಧ್ಯ ಪ್ರದೇಶದ ಪತ್ರಕರ್ತರಾದ ಕನಿಷ್ಕ ತಿವಾರಿ ಮತ್ತು ಆದಿತ್ಯ ಸಿಂಗ್ ಭದೌರಿಯಾ ಅವರಿಗೆ ಪೊಲೀಸರು ಕಳೆದ ಏಪ್ರಿಲ್ 2ರಂದು ಥಳಿಸಿದ್ದಾರೆ ಎಂಬ ಆರೋಪ ಇದೆ. ಠಾಣಾಧಿಕಾರಿಯು ಇವರ ಬಟ್ಟೆ ಬಿಚ್ಚಿ ಚಡ್ಡಿಯಲ್ಲಿ ನಿಲ್ಲಿಸಿ ಫೋಟೊ ತೆಗೆಸಿದ್ದಾರೆ. ಪ್ರತಿಭಟನೆಯ ಕುರಿತು ವರದಿ ಮಾಡುವುದನ್ನು ಮುಂದುವರಿಸಿದರೆ ಪತ್ರಕರ್ತರನ್ನು ಬೆತ್ತಲೆಯಾಗಿ ಪಟ್ಟಣದಲ್ಲಿ ಮೆರವಣಿಗೆ ಮಾಡಿಸುವುದಾಗಿಯೂ ಠಾಣಾಧಿಕಾರಿ ಬೆದರಿಕೆ ಒಡ್ಡಿದ್ದರು ಎಂದು ಆರೋಪಿಸಲಾಗಿದೆ.

ಅಮರ್ ಉಜಾಲಾ ಹಿಂದಿ ಪತ್ರಿಕೆಯ ವರದಿಗಾರರಾದ ಅಜಿತ್ ಓಜಾ ಮತ್ತು ದಿಗ್ವಿಜಯ್ ಸಿಂಗ್ ಅವರನ್ನು ಉತ್ತರ ಪ್ರದೇಶದ ಬಲಿಯಾ ಜಿಲ್ಲೆಯಲ್ಲಿ ಕಳೆದ ಮಾರ್ಚ್ 30ರಂದು ಬಂಧಿಸಲಾಗಿತ್ತು. ಶಾಲಾ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಕುರಿತು ಅವರು ಸರಣಿ ವರದಿಗಳನ್ನು ಬರೆದಿದ್ದರು.

ಆಲ್ಟ್‌ನ್ಯೂಸ್ ವೆಬ್‌ಸೈಟ್‌ನ ಸಹಸಂಸ್ಥಾಪಕ ಮೊಹಮ್ಮದ್ ಜುಬೇರ್ ಅವರನ್ನು ಕಳೆದ ಜೂನ್ 27ರಂದು ಬಂಧಿಸಿದ್ದು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿತ್ತು. 2020ರಲ್ಲಿ ಅವರು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದ ಒಂದು ಪೋಸ್ಟ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ತನಿಖೆಗಾಗಿ ಕರೆಸಿಕೊಂಡು ಬಳಿಕ ಬಂಧಿಸಲಾಗಿತ್ತು. ಈ ಪ್ರಕರಣದಲ್ಲಿ ಜುಬೇರ್ ಅವರಿಗೆ ದೆಹಲಿ ಹೈಕೋರ್ಟ್ ಬಂಧನದಿಂದ ರಕ್ಷಣೆ ನೀಡಿದ್ದರೂ ಅವರನ್ನು ಬಂಧಿಸಲಾಯಿತು.

ಕಾಶ್ಮೀರದ ಪತ್ರಕರ್ತ ಆಕಾಶ್ ಹಸನ್ ಅವರನ್ನು ಜುಲೈ 26ರಂದು ದೆಹಲಿ ವಿಮಾನ ನಿಲ್ದಾಣದಲ್ಲಿ ತಡೆಯಲಾಗಿತ್ತು. ಅವರನ್ನು ಹಲವು ತಾಸು ಕುಳ್ಳಿರಿಸಿ, ಅವರ ಕುಟುಂಬ, ವೃತ್ತಿ, ಹಿನ್ನೆಲೆ ಮತ್ತಿತರ ವಿಚಾರಗಳ ಕುರಿತು ಪ್ರಶ್ನಿಸಲಾಗಿತ್ತು. ಶ್ರೀಲಂಕಾಕ್ಕೆ ಹೋಗುತ್ತಿದ್ದ ವಿಮಾನವೇರಲು ಅವರಿಗೆ ಅವಕಾಶ ನಿರಾಕರಿಸಲಾಯಿತು. ತಮ್ಮ ಮೇಲೆ ಯಾವುದೇ ಪ್ರಕರಣಗಳು ಇಲ್ಲ ಎಂದು ಹಸನ್ ಅವರು ಆಗ ಹೇಳಿಕೆ ನೀಡಿದ್ದರು.

‘ದಿ ವೈರ್’ನ ಕಚೇರಿ, ಅದರ ಪತ್ರಕರ್ತರಾದ ಸಿದ್ಧಾರ್ಥ ವರದರಾಜನ್, ಎಂ.ಕೆ.ವೇಣು, ಸಿದ್ಧಾರ್ಥ ಭಾಟಿಯಾ ಮತ್ತು ಜಾಹ್ನವಿ ಸೆನ್ ಅವರ ಮನೆಗಳಲ್ಲಿ ದೆಹಲಿ ಪೊಲೀಸರು ಕಳೆದ ಅಕ್ಟೋಬರ್ 31ರಂದು ಶೋಧ ನಡೆಸಿ, ಎಲೆಕ್ಟ್ರಾನಿಕ್ ಸಾಧನಗಳನ್ನು ವಶಕ್ಕೆ ಪಡೆದಿದ್ದರು. ಬಿಜೆಪಿಯ ಅಮಿತ್ ಮಾಳವೀಯ ಅವರು ನೀಡಿದ ದೂರಿನಂತೆ ಪೊಲೀಸರು ಶೋಧ ನಡೆಸಿದ್ದಾರೆ ಎಂದು ವರದರಾಜನ್ ಹೇಳಿದ್ದಾರೆ. ಈ ಪತ್ರಕರ್ತರ ಮೇಲೆ ಮಾಳವೀಯ ಅವರು ವಂಚನೆ ಮತ್ತು ಮಾನನಷ್ಟಕ್ಕೆ ದೂರು ನೀಡಿದ್ದರು.


ಆಧಾರ: ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್, ಕಮಿಟಿ ಟು ಪ್ರೊಟೆಕ್ಟ್ ಜರ್ನಲಿಸ್ಟ್ಸ್

ಪುಲಿಟ್ಜರ್ ಪಡೆಯಲೂ ಬಿಡಲಿಲ್ಲ

ಕಾಶ್ಮೀರದ ಪತ್ರಿಕಾ ಛಾಯಾಗ್ರಾಹಕಿ ಸನಾ ಇರ್ಷಾದ್ ಮಟ್ಟೂ ಅವರನ್ನು ಕಳೆದ ಅಕ್ಟೋಬರ್ 18ರಂದು ದೆಹಲಿ ವಿಮಾನ ನಿಲ್ದಾಣದಲ್ಲಿ ತಡೆಯಲಾಗಿತ್ತು. ಅವರು ಪುಲಿಟ್ಜರ್ ಪ್ರಶಸ್ತಿ ಪಡೆಯಲು ನ್ಯೂಯಾರ್ಕ್‌ಗೆ ಹೋಗಬೇಕಿತ್ತು. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಭಾರತದಲ್ಲಿ ಅದನ್ನು ಹೇಗೆ ನಿಭಾಯಿಸಲಾಯಿತು ಎಂಬುದರ ಕುರಿತು ಅವರು ವ್ಯಾಪಕವಾಗಿ ಫೋಟೊಗಳನ್ನು ತೆಗೆದಿದ್ದರು. ಅದಕ್ಕೆ ಪುಲಿಟ್ಜರ್ ಪ್ರಶಸ್ತಿಯೂ ಬಂದಿತ್ತು. ಸನಾ ಅವರನ್ನು ತಡೆಯುವುದಕ್ಕೆ ಅಧಿಕಾರಿಗಳು ಯಾವುದೇ ಕಾರಣ ಕೊಟ್ಟಿಲ್ಲ ಎಂದು ವರದಿಯಾಗಿತ್ತು. ಸನಾ ಅವರ ಬಳಿ ಪಾಸ್‌ಪೋರ್ಟ್, ವೀಸಾ ಮತ್ತು ಪ್ರಯಾಣಕ್ಕೆ ಬೇಕಾದ ಇತರ ಎಲ್ಲ ದಾಖಲೆಗಳೂ ಇದ್ದವು.

ಪತ್ರಕರ್ತರ ಹತ್ಯೆ

ತಮ್ಮ ವೃತ್ತಿಯ ಕಾರಣಕ್ಕೆ ಹತ್ಯೆಯಾದ ಪತ್ರಕರ್ತರಿಗೆ ಸಂಬಂಧಿಸಿದ ದತ್ತಾಂಶವನ್ನು ಸಿಪಿಜೆ ಸಂಗ್ರಹಿಸುತ್ತದೆ. 2014ರಿಂದ 2023ರ ಜನವರಿವರೆಗೆ ದೇಶದಲ್ಲಿ ಒಟ್ಟು 28 ಪತ್ರಕರ್ತರು ಕೊಲೆಯಾಗಿದ್ದಾರೆ



ಬಿಹಾರದ ಪತ್ರಕರ್ತ ಸುಭಾಷ್ ಕುಮಾರ್ ಮಹತೊ ಅವರ ಮೇಲೆ ಬೇಗುಸರಾಯ್ ಜಿಲ್ಲೆಯ ಸಖೊ ಎಂಬ ಗ್ರಾಮದಲ್ಲಿ ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ. 2022ರ ಮೇ 22ರಂದು ರಾತ್ರಿ 8.45ರ ಹೊತ್ತಿಗೆ ಕುಟುಂಬದ ಸದಸ್ಯರೊಂದಿಗೆ ಮದುವೆ ಕಾರ್ಯಕ್ರಮ ಮುಗಿಸಿಕೊಂಡು ಅವರು ಹಿಂದಿರುಗುತ್ತಿದ್ದರು. ನಾಲ್ವರು ಇದ್ದ ಗುಂಪು ಅವರ ಮೇಲೆ ಗುಂಡು ಹಾರಿಸಿ ಪರಾರಿಯಾಗಿತ್ತು. ಸ್ಥಳೀಯ ಕೇಬಲ್ ಟಿ.ವಿ. ವಾಹಿನಿಯೊಂದರಲ್ಲಿ ಮಹತೊ ವರದಿಗಾರರಾಗಿದ್ದರು. ಮಹತೊ ಅವರು ತಮ್ಮ ಪ್ರದೇಶದಲ್ಲಿ ನಡೆಯುತ್ತಿದ್ದ ಅಕ್ರಮ ಮದ್ಯ ವ್ಯಾಪಾರದ ಕುರಿತು ನಿರಂತರವಾಗಿ ವರದಿಗಳನ್ನು ಮಾಡಿದ್ದರು.

ಕಂಬಿಯ ಹಿಂದೆ ಪತ್ರಕರ್ತರು...

ಸಜ್ಜದ್ ಗುಲ್: ದಿ ಕಾಶ್ಮೀರ್ ವಾಲಾ ವರದಿಗಾರ ಸಜ್ಜದ್ ಗುಲ್ ಅವರನ್ನು 2022ರ ಜನವರಿ 6ರಂದು ಬಂಧಿಸಲಾಗಿತ್ತು. ಎಲ್‌ಇಟಿ ಉಗ್ರನ ಹತ್ಯೆ ವಿರುದ್ಧ ಆತನ ಕುಟುಂಬದವರು ನಡೆಸಿದ ಪ್ರತಿಭಟನೆಯ ವಿಡಿಯೊವನ್ನು ಟ್ವೀಟ್ ಮಾಡಿದ ಆರೋಪದಲ್ಲಿ ಸಜ್ಜದ್ ಅವರನ್ನು ಬಂಧಿಸಲಾಗಿತ್ತು. 9 ದಿನಗಳ ನಂತರ ಅವರಿಗೆ ಜಾಮೀನು ದೊರೆಯಿತು. ಆದರೆ, ಅವರನ್ನು ಹಳೆಯ ಪ್ರಕರಣವೊಂದರಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಮತ್ತೆ ಬಂಧಿಸಲಾಯಿತು. ಈ ಪ್ರಕರಣದಲ್ಲಿ ಅವರಿಗೆ ಇನ್ನೂ ಜಾಮೀನು ದೊರೆತಿಲ್ಲ.

ಮೊಹಮ್ಮದ್ ಮನನ್ ದರ್: ಜಮ್ಮು–ಕಾಶ್ಮೀರದ ಛಾಯಾಗ್ರಾಹಕ ಪತ್ರಕರ್ತ ಮನನ್ ದರ್ ಅವರನ್ನು, ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ ಆರೋಪದಲ್ಲಿ 2021ರ ಅಕ್ಟೋಬರ್‌ನಲ್ಲಿ ಬಂಧಿಸಲಾಗಿತ್ತು. ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್ಐಎ) ದರ್ ವಿರುದ್ಧ ಯುಎಪಿಎ ಅಡಿ ಪ್ರಕರಣ ದಾಖಲಿಸಿತ್ತು. ಅವರ ವಿರುದ್ಧ ಎನ್ಐಎ ಸಲ್ಲಿಸಿದ ಸಾಕ್ಷ್ಯಗಳಲ್ಲಿ ಹುರುಳಿಲ್ಲ ಎಂದು 2023ರ ಜನವರಿ ನಾಲ್ಕರಂದು ದೆಹಲಿ ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು ಮತ್ತು ದರ್ ಅವರಿಗೆ ಜಾಮೀನು ನೀಡಿತ್ತು.

ಗೌತಮ್ ನವಲಖಾ: 2018ರಲ್ಲಿ ಭೀಮಾ ಕೋರೆಗಾಂವ್ ಹಿಂಸಾಚಾರಕ್ಕೆ ಸಂಚು ರೂಪಿಸಿದ ಆರೋಪದಲ್ಲಿ ಅಂಕಣಕಾರ ಮತ್ತು ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರನ್ನು ಬಂಧಿಸಲಾಗಿತ್ತು. 2020ರ ಏಪ್ರಿಲ್‌ನಿಂದ ಅವರನ್ನು ಜೈಲಿನಲ್ಲಿ ಇರಿಸಲಾಗಿದೆ. ಅವರ ವಿರುದ್ಧ ಯುಎಪಿಎ ಅಡಿ ಪ್ರಕರಣ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಅವರ ವಿರುದ್ಧ ಇನ್ನೂ ಆರೋಪಪಟ್ಟಿ ಸಲ್ಲಿಕೆಯಾಗಿಲ್ಲ. ಜೈಲಿನಲ್ಲಿ ಅವರಿಗೆ ಕೆಲವು ಮೂಲ ಸೌಕರ್ಯಗಳನ್ನೂ ನಿರಾಕರಿಸಲಾಗಿತ್ತು. ಅನಾರೋಗ್ಯದ ಕಾರಣ, ನ್ಯಾಯಾಲಯದ ಆದೇಶದ ನಂತರ 2022ರ ನವೆಂಬರ್‌ನಿಂದ ಅವರನ್ನು ಗೃಹಬಂಧನದಲ್ಲಿ ಇರಿಸಲಾಗಿದೆ.


ಗೌತಮ್ ನವಲಖಾ

ರೂಪೇಶ್ ಕುಮಾರ್ ಸಿಂಗ್: ನಕ್ಸಲರಿಗೆ ನೆರವು ನೀಡಿದ ಮತ್ತು ಹಣ ಸಂಗ್ರಹಕ್ಕೆ ನೆರವಾದ ಆರೋಪದಲ್ಲಿ ಜಾರ್ಖಂಡ್‌ನ ಫ್ರೀಲಾನ್ಸ್ ಪತ್ರಕರ್ತ ರೂಪೇಶ್ ಕುಮಾರ್ ಸಿಂಗ್ ಅವರನ್ನು ಜಾರ್ಖಂಡ್ ಪೊಲೀಸರು 2022ರ ಜುಲೈನಲ್ಲಿ ಬಂಧಿಸಿದ್ದರು. ರಾಜ್ಯದಲ್ಲಿ ಬುಡಕಟ್ಟು ಸಮುದಾಯದ ಜನರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳ ಬಗ್ಗೆ ಅವರು ಬರೆದಿದ್ದ ವರದಿಗಳನ್ನು ರಾಜ್ಯದ ಹಲವು ಪತ್ರಿಕೆಗಳು ಮತ್ತು ಸುದ್ದಿಜಾಲತಾಣಗಳು ಪ್ರಕಟಿಸಿದ್ದವು. ಪೆಗಾಸಸ್ ಕುತಂತ್ರಾಂಶದ ಮೂಲಕ ಗೂಢಚರ್ಯೆಗೆ ಗುರಿಯಾಗಿದ್ದಾರೆ ಎನ್ನಲಾದ ದೇಶದ 40 ಪತ್ರಕರ್ತರ ಪಟ್ಟಿಯಲ್ಲಿ ರೂಪೇಶ್ ಅವರ ಹೆಸರೂ ಸಹ ಇದೆ. ಅವರ ವಿರುದ್ಧದ ಪ್ರಕರಣವು ಇನ್ನೂ ತನಿಖೆಯ ಹಂತದಲ್ಲೇ ಇದೆ.

‘ಸ್ಟ್ರಾಬೆರಿ’ಯಲ್ಲಿ ಹೀಗಿದ್ದಾರೆ ಶ್ರುತಿ

ನಟಿ ಶ್ರುತಿ ಹರಿಹರನ್ ನಟನೆಯ ಹೊಸ ಸಿನಿಮಾ ‘ಸ್ಟ್ರಾಬೆರಿ’ಯ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಈ ಸಿನಿಮಾದಲ್ಲಿ ಲೈಂಗಿಕ ಕಾರ್ಯಕರ್ತೆಯ ಪಾತ್ರದಲ್ಲಿ ಶ್ರುತಿ ಕಾಣಿಸಿಕೊಂಡಿದ್ದು, ಚಿತ್ರವನ್ನು ಅರ್ಜುನ್ ಲೂಯಿಸ್ ಅವರು ಬರೆದು ನಿರ್ದೇಶಿಸಿದ್ದಾರೆ.



ಪರಂವಃ ಸ್ಟುಟ್ಲೈಟ್ ನಿರ್ಮಾಣದ ಮೊದಲ ಚಿತ್ರ ಇದಾಗಿದೆ. ತಾಯಿ ಪ್ರೀತಿಯನ್ನು ಕಳೆದುಕೊಂಡ ‘ಅಮೃತಾ’ ಎನ್ನುವ ಲೈಂಗಿಕ ಕಾರ್ಯಕರ್ತೆಯೊಬ್ಬಳಿಗೆ ಮತ್ತೊಮ್ಮೆ ಅಂಥ ಪ್ರೀತಿಯ ಭರವಸೆ ಸಿಕ್ಕಿದ ಬಳಿಕ ನಡೆಯುವ ಕಥೆ ಇದಾಗಿದೆ ಎಂದಿದೆ ಚಿತ್ರತಂಡ.

ತನುಜಾ: ರೀಲ್‌ನಲ್ಲಿ ರಿಯಲ್ ಕತೆ

• ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ



ಸಿನಿಮಾ: ತನುಜಾ (ಕನ್ನಡ)
- ನಿರ್ದೇಶನ: ಹರೀಶ್ ಎಂ.ಡಿ ಹಳ್ಳಿ
- ನಿರ್ಮಾಪಕರು: ಚಂದ್ರಶೇಖರ್ ಗೌಡ, ಮನೋಜ್ ಬಿ.ಜಿ
- ತಾರಾಗಣ: ರಾಜೇಶ್ ನಟರಂಗ, ಸಪ್ತಾ ಪಾವೂರು, ಸಂಧ್ಯಾ ಅರಕೆರೆ, ವಿಶ್ವೇಶ್ವರ ಭಟ್ ಮತ್ತಿತರರು

ಹಲವು ನೈಜ ಘಟನೆಗಳು ಸಾಕ್ಷ್ಯಚಿತ್ರದ ರೂಪದಲ್ಲಿ ಇಲ್ಲವೇ ಕಿರುಚಿತ್ರಗಳಾಗಿ ಪ್ರೇಕ್ಷಕರ ಎದುರಿಗೆ ಬಂದಿವೆ. ನೈಜ ಘಟನೆಯ ಕಥೆ ಹೆಚ್ಚು ಆಳವಾಗಿರದೇ ಇದ್ದರೆ ಇವೇ ಮಾದರಿ ಇಂಥ ಘಟನೆಗಳನ್ನು ಪ್ರೇಕ್ಷಕರ ಎದುರಿಗೆ ಇರಿಸಲು ಸೂಕ್ತ. ಈ ಚೌಕಟ್ಟನ್ನು ಮೀರಿದ ಕಥೆಯೊಂದು ಸಿನಿಮಾ ರೂಪ ಪಡೆದರೆ ಪ್ರೇಕ್ಷಕನ ತಾಳ್ಮೆಯ ಪರೀಕ್ಷೆ ಚಿತ್ರಮಂದಿರಗಳಲ್ಲಿ ನಡೆಯುತ್ತದೆ. ಈ ವಿಚಾರ ಹರೀಶ್ ಎಂ.ಡಿ. ಹಳ್ಳಿ ನಿರ್ದೇಶನದ ‘ತನುಜಾ’ ಸಿನಿಮಾಗೆ ಅನ್ವಯಿಸುತ್ತದೆ.

2020ರಲ್ಲಿ ನಡೆದ ನೈಜ ಘಟನೆಯೊಂದನ್ನು ಆಧರಿಸಿ ‘ತನುಜಾ’ ಚಿತ್ರವನ್ನು ನಿರ್ಮಾಣ ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆ ಶಿಕಾರಿಪುರದ ಮಲ್ಲೇನಹಳ್ಳಿ ಗ್ರಾಮದ ವಿದ್ಯಾರ್ಥಿನಿ ತನುಜಾ ಕರೇಗೌಡ್ರ ಸುತ್ತ ಈ ಚಿತ್ರದ ಕಥೆಯಿದೆ. ವೈದ್ಯೆಯಾಗುವ ಕನಸು ಹೊತ್ತ ತನುಜಾಗೆ ಕೆಲ ತಾಂತ್ರಿಕ ಕಾರಣಗಳಿಂದಾಗಿ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಪ್ರವೇಶಪತ್ರ ದೊರಕಿರಲಿಲ್ಲ. ಈ ಬಗ್ಗೆ ಪತ್ರಕರ್ತ ವಿಶ್ವೇಶ್ವರ ಭಟ್ ಟ್ವೀಟ್ ಮೂಲಕ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಗಮನಸೆಳೆದಿದ್ದರು. ಯಡಿಯೂರಪ್ಪ ಹಾಗೂ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸಹಾಯದಿಂದ ಪ್ರವೇಶಪತ್ರ ಪಡೆದು ಆಕೆ ಪರೀಕ್ಷೆ ಬರೆದಿದ್ದಳು.

ಚಿತ್ರಕ್ಕೆ ಜೀವ ತುಂಬಲು ಹಾಡುಗಳನ್ನು ಹಾಗೂ ಕಾಲ್ಪನಿಕ ದೃಶ್ಯಗಳನ್ನು ನಿರ್ದೇಶಕರು ಕೆಲವೆಡೆ ಸೇರಿಸಿದ್ದಾರೆ. ಚಿತ್ರದ ಮೊದಲಾರ್ಧದಲ್ಲಿ ವಿಶ್ವೇಶ್ವರ ಭಟ್ ಅವರ ‘ಪಾಠ’ ದೀರ್ಘವಾಗಿದೆ. ‘ತನುಜಾ’ಳ ಕನಸು, ಆಕೆಯ ಶಿಕ್ಷಣದ ಹಾದಿ, ತಾಯಿ ಹಿರಿಯಮ್ಮಳ ಬೆಂಬಲವನ್ನು ಮೊದಲಾರ್ಧ ಕಟ್ಟಿಕೊಟ್ಟಿದೆ. ತನುಜಾ ಹೇಗಾದರೂ ಪರೀಕ್ಷೆ ಬರೆಯಲೇಬೇಕು ಎಂದು ಆಕೆಯ ಉಪನ್ಯಾಸಕ ‘ಪ್ರದೀಪ್ ಈಶ್ವರ್’ ಪಡುವ ಶ್ರಮವೂ ಇಲ್ಲಿ ಚಿತ್ರಣಗೊಂಡಿದೆ. ಹೀಗಾಗಿ ಮೊದಲಾರ್ಧಕ್ಕೆ ವೇಗವಿದೆ. ಆದರೆ ಪ್ರೇಕ್ಷಕನ ತಾಳ್ಮೆ ಪರೀಕ್ಷೆಯಾಗುವುದು ದ್ವಿತೀಯಾರ್ಧದಲ್ಲಿ. ‘ತನುಜಾ’ಳ ಶಿವಮೊಗ್ಗ–ಬೆಂಗಳೂರು ಪ್ರಯಾಣವನ್ನೇ ನಿರ್ದೇಶಕರು ದೀರ್ಘವಾಗಿ ಇಲ್ಲಿ ತೆರೆಗಿಳಿಸಿದ್ದಾರೆ. ಇಲ್ಲಿ ಹಲವು ದೃಶ್ಯಗಳಿಗೆ ಕತ್ತರಿ ಹಾಕಿ, ಕ್ಲೈಮ್ಯಾಕ್ಸ್‌ನ್ನು ಇನ್ನೂ ರೋಚಕವಾಗಿಸಬಹುದಿತ್ತು.

ನಟನೆಯ ವಿಚಾರಕ್ಕೆ ಬಂದರೆ, ‘ತನುಜಾ’ಳಾಗಿ ಸಪ್ತಾ ಪಾವೂರು ಹಾಗೂ ತನುಜಾಳ ತಾಯಿ ‘ಹಿರಿಯಮ್ಮ’ನ ಪಾತ್ರದಲ್ಲಿ ಸಂಧ್ಯಾ ಅರಕೆರೆ ಜೀವಿಸಿದ್ದಾರೆ. ರಾಜೇಶ್ ನಟರಂಗ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಸಚಿವ ಸುಧಾಕರ್ ಅವರ ಪಾತ್ರದ ಬರವಣಿಗೆ ಹಾಗೂ ಸಂಭಾಷಣೆಗೆ ಹೆಚ್ಚಿನ ಗಮನಹರಿಸಬೇಕಿತ್ತು. ಒಟ್ಟಿನಲ್ಲಿ ಪರೀಕ್ಷೆಗಳ ಹೊಸ್ತಿಲಲ್ಲಿ ಬಂದಿರುವ ಈ ಚಿತ್ರ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಬಲ್ಲದು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಿನಿಮಾ ಮಂದಿರದಲ್ಲಿ ಹಲವು ಜನರು ಪರಸ್ಪರ ಹೊಡೆದಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸಿನಿಮಾ ಮಂದಿರದಲ್ಲಿ ‘ಪಠಾಣ್’ ಸಿನಿಮಾದ ಪೋಸ್ಟರ್ ಇರುವುದು ಆ ದೃಶ್ಯದಲ್ಲಿ ಕಾಣುತ್ತದೆ. ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ಈ ವಿಡಿಯೊ ಹೆಚ್ಚಿನ ಸಂಖ್ಯೆಯಲ್ಲಿ ಹಂಚಿಕೆಯಾಗಿದೆ. ‘ಶಾರುಕ್ ಖಾನ್ ಅಭಿಮಾನಿಗಳು ಬಜರಂಗ ದಳದ ಕಾರ್ಯಕರ್ತರಿಗೆ ಹೊಡೆಯುತ್ತಿದ್ದಾರೆ’ ಎಂದು ಈ ವಿಡಿಯೊಗೆ ಅಡಿಬರಹ ನೀಡಲಾಗಿದೆ. ಆದರೆ, ಈ ಅಡಿಬರಹದಲ್ಲಿ ನೀಡಿರುವ ಮಾಹಿತಿ ಸುಳ್ಳು.



‘ಇದು ಸುಳ್ಳು ಸುದ್ದಿ. ಉತ್ತರ ಪ್ರದೇಶದ ಅಮ್ರೋಹಾದಲ್ಲಿನ ಮಧು ಸಿನಿಮಾ ಮಂದಿರದಲ್ಲಿ ಈ ವಿಡಿಯೊವನ್ನು ಜನವರಿ 26ರಂದು ಚಿತ್ರೀಕರಿಸಲಾಗಿದೆ. ಸಿನಿಮಾ ಮಂದಿರದಲ್ಲಿ ಮುಂಗಡವಾಗಿ ಕಾಯ್ದಿರಿಸಿದ್ದರೂ, ತಂಪು ಪಾನೀಯವನ್ನು ನೀಡಿಲ್ಲ ಎಂದು ಕೆಲವು ಮಂದಿಯ ಗುಂಪು ಸಿಬ್ಬಂದಿ ಜತೆಗೆ ಆಕ್ಷೇಪ ಎತ್ತಿತ್ತು. ಆಗ ಬೇರೊಂದು ಗುಂಪಿಗೆ ನೀಡಲು ತಂದಿದ್ದ ತಂಪು ಪಾನೀಯವನ್ನು ಮೊದಲ ಗುಂಪಿಗೆ ನೀಡಲಾಗಿತ್ತು. ಆಗ ಎರಡೂ ಗುಂಪಿನ ಮಧ್ಯೆ ಹೊಡೆದಾಟ ನಡೆದಿತ್ತು. ಈ ಬಗ್ಗೆ ‘ಆಜ್‌ತಕ್’ ವರದಿ ಮಾಡಿದೆ. ಅಮ್ರೋಹಾ ಡಿಎಸ್‌ಪಿ ವಿಜಯ್ ಕುಮಾರ್ ರಾಣಾ ಅವರೂ ಇದನ್ನು ದೃಢಪಡಿಸಿದ್ದಾರೆ’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಅನಾಸಕ್ತಿಯೋಗ

ನ್ಯಾಯಾಧಿಪತಿ ತನ್ನ ಮತಿ ಮನಸುಗಳನೆಲ್ಲ |
ಸ್ವೀಯಲಾಭಸ್ಮರಣೆಯುಳಿದು ವಿವದಿಗಳಾ - ||
ದಾಯ ನಿರ್ಣಯಕೆ ಯೋಜಿಸುವಂತೆ, ನೀಂ ಜಗದ |
ಶ್ರೇಯಸ್ಸಿಗುಜ್ಜುಗಿಸು – ಮಂಕುತಿಮ್ಮ || 814 ||

ಪದ-ಅರ್ಥ: ಸ್ವೀಯಲಾಭಸ್ಮರಣೆಯುಳಿದು = ಸ್ವೀಯ(ಸ್ವಂತದ) + ಲಾಭ + ಸ್ಮರಣೆ + ಉಳಿದು, ವಿವದಿಗಳಾದಾಯನಿರ್ಣಯಕೆ = ವಿವದಿಗಳ (ವಾದಿ, ಪ್ರತಿವಾದಿಗಳ) + ಆದಾಯ + ನಿರ್ಣಯಕೆ, ನೀಂ = ನೀನು, ಶ್ರೇಯಸ್ಸಿಗುಜ್ಜುಗಿಸು = ಶ್ರೇಯಸ್ಸಿಗೆ + ಉಜ್ಜುಗಿಸು (ಉದ್ಯೋಗಿಸು, ಕಾರ್ಯಮಾಡು).

ವಾಚ್ಯಾರ್ಥ: ಒಬ್ಬ ಸಮರ್ಥ ನ್ಯಾಯಾಧಿಪತಿ ತನ್ನ ಬುದ್ಧಿ, ಮನಸ್ಸುಗಳನ್ನೆಲ್ಲ, ವಾದಿ, ಪ್ರತಿವಾದಿಗಳ ಆದಾಯ ನಿರ್ಣನೆಗೆ ತೊಡಗಿಸುವಾಗ ಹೇಗೆ ತನ್ನ ಸ್ವಂತದ ಲಾಭವನ್ನು ಚಿಂತಿಸುವುದಿಲ್ಲವೋ, ಹಾಗೆಯೇ ನೀನು ಜಗತ್ತಿನ ಶ್ರೇಯಸ್ಸಿಗಾಗಿ ದುಡಿ.

ವಿವರಣೆ: ಕಗ್ಗ ಒಂದು ಸುಂದರ ಸಂದರ್ಭವನ್ನು ತಂದು ನಮ್ಮ ಮುಂದೆ ಇಡುತ್ತದೆ. ನ್ಯಾಯಾಲಯದಲ್ಲಿ ಒಬ್ಬ ನ್ಯಾಯಾಧೀಶರ ಮುಂದೆ ಒಂದು ವ್ಯಾಜ್ಯ ಬಂದಿದೆ. ವಾದಿಗಳು, ಪ್ರತಿವಾದಿಗಳು ತಮ್ಮ ವಾದ ಮಂಡನೆ ಮಾಡಿದ್ದಾರೆ. ಜಗಳ ಬಂದಿರುವುದು ಒಂದು ಆಸ್ತಿಗಾಗಿ, ಆ ಆಸ್ತಿಯ ಬೆಲೆ ತುಂಬ ದೊಡ್ಡದು. ಸಾವಿರಾರು ಕೋಟಿ ಇದ್ದಿರಬಹುದು. ಆಗ ಸಮರ್ಥ ನ್ಯಾಯಾಧೀಶ ಏನು ಯೋಚಿಸುತ್ತಾನೆ? ತನ್ನ ತೀರ್ಪಿನಿಂದ ಯಾರಿಗೆ ಎಷ್ಟು ಲಾಭ ಅಥವಾ ಹಾನಿಯಾಗಬಹುದು? ಅದರಿಂದ ಅವರು ಏನು ಮಾಡಿಯಾರು? ಈ ತೀರ್ಪಿನಿಂದ ನನಗೇನಾದರೂ ಲಾಭವಾಗಬಹುದೆ? ಅವನು ಸಮರ್ಥನಾದ್ದರಿಂದ ಹೀಗೆಲ್ಲ ಯೋಚಿಸಲಾರ. ಅವನ ಗಮನ, ಬುದ್ಧಿಯ ಹರಿತತೆ ಏಕತ್ವವಾಗಿರುವುದು ನ್ಯಾಯದ ಕಡೆಗೆ. ನ್ಯಾಯವಾದದ್ದನ್ನು ಎತ್ತಿ ಹಿಡಿಯುವುದು ಅವನ ಕಾರ್ಯ. ತನ್ನ ವೈಯಕ್ತಿಕ ಲಾಭದ ಚಿಂತೆ ಬರಲಾರದು. ಬ್ಯಾಂಕಿನಲ್ಲಿ ಕ್ಯಾಶಿಯರ್ ಕೆಲಸವೂ ಹಾಗೆಯೇ ಅಲ್ಲವೆ? ಯಾರೋ ಕೋಟಿ ರೂಪಾಯಿಯನ್ನು ತಮ್ಮ ಖಾತೆಗೆ ಜಮಾ ಮಾಡುತ್ತಾರೆ. ಮತ್ತಾರೋ ತಮ್ಮ ಖಾತೆಯಿಂದ ಲಕ್ಷಾಂತರ ರೂಪಾಯಿಗಳನ್ನು ತೆಗೆಯುತ್ತಾರೆ. ಇಡೀ ದಿನ ನೋಟುಗಳ ಮಧ್ಯೆಯೇ ಇದ್ದರೂ, ಎಣಿಸಿ ಎಣಿಸಿ ನೋಡಿದರೂ, ಸಂಜೆಗೆ ಮನೆಗೆ ಹೊರಡುವಾಗ ಕೈಝಾಡಿಸಿಕೊಂಡು ಎಲ್ಲವನ್ನೂ ಅಲ್ಲಿಯೇ ಬಿಟ್ಟು ಹೊರಡಬೇಕು. ಯಾಕೆಂದರೆ ಹಣ ತನ್ನದಲ್ಲ. ಈ ಮನೋಭಾವ ಬಹಳ ಮುಖ್ಯ. ವಿವೇಕಾನಂದರು ಹೇಳುತ್ತಾರೆ, “ಮನುಷ್ಯ ಸಮಾಜಕಾರ್ಯ ಮಾಡುವಾಗ ಯಂತ್ರದಂತಿರಬೇಕು. ಯಂತ್ರ ಎಷ್ಟೊಂದು ಕೆಲಸ ಮಾಡುತ್ತದೆ. ಆದರೆ ಅದರಲ್ಲಿ ‘ನಾನು ಮಾಡುತ್ತೇನೆ’ ಎಂಬ ಭಾವ ಇರುವುದಿಲ್ಲ. ಆದರೆ ಯಂತ್ರದಲ್ಲಿ ಅರಿವು ಇಲ್ಲ. ನಿಷ್ಕಾಮಕರ್ಮಿಯಾದ ಮನುಷ್ಯನಲ್ಲಿ ಅರಿವೇ ತುಂಬಿಕೊಂಡಿದೆ”. ಇದೇ ಅನಾಸಕ್ತಿಯೋಗ. ಇದರಲ್ಲಿ ಕಾರ್ಯದಲ್ಲಿ ಆಸಕ್ತಿ ಇದೆ, ಆದರೆ ವೈಯಕ್ತಿಕ ಲಾಭದಲ್ಲಿ ಆಸಕ್ತಿ ಇಲ್ಲ. ಶ್ರೀ ರಾಮಕೃಷ್ಣರು ಹೇಳುತ್ತಿದ್ದರು, “ಹಲಸಿನ ಹಣ್ಣನ್ನುಹೆಚ್ಚುವಾಗ ಕೈಗೆ ಎಣ್ಣೆ ಸವರಿಕೊಂಡರೆ ಅಂಟು ಮೆತ್ತಿಕೊಳ್ಳುವುದಿಲ್ಲ. ಅಂತೆಯೇ ಅನಾಸಕ್ತಿ ಎಂಬ ಎಣ್ಣೆಯನ್ನು ಮನಸ್ಸಿಗೆ ಹಚ್ಚಿಕೊಂಡರೆ ಯಾವ ಕರ್ಮವೂ ಬಂಧನವಾಗುವುದಿಲ್ಲ”.ಕಗ್ಗ ಹೇಳುತ್ತದೆ, ನ್ಯಾಯಾಧೀಶ ಹೇಗೆ ಸ್ವಂತ ಲಾಭದಆಸೆ ಇಲ್ಲದೆ ಕೇವಲ ನ್ಯಾಯನಿರ್ಣಯಕ್ಕಾಗಿ ತನ್ನ ಮನಸ್ಸು,ಬುದ್ಧಿಗಳನ್ನು ಸಂಪೂರ್ಣವಾಗಿ ಬಳಸುತ್ತಾನೋ ಹಾಗೆಯೇ ನೀನು ಜಗತ್ತಿನ ಶ್ರೇಯಸ್ಸಿಗಾಗಿ, ನಿಷ್ಕಾಮಕರ್ಮವನ್ನು ಮಾಡು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಫೆಬ್ರುವರಿ 3, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ತ್ರಯೋದಶಿ ಗಂ. 18-58, ನಕ್ಷತ್ರ: ಪುನರ್ವಸು ಅಹೋರಾತ್ರ ಯೋಗ: ವಿಷ್ಕಂಭ ಗಂ 13-01, ಕರಣ: ತೈತಿಲ ಗಂ. 18-58, ಮಕರ ಮಾಸದ 20 ನೇ ದಿನ.
ರಾಹುಕಾಲ: ಬೆಳಿಗ್ಗೆ 10-30–12-00
ಸೂರ್ಯೋದಯ: 07-00 **ಸೂರ್ಯಾಸ್ತ:** 06-28 **ಮುಸ್ಲಿಂ ದಿನಾಂಕ:** 11 ರಜಬ್
ದಿನ ವಿಶೇಷ: ಮರುಭೂಮಿ ಉತ್ಸವ- 3 ದಿನಗಳು (ಜೈಸಲ್ಮೇರ್), ಅದೃಷ್ಟ ಸಂಖ್ಯೆ : 4, 7

ಮೇಷ: ವ್ಯಾಪಾರದ ಚತುರತೆಯಿಂದ ಧನ ಲಾಭ ಆಗುತ್ತದೆ. ಮನೆಯಲ್ಲಿ ನಡೆಯಬೇಕಿರುವ ಶುಭ ಕಾರ್ಯಕ್ಕೆ ಬಂಧುಗಳ ಆಗಮನವು ಸಂತೋಷವನ್ನು ಸೃಷ್ಟಿಸಲಿದೆ. ಪರರಿಗೆ ವಂಚಿಸುವುದು ಅಭಿವೃದ್ಧಿಗೆ ಅಡ್ಡಿಮಾಡುತ್ತದೆ.

ವೃಷಭ: ಸಮಾಜದಲ್ಲಿ ಗೌರವ ಹೆಚ್ಚಿಸಿಕೊಳ್ಳುವ ಘಟನೆ ನಡೆಯಲಿದೆ. ವಿರೋಧದ ನಡುವೆ ಕಾರ್ಯ ಸಾಧನೆ ಮಾಡಿದ ಹೆಮ್ಮೆ ಇರಲಿದೆ. ಅಶಾಂತಿ ವಾತಾವರಣದಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ಎದುರಾಗಬಹುದು.

ಮಿಥುನ: ಸಹವರ್ತಿಗಳಲ್ಲಿ ಸಲಹೆ ಸಹಕಾರಗಳನ್ನು ಕೋರುವಿರಿ. ಹೆಂಡತಿಗೆ ಹೊಸ ಉದ್ಯೋಗ ದೊರೆತು ಸಂತೋಷವಾಗುವುದು. ದೈಹಿಕ ಕೆಲಸವನ್ನು ಮಾಡಿ ದುಡಿಮೆ ಮಾಡುತ್ತಿರುವವರು ದೇಹಕ್ಕೆ ವಿಶ್ರಾಂತಿ ನೀಡಬೇಕಾಗುತ್ತದೆ.

ಕರ್ಕಾಟಕ: ಈ ದಿನ ತಾಯಿಯ ಅಥವಾ ಬಾಳ ಸಂಗಾತಿಯ ಮಾತನ್ನು ಮೀರದಿರುವುದು ಲೇಸು. ಸಾಮಾಜಿಕ ಕೆಲಸಗಳಲ್ಲಿ ಪರಿಶ್ರಮ ಸಾರ್ಥಕವಾಗಲಿದೆ. ವಿದ್ಯುತ್ ಸ್ಥಾವರ ಕಾರ್ಮಿಕರು ವಿದ್ಯುತ್ ಶಕ್ತಿಯ ಬಳಕೆಯಲ್ಲಿ ಗಮನವಿರಲಿ.

ಸಿಂಹ: ಜಮೀನು ಖರೀದಿ ಅಥವಾ ಜಮೀನಿನ ಗುತ್ತಿಗೆಯಂತಹ ವ್ಯವಹಾರಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೇ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ.

ಕನ್ಯಾ: ಶ್ರೀ ಲಕ್ಷ್ಮಿ ವೆಂಕಟರಮಣ ದೇವರ ದರ್ಶನದಿಂದ ಪ್ರಾರಂಭಿಸಿ. ಕೆಲಸ ಕಾರ್ಯಗಳಲ್ಲಿ ಪ್ರಗತಿ ಕಾಣುವಿರಿ. ಬಂಧುಗಳಲ್ಲಿ ವ್ಯವಹರಿಸಿದ ಸಾಲ ಮರುಪಾವತಿ ಮಾಡುವ ಬಗ್ಗೆ ಗಮನಕೊಡಿ.

ತುಲಾ: ಪ್ರವಾಸೋದ್ಯಮ ಮತ್ತು ಸಾರಿಗೆ ಸಂಸ್ಥೆಯವರಿಗೆ ಉತ್ತಮ ವ್ಯವಹಾರ ಪ್ರಾಪ್ತಿಯಾಗುವುದು. ತಾಂತ್ರಿಕ ಕ್ಷೇತ್ರದಲ್ಲಿ ನೂತನ ಉದ್ಯೋಗ ಸಂಪಾದನೆಗೆ ಹೊರಟಂತಹ ವ್ಯಕ್ತಿಗಳಿಗೆ ಈ ದಿನ ಅಭಿವೃದ್ಧಿದಾಯಕ ಅನಿಸಲಿದೆ.

ವೃಶ್ಚಿಕ: ಸರ್ಕಾರಿ ನೌಕರರಿಗೆ ಈ ದಿನ ಸುಯೋಗವೆಂದು ಹೇಳಬಹುದು. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ.

ಧನು: ಅಬಕಾರಿ ಮತ್ತು ಕಂದಾಯ ಇಲಾಖೆಯವರಿಗೆ ಉದ್ಯೋಗದಲ್ಲಿ ಹೆಸರು, ಕೀರ್ತಿಗಳನ್ನು ಕಾಪಾಡಿಕೊಳ್ಳಲು ಕಷ್ಟವಾಗಲಿದೆ. ಪ್ರಾಮಾಣಿಕವಾಗಿ ದೇವರು ಮೆಚ್ಚುವ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವುದು ಉತ್ತಮ.

ಮಕರ: ಜೀವನದಲ್ಲಿ ಸ್ಥಿರತೆ ಹಾಗೂ ಅಭಿವೃದ್ಧಿ ಸಾಧಿಸುವ ದಿನವೆನಿಸಲಿದೆ. ಸಮಾಲೋಚಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತ. ಸಿಹಿತಿಂಡಿ ತಯಾರು ಮಾಡಿ ಮಾರಾಟ ಮಾಡುವವರಿಗೆ ಬೇಡಿಕೆ ಹೆಚ್ಚುವುದು.

ಕುಂಭ: ಮಕ್ಕಳ ವಿದ್ಯಾಭ್ಯಾಸ ಹಾಗು ಅವರ ದಿನಚರಿಯ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗುವುದು. ರಾಜಕೀಯವಾಗಿ ಒದಗಿಬರಲಿರುವ ಅಧಿಕಾರದ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ.


ಮೀನ: ಬಹುದಿನಗಳ ನಿರಂತರ ಔಷಧಿ ಸೇವನೆಯ ನಂತರ ರೋಗ ನಿವಾರಣೆಯಾಗಿ ಆರೋಗ್ಯ ಉತ್ತಮ ಸ್ಥಿತಿಗೆ ಬರುವುದು.ನೂತನ ಯೋಜನೆಗೆ ತಂದೆ- ತಾಯಿಯ ಮೂಲಕ ಆರ್ಥಿಕ ಸಹಾಯ ಸಿಗುವುದು.

ಪದಬಂಧ 5219

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಾಜಸಭೆಗೆ ಸಂಬಂಧಿಸಿದ ವ್ಯಕ್ತಿ (4)
3.ಕಾಡಿನ ಮಧ್ಯಭಾಗವಿದು (4)
5.ವಿಷ್ಣುವಿನ ದಶಾವತಾರಗಳಲ್ಲಿ ಮೂರನೆಯದು (3)
6.ವಾರದಲ್ಲಿ ಧರಿಸಿರುವ ಯಜ್ಞೋಪವೀತ (4)
8.ದೊಡ್ಡ ಗಾತ್ರದ ಜಲಚರ (4)
10.ಮಧುರವಾದ ಧ್ವನಿ (4)
12.ಹಿಂದಿನ ಕಾಲದ ಶಿಕ್ಷಣ ಕೇಂದ್ರ (4)
13.ಮುಂಗುಸಿ ಇಲ್ಲಿದೆ (3)
16.ಓಡುತ್ತಾ ಹೋಗಿ ಸುದ್ದಿಯನ್ನು ಮುಟ್ಟಿಸುವವನು (4)
17.ಇಂದ್ರಿಯಗಳನ್ನು ಜಯಿಸಿದವನು (4)

ಮೇಲಿಂದ ಕೆಳಕ್ಕೆ
1.ಆ ರಸ್ತೆಯಲ್ಲಿಯೇ ಮೂಡಿದ ಪ್ರೀತಿಯನ್ನು ಹುಡುಕಿ! (2)
2.ಕರಲ್ಲಿರುವ ಚಿನ್ನ (4)
3.ಉಗುರಿನಿಂದಾದ ಗಾಯ (4)
4.ವಿಷಯದಲ್ಲಿರುವ ನಂಜು (2)
7.ಉಪಯೋಗಕ್ಕೆ ಬಾರದುದು (3)
9.ಒಣಗಿದ ಕೊಬ್ಬರಿ (3)
11.ವರವನ್ನು ಪಡೆದಿರುವ ಬೇಡ (4)
12.ಗಂಜಿಯಿರುವ ಒಂದು ಬೀಜ (4)
14.ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)
15.ಸಂಗೀತ ಹಾಗೂ ನೃತ್ಯಗಳಲ್ಲಿಯ ಗತಿ (2)



5218ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಧನಸಹಾಯ 3.ಕೈಲಾಸ
5.ನಿರಪರಾಧಿ 8.ಅವ್ಯಯ
9.ಹೊಸಜೀವನ 12.ಅಗುಳು
13.ಜನನಾಯಕ 16.ನಿಕ್ಷೇಪ
17.ಏಕೀಕರಣ

ಮೇಲಿಂದ ಕೆಳಕ್ಕೆ:
1.ಧಮನಿ 2.ಸಲ್ಲಾಪ
4.ಸಮಯ 6.ರತಿ
7.ರಾಕ್ಷಸ 8.ಅಶನ
9.ಹೊಕ್ಕುಳು 10.ವದನ
11.ಭಯ 12.ಅವನಿ
14.ನಾಸಿಕ 15.ಕಲ್ಯಾಣ

ಸುಡೊಕು 5605

		7		6			1	2
			5		2	3		
6		2		4		7		8
	7				9			
5		9		1			3	7
	6		7					4
2		3	8		4			
		6		2				9
8	1		6		7	4		3


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5604 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಷೇರುಪೇಟೆ ವಹಿವಾಟು 224



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,662
ಇಂದಿನ ಅಂತ್ಯ	17,610
▼	52
ದಿನದ ಕನಿಷ್ಠ	17,445

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1160 (1170)
ಸೂರ್ಯಕಾಂತಿ (ರಿಫೈನ್ಡ್)	₹1180 (1180)
ಪಾಮೋಲಿನ್	₹918 (930)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹138.50
ಆರ್‌ಎಸ್‌ಎಸ್-5 ₹134
ಗುಡ್ ಲಾಟ್ ₹129

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹515-682
ದ್ವಿತಳಿ (ಬಿ.ವಿ) ₹555-812

ರೂಪಾಯಿ ಇಳಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ 40 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹82.20ಕ್ಕೆ ತಲುಪಿತು.

‘ಮಾರುಕಟ್ಟೆ ಅಸ್ಥಿರತೆ ಎಫ್‌ಪಿಒ ಹಿಂಪಡೆಯಲು ಕಾರಣ’

ನವದೆಹಲಿ (ಪಿಟಿಐ): ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವರದಿ ಪ್ರಕಟವಾದ ನಂತರದಲ್ಲಿ ಇದೇ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದು, ‘ಮಾರುಕಟ್ಟೆಯಲ್ಲಿನ ಅಸ್ಥಿರತೆಯ ಕಾರಣದಿಂದಾಗಿ ಅದಾನಿ ಎಂಟರ್‌ಪ್ರೈಸಸ್‌ನ ಎಫ್‌ಪಿಒ ಹಿಂಪಡೆಯಲಾಗಿದೆ’ ಎಂದು ಹೇಳಿದ್ದಾರೆ.

‘ಎಫ್‌ಪಿಒ ಹಿಂಪಡೆಯುವ ನಿರ್ಧಾರವು ಹಲವರಲ್ಲಿ ಆಶ್ಚರ್ಯ ಮೂಡಿಸಿರಬಹುದು. ಆದರೆ ಮಾರುಕಟ್ಟೆಯಲ್ಲಿ ಇರುವ ಅಸ್ಥಿರತೆಯನ್ನು ಗಮನಿಸಿ, ಎಫ್‌ಪಿಒ ಪ್ರಕ್ರಿಯೆ ಮುಂದುವರಿಸುವುದು ನೈತಿಕವಾಗಿ ಸರಿಯಲ್ಲ ಎಂದು ಕಂಪನಿಯ ಆಡಳಿತ ಮಂಡಳಿ ತೀರ್ಮಾನಿಸಿತು’ ಎಂದು ಗೌತಮ್ ಅದಾನಿ ಅವರು ಹೂಡಿಕೆದಾರರನ್ನು ಉದ್ದೇಶಿಸಿ ವಿಡಿಯೊ ಸಂದೇಶದಲ್ಲಿ ಹೇಳಿದ್ದಾರೆ.

ಎಫ್‌ಪಿಒ ಮೂಲಕ ಷೇರನ್ನು ₹ 3,112–3,276ರ ದರದಲ್ಲಿ ಮಾರಾಟ ಮಾಡಲು ತೀರ್ಮಾನಿಸಲಾಗಿತ್ತು. ಆದರೆ, ಮಾರುಕಟ್ಟೆಯಲ್ಲಿ ಷೇರಿನ ಬೆಲೆಯು ಇದಕ್ಕಿಂತ ಕಡಿಮೆ ಇದೆ. ಇದರಿಂದಾಗಿ ಎಫ್‌ಪಿಒ ಮೂಲಕ ಹೂಡಿಕೆ ಮಾಡುವವರು ತಮಗೆ ಅನ್ಯಾಯವಾಗಿದೆ ಎಂದು ಭಾವಿಸುವ ಸಾಧ್ಯತೆ ಇದೆ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು ಎಂದು ಆಡಳಿತ ಮಂಡಳಿಯ ಮೂಲಗಳು ಹೇಳಿವೆ.

‘ಉದ್ಯಮಿಯಾಗಿ ನಾಲ್ಕು ದಶಕಗಳಿಗೂ ಹೆಚ್ಚಿನ ಅವಧಿಯ ನನ್ನ ಪಯಣದಲ್ಲಿ ಎಲ್ಲ ಭಾಗೀದಾರರಿಂದ ಬೆಂಬಲ ನನಗೆ ಸಿಕ್ಕಿದೆ. ನನಗೆ ನನ್ನ ಹೂಡಿಕೆದಾರರ ಹಿತಾಸಕ್ತಿಯು ಅತ್ಯಂತ ಹೆಚ್ಚು ಮಹತ್ವದ್ದು, ಇನ್ನುಳಿದವೆಲ್ಲವೂ ನಂತರದವು. ಹೀಗಾಗಿ ಹೂಡಿಕೆದಾರರಿಗೆ ಆಗಬಹುದಾದ ನಷ್ಟವನ್ನು ತಡೆಯಲು ನಾವು ಎಫ್‌ಪಿಒ ಹಿಂಪಡೆದಿದ್ದೇವೆ’ ಎಂದು ಗೌತಮ್ ಅದಾನಿ ತಿಳಿಸಿದ್ದಾರೆ.

ಎಫ್‌ಪಿಒ ಹಿಂದಕ್ಕೆ ಪಡೆಯುವ ತೀರ್ಮಾನವು ಸಮೂಹದ ಈಗಿನ ಚಟುವಟಿಕೆಗಳ ಮೇಲೆ ಹಾಗೂ ಭವಿಷ್ಯದ ಯೋಜನೆಗಳ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ನಮ್ಮ ಕಂಪನಿಯ ಮೂಲಭೂತ ಹಣಕಾಸಿನ ಸ್ಥಿತಿ ಗಟ್ಟಿಯಾಗಿದೆ. ಸಾಲಗಳನ್ನು ತೀರಿಸುವ ವಿಚಾರದಲ್ಲಿ ನಮ್ಮ ಹಿನ್ನೆಲೆಯು ದೋಷರಹಿತವಾಗಿದೆ’ ಎಂದು ಅವರು ವಿವರಿಸಿದ್ದಾರೆ. ಬಂಡವಾಳ ಮಾರುಕಟ್ಟೆಗಳಲ್ಲಿ ಸ್ಥಿರತೆ ಕಂಡುಬಂದ ನಂತರದಲ್ಲಿ ಷೇರು ಮಾರಾಟದ ಬಗ್ಗೆ ಮತ್ತೆ ಆಲೋಚನೆ ನಡೆಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಎಫ್‌ಪಿಒ ಸಂದರ್ಭದಲ್ಲಿ ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಆರಂಭಿಕ ಹೂಡಿಕೆದಾರರ ವಿಭಾಗದಲ್ಲಿ ಹೂಡಿಕೆ ಮಾಡಿತ್ತು.

₹ 60 ಸಾವಿರ ದಾಟಿದ ಚಿನ್ನ

ಒಂದನೇ ಪುಟದಿಂದ

ಈಗಿನ ಪರಿಸ್ಥಿತಿ ಮುಂದುವರಿದರೆ ಚಿನ್ನದ ದರವು 10 ಗ್ರಾಂಗೆ ₹ 62 ಸಾವಿರದಿಂದ ₹ 63 ಸಾವಿರದವರೆಗೂ ಏರಿಕೆ ಆಗಬಹುದು. ದೀರ್ಘಾವಧಿಯಲ್ಲಿ ₹ 68 ಸಾವಿರಕ್ಕೆ ಏರಿಕೆ ಕಾಣುವ ಸಾಧ್ಯತೆಯೂ ಇದೆ. ಜನ ಒಂದೊಮ್ಮೆ ಚಿನ್ನವನ್ನು ಮಾರಿ ಲಾಭ ಗಳಿಸಿಕೊಳ್ಳುವ ಮನಸ್ಸು ಮಾಡಿದರೆ ದರ ತುಸು ಇಳಿಕೆಯಾಗುವ ಸಂಭವ ಇರುತ್ತದೆ ಎಂದು ಅವರು ತಿಳಿಸಿದರು.

ಹಣದುಬ್ಬರ, ಹಣಕಾಸು ಮಾರುಕಟ್ಟೆಯಲ್ಲಿ ಇರುವ ಅಪಾಯಗಳಿಂದಾಗಿ ಚಿನ್ನದ ಗಟ್ಟಿ ಮತ್ತು ನಾಣ್ಯಗಳಿಗೆ ಹೆಚ್ಚು ಬೇಡಿಕೆ ಇರಲಿದೆ. ಚಿನ್ನದ ವಿನಿಮಯ ವಹಿವಾಟು ನಿಧಿ (ಇಟಿಎಫ್) ಮತ್ತೆ ಚೇತರಿಕೆ ಕಂಡುಕೊಳ್ಳುವ ನಿರೀಕ್ಷೆ ಇದೆ ಎಂದು ಎಂದು ಕೋಟಕ್ ಸೆಕ್ಯುರಿಟೀಸ್‌ನ ಉಪಾಧ್ಯಕ್ಷ ರವೀಂದ್ರ ವಿ. ರಾವ್ ಈಚೆಗಷ್ಟೇ ಹೇಳಿದ್ದರು.

ಜಿಗಿದ ಬೆಳ್ಳಿ ದರ: ಬೆಳ್ಳಿ ಧಾರಣೆ ಗುರುವಾರ ಕೆ.ಜಿಗೆ ₹73,100ಕ್ಕೆ ಜಿಗಿದಿದೆ.

ಜನವರಿ 2ರಿಂದ ಫೆಬ್ರುವರಿ 2ರವರೆಗಿನ ಅವಧಿಯಲ್ಲಿ ಬೆಳ್ಳಿ ದರ ಕೆ.ಜಿಗೆ ₹ 2,800ರಷ್ಟು ಹೆಚ್ಚಾಗಿದೆ. ಒಂದು ವರ್ಷದ ಅವಧಿಯಲ್ಲಿ ಕೆ.ಜಿಗೆ ₹ 6,800ರಷ್ಟು ಏರಿಕೆ ಆಗಿದೆ.

‘ಹಿಂದುಸ್ತಾನ್ ಜಿಂಕ್‌ನಲ್ಲಿನ ಷೇರು ಮಾರಾಟಕ್ಕೆ ಸಿದ್ಧತೆ’

ನವದೆಹಲಿ (ಪಿಟಿಐ): ಹಿಂದುಸ್ತಾನ್ ಜಿಂಕ್ ಲಿಮಿಟೆಡ್‌ನಲ್ಲಿ (ಎಚ್‌ಜೆಡ್‌ಎಲ್) ಕೇಂದ್ರ ಸರ್ಕಾರವು ಹೊಂದಿರುವ ಷೇರುಗಳಲ್ಲಿ ಕೆಲವೊಂದಿಷ್ಟನ್ನು ಮುಂದಿನ ತಿಂಗಳು ಮಾರಾಟ ಮಾಡುವ ಸಾಧ್ಯತೆ ಇದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ್ ಪಾಂಡೆ ಗುರುವಾರ ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದಿಂದ ₹ 50 ಸಾವಿರ ಕೋಟಿ ಸಂಗ್ರಹಿಸುವ ಪರಿಷ್ಕೃತ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ. ಇದಕ್ಕೆ ಪೂರಕವಾಗಿ ಈ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ ₹ 31,100 ಕೋಟಿ ಸಂಗ್ರಹ ಆಗಿದೆ.

ಮುಂಬೈ ಧಾರಣೆ

ಶೇಂಗಾ

2–2-2023

ಜಾವಾ 70/80(ಹೊಸ)	12200-12250
ಜಾವಾ 80/90(ಹೊಸ)	11200-11250
ದಪ್ಪ ಮಧ್ಯಪ್ರದೇಶ(ಹೊಸ)	10550-10650
ದಪ್ಪ ಗುಜರಾತ್(ಹೊಸ)	11650-11750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	10605 (1095)
ಪಾಮ್ ವಾರದ ಡೆಲಿವರಿ	916 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060 (1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	58,550 (57,650)
ಬೆಳ್ಳಿ ಕೆ.ಜಿ	71,550 (69,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಮೂಹದ ಕಂಪನಿಗಳಿಗೆ ₹ 8.76 ಲಕ್ಷ ಕೋಟಿ ನಷ್ಟ

ಅದಾನಿ ಎಂಟರ್‌ಪ್ರೈಸಸ್ ಷೇರು ಶೇ 20 ಕುಸಿತ

ನವದೆಹಲಿ (ಪಿಟಿಐ): ಅದಾನಿ ಎಂಟರ್‌ಪ್ರೈಸಸ್‌ನ ಷೇರು ಮೌಲ್ಯವು ಗುರುವಾರದ ವಹಿವಾಟಿನಲ್ಲಿ ಶೇಕಡ 26ರಷ್ಟು ಕುಸಿತ ಕಂಡಿದೆ. ₹ 20 ಸಾವಿರ ಕೋಟಿ ಮೊತ್ತದ ಷೇರು ಮಾರಾಟ (ಎಫ್‌ಪಿಒ) ಪ್ರಕ್ರಿಯೆಯನ್ನು ರದ್ದು ಮಾಡಲು ಕಂಪನಿಯು ಬುಧವಾರ ನಿರ್ಧರಿಸಿದ ನಂತರದಲ್ಲಿ ಷೇರು ಮೌಲ್ಯದಲ್ಲಿ ಈ ಪ್ರಮಾಣದ ಇಳಿಕೆ ಕಂಡುಬಂತು.

ಮುಂಬೈ ಷೇರುಪೇಟೆಯಲ್ಲಿ ಕಂಪನಿಯು ಷೇರು ಮೌಲ್ಯ ಶೇ 26.50ರಷ್ಟು ಕುಸಿತ ಕಂಡು ಪ್ರತಿ ಷೇರಿನ ಬೆಲೆ ₹ 1,564.70ಕ್ಕೆ ತಲುಪಿದೆ. ದಿನದ ವಹಿವಾಟಿನ ಒಂದು ಹಂತದಲ್ಲಿ ಶೇ 28.88ರಷ್ಟು ಕುಸಿತ ದಾಖಲಿಸಿ ಒಂದು ಷೇರಿನ ಬೆಲೆಯು 52 ವಾರಗಳ ಕನಿಷ್ಠ ಮಟ್ಟವಾದ ₹ 1,513.90ಕ್ಕೆ ಇಳಿಕೆ ಕಂಡಿತ್ತು.

ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ರಿಸರ್ಚ್‌ನ ವರದಿ ಬಿಡುಗಡೆ ಆದ ಬಳಿಕ ಅದಾನಿ ಸಮೂಹದ ಕಂಪನಿಗಳ ವಹಿವಾಟಿನ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಿದೆ. ಸಮೂಹದ ಬಹುತೇಕ ಎಲ್ಲ ಕಂಪನಿಗಳ ಷೇರು ಮೌಲ್ಯವು ಸತತ ಆರನೇ ದಿನವೂ ಇಳಿಕೆ ಕಂಡಿದೆ. ಷೇರುಪೇಟೆಯಲ್ಲಿ ನೋಂದಾಯಿತವಾಗಿರುವ, ಅದಾನಿ ಸಮೂಹದ 10 ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ಆರು ದಿನಗಳ ವಹಿವಾಟಿನಲ್ಲಿ ₹ 8.76 ಲಕ್ಷ ಕೋಟಿಯಷ್ಟು ಕರಗಿದೆ.

ದೇಶದ ಷೇರುಪೇಟೆಗಳ ಮೇಲೆ ಅದಾನಿ ಸಮೂಹದ ಕಂಪನಿಗಳ ಷೇರುಗಳ ಪ್ರತಿಕೂಲ ಪರಿಣಾಮ ಮುಂದುವರಿದಿದೆ ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆಗೆ ಪೂರಕವಾದ ಬಜೆಟ್ ಮಂಡನೆ ಆಗಿದೆ. ಇದರ ಜೊತೆಗೆ ಕಚ್ಚಾ ತೈಲ ದರ ಇಳಿಕೆ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ವಹಿವಾಟು ಏರಿಕೆ ಕಂಡಿದೆ. ಹೀಗಿದ್ದರೂ ಅದಾನಿ ಸಮೂಹದ ವಿರುದ್ಧದ ಆರೋಪದಿಂದಾಗಿ ಹೂಡಿಕೆದಾರರ ಮೇಲೆ ಆಗಿರುವ ನಕಾರಾತ್ಮಕ ಪರಿಣಾಮದಿಂದಾಗಿ ದೇಶಿ ಷೇರುಪೇಟೆಗಳು ಹೆಚ್ಚಿನ ಗಳಿಕೆ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಸಕಾರಾತ್ಮಕ ವಹಿವಾಟು: ದೇಶದ ಷೇರುಪೇಟೆಗಳಲ್ಲಿ ಗುರುವಾರ ಮಿಶ್ರ ವಹಿವಾಟು ನಡೆಯಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 224 ಅಂಶ ಏರಿಕೆ ಕಂಡರೆ, ನಿಫ್ಟಿ 6 ಅಂಶ ಇಳಿಕೆ ಕಂಡಿತು. ಸೆನ್ಸೆಕ್ಸ್‌ನಲ್ಲಿ ಐಟಿಸಿ ಷೇರು ಮೌಲ್ಯ ಶೇ 4.74ರಷ್ಟು ಗರಿಷ್ಠ ಗಳಿಕೆ ಕಂಡಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.29ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 82.78 ಡಾಲರ್‌ನಂತೆ ಮಾರಾಟವಾಯಿತು.

ಷೇರು ಮೌಲ್ಯ ಇಳಿಕೆ (%)

26	ಅದಾನಿ ಎಂಟರ್‌ಪ್ರೈಸಸ್
10	ಅದಾನಿ ಟ್ರಾನ್ಸ್‌ಮಿಷನ್
10	ಅದಾನಿ ಗ್ರೀನ್ ಎನರ್ಜಿ
10	ಅದಾನಿ ಟೋಟಲ್ ಗ್ಯಾಸ್
6.13	ಅದಾನಿ ಪೋರ್ಟ್ಸ್
5	ಅದಾನಿ ವಿಲ್ಮರ್
4.99	ಎನ್‌ಡಿಟಿವಿ
4.98	ಅದಾನಿ ಪವರ್

ಷೇರು ಮೌಲ್ಯ ಹೆಚ್ಚಳ (%)

5.33	ಅಂಬುಜಾ ಸಿಮೆಂಟ್ಸ್
0.05	ಎಸಿಸಿ

(ಗುರುವಾರದ ವಹಿವಾಟಿನಲ್ಲಿ ಆದ ಏರಿಳಿತ)

ಶ್ರೀಮಂತರ ಪಟ್ಟಿ: 16ನೇ ಸ್ಥಾನಕ್ಕೆ ಕುಸಿದ ಅದಾನಿ

ಫೋಬ್ಸ್ ನಿಯತಕಾಲಿಕೆ ಸಿದ್ಧಪಡಿಸುವ ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಉದ್ಯಮಿ ಗೌತಮ್ ಅದಾನಿ ಅವರು ಈಗ ಹದಿನಾರನೆಯ ಸ್ಥಾನಕ್ಕೆ ಕುಸಿದಿದ್ದಾರೆ. ಫೋಬ್ಸ್ ಜಾಲತಾಣದಲ್ಲಿ ಇರುವ ಮಾಹಿತಿ ಪ್ರಕಾರ ಗೌತಮ್ ಅದಾನಿ ಅವರ ಸಂಪತ್ತಿನ ಮೌಲ್ಯ ಈಗ ₹ 5.26 ಲಕ್ಷ ಕೋಟಿ. ಈ ಪಟ್ಟಿಯಲ್ಲಿ ಅದಾನಿ ಅವರು ಸೆಪ್ಟೆಂಬರ್ ತಿಂಗಳಲ್ಲಿ 3ನೇ ಸ್ಥಾನದಲ್ಲಿದ್ದರು.

‘ವಿನಾಯಿತಿ ಇಲ್ಲದ ಆದಾಯ ತೆರಿಗೆ ವ್ಯವಸ್ಥೆ ಸರ್ಕಾರದ ಗುರಿ’

ನವದೆಹಲಿ (ಪಿಟಿಐ): ಸರಳವಾದ ಹಾಗೂ ಯಾವುದೇ ವಿನಾಯಿತಿಗಳು ಇಲ್ಲದ, ಕಡಿಮೆ ತೆರಿಗೆ ದರದ ವ್ಯವಸ್ಥೆಯತ್ತ ನಿಧಾನವಾಗಿ ಸಾಗುವ ಇರಾದೆ ಕೇಂದ್ರ ಸರ್ಕಾರಕ್ಕೆ ಇದೆ ಎಂದು ರೆವಿನ್ಯು ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ತಿಳಿಸಿದ್ದಾರೆ.

ಪ್ರತಿ ವರ್ಷ ₹ 15 ಲಕ್ಷ ಆದಾಯ ಇರುವ ವ್ಯಕ್ತಿ ಬೇರೆ ಬೇರೆ ಸೆಕ್ಷನ್‌ಗಳ ಅಡಿಯಲ್ಲಿ ₹ 3.75 ಲಕ್ಷದವರೆಗೆ ತೆರಿಗೆ ವಿನಾಯಿತಿ ಪಡೆದರೆ ಮಾತ್ರ, ಆತನಿಗೆ ಹಳೆಯ ತೆರಿಗೆ ದರದ ವ್ಯವಸ್ಥೆ ಹೆಚ್ಚು ಪ್ರಯೋಜನಕಾರಿ ಆಗಲಿದೆ. ಇಲ್ಲದಿದ್ದರೆ ಆ ವ್ಯಕ್ತಿಗೆ ಹೊಸ ತೆರಿಗೆ ದರದ ವ್ಯವಸ್ಥೆಯೇ ಅನುಕೂಲ ಆಗಲಿದೆ. ಇಲಾಖೆಯು ಈ ಅಂದಾಜು ಮಾಡಿದೆ.

ಹೊಸ ತೆರಿಗೆ ದರದ ವ್ಯವಸ್ಥೆಯನ್ನು ಕಡ್ಡಾಯ ಮಾಡುವ ವಿಚಾರದಲ್ಲಿ ಸರ್ಕಾರವು ಕಾಲಮಿತಿ ಇರಿಸಿಕೊಂಡಿಲ್ಲ ಎಂದು ಮಲ್ಹೋತ್ರಾ ಹೇಳಿದ್ದಾರೆ. ಹೊಸ ತೆರಿಗೆ ವ್ಯವಸ್ಥೆಯಲ್ಲಿ ₹ 7 ಲಕ್ಷದವರೆಗೆ ವಾರ್ಷಿಕ ಆದಾಯ ಇರುವ ವ್ಯಕ್ತಿ ಆದಾಯ ತೆರಿಗೆ ಪಾವತಿಸಬೇಕಿಲ್ಲ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

ಹೊಸ ತೆರಿಗೆ ದರ ವ್ಯವಸ್ಥೆ ಆಯ್ಕೆ ಮಾಡಿಕೊಂಡವರಿಗೆ ₹ 50 ಸಾವಿರದವರೆಗೆ ಸ್ಟ್ಯಾಂಡರ್ಡ್ ಡಿಡಕ್ಷನ್ ಸೌಲಭ್ಯ ಪಡೆಯುವ ಅವಕಾಶವನ್ನೂ ಕಲ್ಪಿಸಲಾಗಿದೆ. ಹೀಗಾಗಿ, ‘ಹೊಸ ತೆರಿಗೆ ದರ ವ್ಯವಸ್ಥೆಯ ಅಡಿಯಲ್ಲಿ ₹ 7.50 ಲಕ್ಷದವರೆಗೆ ಆದಾಯ ಇರುವವರು ಯಾವುದೇ ತೆರಿಗೆ ಪಾವತಿಸಬೇಕಾಗಿಲ್ಲ’ ಎಂದು ಮಲ್ಹೋತ್ರಾ ತಿಳಿಸಿದ್ದಾರೆ.

₹ 10 ಲಕ್ಷ ಆದಾಯ ಇರುವ ವ್ಯಕ್ತಿ ಹಳೆಯ ತೆರಿಗೆ ವ್ಯವಸ್ಥೆಯಲ್ಲಿ ಇದ್ದರೆ, ಆತ ತೆರಿಗೆ ಉಳಿಸುವ ಉದ್ದೇಶದಿಂದ ವಾರ್ಷಿಕ ₹ 2.62 ಲಕ್ಷ ಹೂಡಿಕೆ ಮಾಡಬೇಕು. ಆಗ ಆತ ತನ್ನಷ್ಟೇ ಆದಾಯ ಸಂಪಾದಿಸುವ, ಹೊಸ ತೆರಿಗೆ ವ್ಯವಸ್ಥೆಯಲ್ಲಿರುವ ವ್ಯಕ್ತಿ ಪಾವತಿಸುವ ತೆರಿಗೆಗೆ ಸಮನಾದ ಆದಾಯ ತೆರಿಗೆ ಪಾವತಿಸಬಹುದು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	700-750
ಹೆರಕಿದ್ದು	1150-1200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1350-1450
ಕಾಳು ಮೆಣಸು	500
ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಕುಮಟ	
ಚಿಪ್ಪು	24309-33089
ಕೋಕ	12100-30699
ಹಳೆಚಾಲಿ	35559-39899
ಹೊಸಚಾಲಿ	33195-35546
ಸಾಗರ	
ಬಿಳಿಗೋಟು	20786-32899
ಚಾಲಿ	31070-39099
ಕೋಕ	23989-33699
ಕೆಂಪುಗೋಟು	23899-37509
ರಾಶಿ	35019-46410
ಶಿವಮೊಗ್ಗ	
ಬೆಟ್ಟೆ	43099-53032
ಗೊರಬಲು	17080-35816
ರಾಶಿ	35599-46509
ಸರಕು	46569-81410
ಸಿದ್ದಾಪುರ	
ಬಿಳಿಗೋಟು	27500-33199
ಚಾಲಿ	38299-40099
ಕೋಕ	26199-32719
ಕೆಂಪುಗೋಟು	32189-33209
ರಾಶಿ	42199-45769
ತಟ್ಟಿಬೆಟ್ಟೆ	36409-39649
ಶಿರಸಿ	
ಬೆಟ್ಟೆ	37707-42299
ಬಿಳಿಗೋಟು	24109-34899
ಚಾಲಿ	33599-41200
ಕೆಂಪುಗೋಟು	28661-33879
ರಾಶಿ	38099-46479
ಯಲ್ಲಾಪುರ	
ಬಿಳಿಗೋಟು	24009-31711
ಹಳೆಚಾಲಿ	35701-40444
ಹೊಸಚಾಲಿ	32899-35211
ಕೋಕ	15562-29868
ಕೆಂಪುಗೋಟು	24899-35009
ರಾಶಿ	43899-53369
ತಟ್ಟಿಬೆಟ್ಟೆ	38290-43419

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14700	14700	14400	175.90 ಸೆಂಟ್ಸ್
ಎಸಿ	7280	7000	6200	
ಆರ್‌ಪಿ	9400	9300	8900	ಲಂಡನ್
ಆರ್‌ಸಿ	4800	180 on OT	4500	2053 ಡಾಲರ್ಸ್

‘ಸಿಗರೇಟ್ ದರ ಬದಲಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಗರೇಟಿನ ಬೆಲೆಯ ಮೇಲೆ ನೇರ ಪರಿಣಾಮ ಬೀರುವ ಯಾವುದೇ ಪ್ರಸ್ತಾವನೆ ಈ ಬಾರಿಯ ಬಜೆಟ್‌ನಲ್ಲಿ ಇಲ್ಲ ಎಂದು ಕರ್ನಾಟಕ ರಾಜ್ಯ ಸಣ್ಣ ಬೀಡಿ – ಸಿಗರೇಟು ಮಾರಾಟಗಾರರ ಸಂಘ ಹೇಳಿದೆ.

ತಂಬಾಕು ಉತ್ಪನ್ನಗಳ ಕಚ್ಚಾ ವಸ್ತುಗಳಿಗೆ ಮಾತ್ರ ತೆರಿಗೆಯನ್ನು ಶೇಕಡ 16ರಷ್ಟು ಹೆಚ್ಚಿಸುವ ಪ್ರಸ್ತಾವ ಬಜೆಟ್‌ನಲ್ಲಿದೆ. ಇದರಿಂದ ಸಿಗರೇಟ್ ಮಾರಾಟ ದರದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ ಎಂದು ಸಂಘದ ಅಧ್ಯಕ್ಷ ಬಿ.ಎನ್. ಮುರಳಿಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಜಿತ್ ಡೊಭಾಲ್, ಆ್ಯಂಟನಿ ಬ್ಲಿಂಕನ್ ದ್ವಿಪಕ್ಷೀಯ ಮಾತುಕತೆ ಫಲಪ್ರದ

ಭಾರತ–ಅಮೆರಿಕ ಸಹಭಾಗಿತ್ವ ವಿಸ್ತರಣೆ

ವಾಷಿಂಗ್ಟನ್ (ಪಿಟಿಐ): ಜಾಗತಿಕ ಮತ್ತು ಪ್ರಾದೇಶಿಕ ಸವಾಲುಗಳನ್ನು ಎದುರಿಸಲು ಭಾರತದೊಂದಿಗೆ ಕಾರ್ಯತಂತ್ರ ಸಹಭಾಗಿತ್ವದ ಸಹಕಾರ ವಿಸ್ತರಣೆಗೆ ಅಮೆರಿಕ ಬದ್ಧವಾಗಿದೆ ಎಂದು ಶ್ವೇತಭವನ ಹೇಳಿದೆ.

ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಜಾಗತಿಕ ಮತ್ತು ಪ್ರಾದೇಶಿಕ ವಿಷಯಗಳಲ್ಲಿ ದ್ವಿಪಕ್ಷೀಯ ಕಾರ್ಯತಂತ್ರದ ಸಹಭಾಗಿತ್ವ ವಿಸ್ತರಿಸಲು ಮಹತ್ವದ ಚರ್ಚೆ ನಡೆಸಿದರು.

ಉನ್ನತಾಧಿಕಾರಿಗಳ ನಿಯೋಗ ಕೊಂಡೊಯ್ದಿರುವ ಡೊಭಾಲ್ ಅವರು ಇಸ್ರೇಲ್, ಈಜಿಪ್ಟ್ ಸೇರಿ ಮಧ್ಯಪ್ರಾಚ್ಯ ದೇಶಗಳ ಪ್ರವಾಸ ಮುಗಿಸಿ ಮರಳಿರುವ ಬ್ಲಿಂಕನ್ ಅವರನ್ನು ಬುಧವಾರ ಭೇಟಿ ಮಾಡಿದರು.

‘ಭಾರತದೊಂದಿಗೆ ನಮ್ಮ ಕಾರ್ಯತಂತ್ರದ ಸಹಭಾಗಿತ್ವ ಗಾಢವಾಗಿಸಲು ಡೋಭಾಲ್ ಅವರೊಂದಿಗೆ ಫಲಪ್ರದ ಸಭೆ ನಡೆಸಲಾಯಿತು. ಜಾಗತಿಕ ಸವಾಲುಗಳನ್ನು ಎದುರಿಸಲು ಭಾರತದೊಂದಿಗೆ ನಮ್ಮ ಸಹಭಾಗಿತ್ವದ ಸಹಕಾರವನ್ನು ಮತ್ತಷ್ಟು ವಿಸ್ತರಿಸುತ್ತಿದ್ದೇವೆ’ ಎಂದು ಬ್ಲಿಂಕನ್ ಸಭೆಯ ನಂತರ ಟ್ವೀಟ್ ಮಾಡಿದ್ದಾರೆ.

ಇದೇ ವೇಳೆ ಡೊಭಾಲ್ ಅವರು ಅಮೆರಿಕ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ಅವರನ್ನು ಭೇಟಿ ಮಾಡಿದರು. ಉಭಯ ನಾಯಕರು ನಡೆಸಿದ ಸಭೆಯಲ್ಲಿ ಉಭಯ ರಾಷ್ಟ್ರಗಳ ನಡುವೆ ನಿರ್ಣಾಯಕ ಮತ್ತು ನವೀನ ತಂತ್ರಜ್ಞಾನದ ಉಪಕ್ರಮಗಳ (ಐಸಿಇಟಿ) ಕಾರ್ಯತಂತ್ರದ ಸಹಭಾಗಿತ್ವ ಹೆಚ್ಚಿಸಲು ನಿರ್ಧರಿಸಿದರು.

ಕೆಲವು ನಿರ್ಣಾಯಕ ವಲಯದಲ್ಲಿನ ರಫ್ತುಗೆ ಇರುವ ಅಡೆತಡೆ ನಿವಾರಿಸಲು ಅಮೆರಿಕದ ಕಡೆಯಿಂದ ಕಾನೂನಾತ್ಮಕ ಬದಲಾವಣೆ ತರುವುದಾಗಿಯೂ ಸುಲ್ಲಿವಾನ್ ಭರವಸೆ ನೀಡಿದರು.

ಪ್ರಜಾಸತ್ತಾತ್ಮಕ ತಂತ್ರಜ್ಞಾನ ಪರಿಸರ ವ್ಯವಸ್ಥೆ (ಡೆಮಾಕ್ರಟಿಕ್ ಟೆಕ್ನಾಲಜಿ ಎಕೊಸಿಸ್ಟಮ್) ರೂಪಿಸಲು ಉಭಯ ರಾಷ್ಟ್ರಗಳಿಗೆ ಐಸಿಇಟಿ ಮಹತ್ವದ ಕೀಲಿಕೈ ಎನ್ನುವುದರಲ್ಲಿ ಅಧ್ಯಕ್ಷ ಜೋ ಬೈಡನ್ ಬಲವಾದ ನಂಬಿಕೆ ಇಟ್ಟಿದ್ದಾರೆ ಎಂದು ಶ್ವೇತಭವನ ಹೇಳಿದೆ.

2022ರ ಮೇನಲ್ಲಿ ಟೋಕಿಯೊದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಜೋ ಬೈಡನ್ ಅವರು ದ್ವಿಪಕ್ಷೀಯ ಮಾತುಕತೆಯಲ್ಲಿ ಘೋಷಿಸಿದ್ದ ಐಸಿಇಟಿ ಕಾರ್ಯಗತಕ್ಕೆ ಮಂಗಳವಾರ ಶ್ವೇತಭವನದಲ್ಲಿ ಡೊಭಾಲ್ ಮತ್ತು ಜೇಕ್ ಸುಲ್ಲಿವಾನ್ ಚಾಲನೆ ನೀಡಿದರು.

ಕಾರ್ಯತಂತ್ರದ ತಂತ್ರಜ್ಞಾನ ಪಾಲುದಾರಿಕೆ, ಜೆಟ್ ಎಂಜಿನ್‌ಗಳು, ಯುದ್ಧಸಾಮಗ್ರಿ ತಯಾರಿಕೆ ಕೇಂದ್ರಿತ ರಕ್ಷಣಾ ಕೈಗಾರಿಕಾ ಸಹಭಾಗಿತ್ವ, ಆರ್ಥಿಕ ವ್ಯವಹಾರಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ನಡುವಿನ ಸಹಕಾರ ವಿಸ್ತರಣೆಗಾಗಿ ಮೋದಿ ಮತ್ತು ಬೈಡನ್ ಐಸಿಇಟಿಯನ್ನು ಘೋಷಿಸಿದ್ದರು.

ಪ್ರಿಡೇಟರ್ ಡ್ರೋನ್ ಖರೀದಿಗೆ ಉತ್ಸುಕ

ಭಾರತವು ವಾಸ್ತವಿಕ ನಿಯಂತ್ರಣ ರೇಖೆ (ಎಲ್‌ಎಸಿ) ಮತ್ತು ಹಿಂದೂ ಮಹಾಸಾಗರದ ಉದ್ದಕ್ಕೂ ಕಣ್ಗಾವಲು ಹೆಚ್ಚಿಸಲು ಸುಮಾರು ₹24,300 ಕೋಟಿ ಮೌಲ್ಯದ ಎಂಕ್ಯೂ -9ಬಿ ಪ್ರಿಡೇಟರ್ ಶಸ್ತ್ರಸಜ್ಜಿತ 30 ಡ್ರೋನ್‌ಗಳನ್ನು ಅಮೆರಿಕದಿಂದ ಖರೀದಿಸುವ ಒಪ್ಪಂದ ಅಂತಿಮ ಹಂತಕ್ಕೆ ಬಂದಿದೆ.

ಒಪ್ಪಂದ ಪೂರ್ಣಗೊಳಿಸಲು ಉಭಯ ರಾಷ್ಟ್ರಗಳು ಉತ್ಸುಕವಾಗಿವೆ. ಐದು ವರ್ಷಗಳಿಗಿಂತ ಹೆಚ್ಚು ಕಾಲ ನಡೆದ ಈ ಪ್ರಕ್ರಿಯೆಯಲ್ಲಿ ‘ಚೆಂಡು ಈಗ ಭಾರತದ ಅಂಗಳದಲ್ಲಿದೆ’ ಎಂದು ಈ ಒಪ್ಪಂದದ ಸಮಗ್ರ ಮಾಹಿತಿ ಹೊಂದಿರುವ ಅಧಿಕಾರಿಗಳು ಬುಧವಾರ ಹೇಳಿದರು.

ಭಾರತೀಯ ಸೇನೆಯ ಮೂರೂ ಪಡೆಗಳಿಗೆ ತಲಾ 10 ಎಂಕ್ಯೂ -9ಬಿ ಪ್ರಿಡೇಟರ್ ಶಸ್ತ್ರಸಜ್ಜಿತ ಡ್ರೋನ್‌ಗಳನ್ನು ಒದಗಿಸುವ ಈ ಒಪ್ಪಂದವು ದೇಶದ ಭದ್ರತೆ ಮತ್ತು ರಕ್ಷಣಾ ಅಗತ್ಯಗಳ ಪ್ರಮುಖ ಭಾಗವೆಂದು ಪರಿಗಣಿಸಲಾಗಿದೆ. ಈ ಒಪ್ಪಂದ ಅಂತಿಮರೂಪಕ್ಕೆ ತರಲು ದೀರ್ಘ ಸಮಯ ತೆಗೆದುಕೊಂಡಿರುವುದಕ್ಕೆ ಅಧಿಕಾರಿಗಳು ನಿಖರ ಕಾರಣ ಬಹಿರಂಗಪಡಿಸಿಲ್ಲ.

ಸಂಕ್ಷಿಪ್ತ ಸುದ್ದಿ

ಬ್ರಿಟನ್ ಪ್ರಧಾನಿಯಾಗಿ 100 ದಿನ ಪೂರೈಸಿದ ಸುನಕ್

ಲಂಡನ್ (ಪಿಟಿಐ): ಭಾರತ ಮೂಲದ ರಿಷಿ ಸುನಕ್ ಅವರು ಬ್ರಿಟನ್ ಪ್ರಧಾನಿಯಾಗಿ ಗುರುವಾರ 100 ದಿನಗಳನ್ನು ಪೂರೈಸಿದ್ದಾರೆ. ಆ ಮೂಲಕ ಈ ಸಾಧನೆ ಮಾಡಿದ ಮೊದಲ ಶ್ವೇತವರ್ಣಿಯೇತರ ಪ್ರಧಾನಿ ಎಂಬ ಹಿರಿಮೆಗೂ ಪಾತ್ರರಾಗಿದ್ದಾರೆ.



ರಿಷಿ ಸುನಕ್

‘ಇತರರು ಬದಲಾವಣೆಯ ಕುರಿತು ಮಾತನಾಡುತ್ತಾರೆ. ನಾನು ಅದನ್ನು ಮಾಡಿ ತೋರಿಸುತ್ತೇನೆ’ ಎಂದು ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಗುರುವಾರ ಬರೆದುಕೊಂಡಿದ್ದಾರೆ.

ಕಳೆದ ವರ್ಷದ ಅಕ್ಟೋಬರ್ 25ರಂದು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದ ಸುನಕ್ ಅವರು ‘ಶತಕದ’ ಹಾದಿಯಲ್ಲಿ ಹಲವು ಸವಾಲುಗಳನ್ನು ಎದುರಿಸಿದ್ದರು.

‘ಹೂಡಿಕೆ ಮೂಲಕ ಭಾರತದ ಜತೆಗಿನ ಸಂಬಂಧ ವೃದ್ಧಿ’

ಲಂಡನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಕುರಿತಾದ ವಿವಾದಾತ್ಮಕ ಸಾಕ್ಷ್ಯಚಿತ್ರದ ವಿರುದ್ಧ ಲಂಡನ್‌ನಲ್ಲಿರುವ ಭಾರತೀಯರು ವ್ಯಾಪಕವಾಗಿ ಪ್ರತಿಭಟನೆ ನಡೆಸಿದ ಬೆನ್ನಲ್ಲೇ ಬ್ರಿಟನ್ ಸರ್ಕಾರವು, ಬಿಬಿಸಿಯು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಸಮರ್ಥಿಸಿಕೊಂಡಿದೆ.

ಸುದ್ದಿಗಾರರ ಪ್ರಶ್ನೆಗೆ ಬುಧವಾರ ಉತ್ತರಿಸಿದ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರ ವಕ್ತಾರ, ‘ಭಾರತ ನಮ್ಮ ಪ್ರಮುಖ ಅಂತರರಾಷ್ಟ್ರೀಯ ಪಾಲುದಾರ ದೇಶವಾಗಿದ್ದು, ಅಲ್ಲಿ ಹೆಚ್ಚು ಹೂಡಿಕೆ ಮಾಡುವುದರ ಮೂಲಕ ಬ್ರಿಟನ್ ಸಂಬಂಧವನ್ನು ಮುಂದುವರಿಸಲಿದೆ’ ಎಂದು ಹೇಳಿದ್ದಾರೆ.

ಅಮೆರಿಕ ಸಂಸದೀಯ ಸಮಿತಿಗೆ 4 ಭಾರತೀಯರು

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ನಾಲ್ವರು ಅಮೆರಿಕನ್ ಸಂಸದರಾದ ಪ್ರಮೀಳಾ ಜಯಪಾಲ್, ಅಮಿ ಬೇರಾ, ರಾಜಾ ಕೃಷ್ಣಮೂರ್ತಿ ಮತ್ತು ರೋ ಖನ್ನಾ ಅವರನ್ನು ಮೂರು ಪ್ರಮುಖ ಸದನ ಸಮಿತಿಗಳ ಸದಸ್ಯರನ್ನಾಗಿ ನೇಮಿಸಲಾಗಿದೆ.

ಪ್ರಮೀಳಾ ಜಯಪಾಲ್ ಅವರನ್ನು ವಲಸೆ ಕುರಿತ ‘ಸದನ ನ್ಯಾಯಾಂಗ ಸಮಿತಿ’ ಸದಸ್ಯರಾಗಿ ನೇಮಿಸಲಾಗಿದೆ. ಅಮಿ ಬೇರಾ ಅವರನ್ನು ಗುಪ್ತಚರ ಸಂಬಂಧಿತ ವಿಷಯಗಳನ್ನು ನಿರ್ವಹಿಸುವ ಸಮಿತಿ ಸದಸ್ಯರಾಗಿ ನೇಮಿಸಲಾಗಿದೆ. ಚೀನಾದ ವಿವಿಧ ನಡವಳಿಕೆಗಳ ಕುರಿತಾದ ಅಂಶಗಳನ್ನು ಪರಿಶೀಲಿಸಲು ಹೊಸದಾಗಿ ರಚಿಸಲಾಗಿರುವ ಅಮೆರಿಕದ ಸಂಸತ್ತಿನ ಸದನ ಸಮಿತಿಯ ರ್‍ಯಾಂಕಿಂಗ್ ಸದಸ್ಯರಾಗಿ ರಾಜಾ ಕೃಷ್ಣಮೂರ್ತಿ ಅವರನ್ನು ನೇಮಿಸಲಾಗಿದೆ. ರೋ ಖನ್ನಾ ಅವರನ್ನೂ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

'ಅಬಕಾರಿ ಗುತ್ತಿಗೆ ಹಗರಣ– ಇ.ಡಿ ಪ್ರಕರಣ ನಕಲಿ'

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ಗುತ್ತಿಗೆ ಹಗರಣ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಪೂರಕ ಚಾರ್ಜ್‌ಶೀಟ್ ತಳ್ಳಿಹಾಕಿರುವ ಎಎಪಿ ಸಂಚಾಲಕ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, 'ಇ.ಡಿ ದಾಖಲಿಸಿರುವ ಈ ಪ್ರಕರಣಗಳು ನಕಲಿ ಮತ್ತು ಈ ಪ್ರಕರಣಗಳನ್ನು ಸರ್ಕಾರ ಉರುಳಿಸಲು ಬಳಸುವ ಹುನ್ನಾರವಾಗಿದೆ' ಎಂದು ಗುರುವಾರ ಆರೋಪಿಸಿದರು.

'ಪ್ರಸ್ತುತ ಸರ್ಕಾರದ ಅಧಿಕಾರಾವಧಿಯಲ್ಲಿ ಇ.ಡಿ 5,000 ಚಾರ್ಜ್ ಶೀಟ್‌ಗಳನ್ನು ಸಲ್ಲಿಸಿದೆ. ಇದರಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗಿದೆ? ಇ.ಡಿ ದಾಖಲಿಸಿದ ಎಲ್ಲ ಪ್ರಕರಣಗಳು ನಕಲಿ ಮತ್ತು ಅವುಗಳನ್ನು ಸರ್ಕಾರಗಳನ್ನು ಉರುಳಿಸಲು ಅಥವಾ ಹೊಸ ಸರ್ಕಾರ ತರಲು ಬಳಸಲಾಗುತ್ತಿದೆ' ಎಂದರು.

'ಸುಪ್ರೀಂ' ಅಸಮಾಧಾನ • ಹಿಂದೂ ಜನ ಆಕ್ರೋಶ ಮೋರ್ಚಾ ರ‍್ಯಾಲಿ ನಿರ್ಬಂಧಿಸುವ ಅರ್ಜಿ

'ದ್ವೇಷ ಭಾಷಣ: ಆದೇಶಕ್ಕೇ ಕಿಮ್ಮತ್ತಿಲ್ಲ'



ನವದೆಹಲಿ (ಪಿಟಿಐ): 'ನಾವು ಆದೇಶ ನೀಡಿದ್ದರೂ ಕೂಡ ದ್ವೇಷ ಭಾಷಣದ ವಿರುದ್ಧ ಯಾರೊಬ್ಬರೂ ಕ್ರಮ ಕೈಗೊಳ್ಳುತ್ತಿಲ್ಲ. ಈ ವಿಚಾರದಲ್ಲಿ ಹೆಚ್ಚಿನ ನಿರ್ದೇಶನಗಳನ್ನು ನೀಡುವಂತೆ ಕೇಳುವುದರಿಂದ ನಾವು ಪದೇ ಪದೇ ಮುಜುಗರಕ್ಕೆ ಒಳಗಾಗಬೇಕಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ಗುರುವಾರ ಅಸಮಾಧಾನ ವ್ಯಕ್ತಪಡಿಸಿದೆ.

ಹಿಂದೂ ಜನ ಆಕ್ರೋಶ ಮೋರ್ಚಾವು ಇದೇ 5ರಂದು ಮುಂಬೈಯಲ್ಲಿ ನಡೆಸಲು ಉದ್ದೇಶಿಸಿರುವ ರ‍್ಯಾಲಿಯ ಮೇಲೆ ನಿರ್ಬಂಧ ಹೇರುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಬೇಕು ಎಂದು ಅರ್ಜಿದಾರರ ಪರ ವಕೀಲರೊಬ್ಬರು ಕೋರಿದ್ದರು.

'ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನಿರ್ದೇಶನದ ಮೇರೆಗೆ ಅರ್ಜಿಯನ್ನು ಶುಕ್ರವಾರ ವಿಚಾರಣೆಗೆ ಕೈಗೆತ್ತಿಕೊಳ್ಳುತ್ತೇವೆ' ಎಂದು ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್, ಅನಿರುದ್ಧ ಬೋಸ್ ಮತ್ತು ಹೃಷಿಕೇಶ್ ರಾಯ್ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠ ತಿಳಿಸಿದೆ.

'ಈ ವಿಚಾರದಲ್ಲಿ ನಾವು ನಿಮ್ಮೊಂದಿಗೆ ಇದ್ದೇವೆ. ನ್ಯಾಯಾಲಯವು ಪ್ರತಿ ಬಾರಿಯೂ ಇಂತಹ ಅರ್ಜಿಗಳನ್ನು ಪುರಸ್ಕರಿಸುವುದಿಲ್ಲ. ಇದನ್ನು ನೀವು ಅರ್ಥಮಾಡಿಕೊಳ್ಳಬೇಕು. ಈ ವಿಚಾರವಾಗಿ ಈಗಾಗಲೇ ಆದೇಶವೊಂದನ್ನು ಹೊರಡಿಸಲಾಗಿದೆ. ಅದರಲ್ಲಿ ಎಲ್ಲವನ್ನೂ ಸ್ಪಷ್ಟವಾಗಿ ತಿಳಿಸಲಾಗಿದೆ. ದೇಶದಾದ್ಯಂತ ರ‍್ಯಾಲಿಗಳು ನಡೆಯುತ್ತಲೇ ಇರುತ್ತವೆ. ಅವುಗಳನ್ನು ರದ್ದುಪಡಿಸುವಂತೆ ಕೋರಿ ಪ್ರತಿ ಬಾರಿಯೂ ಅರ್ಜಿ ಸಲ್ಲಿಸಿದರೆ ಅವುಗಳನ್ನೆಲ್ಲಾ ಇತ್ಯರ್ಥಪಡಿಸುವುದಾದರೂ ಹೇಗೆ' ಎಂದು ಅರ್ಜಿದಾರರ ಪರ ವಕೀಲರನ್ನು ನ್ಯಾಯಪೀಠ ಪ್ರಶ್ನಿಸಿತು.

'ಕೆಲ ದಿನಗಳ ಹಿಂದೆ ಇಂತಹದ್ದೇ ರ‍್ಯಾಲಿಯೊಂದನ್ನು ಆಯೋಜಿಸಲಾಗಿತ್ತು. ಅದರಲ್ಲಿ 10 ಸಾವಿರ ಮಂದಿ ಪಾಲ್ಗೊಂಡಿದ್ದರು. ಮುಸ್ಲಿಂ ಸಮುದಾಯದವರ ಮೇಲೆ ಆರ್ಥಿಕ ಹಾಗೂ ಸಾಮಾಜಿಕ ಬಹಿಷ್ಕಾರ ಹೇರುವ ಕುರಿತ ನಿರ್ಧಾರವನ್ನು ಆ ರ‍್ಯಾಲಿಯಲ್ಲಿ ಕೈಗೊಳ್ಳಲಾಗಿತ್ತು' ಎಂದು ಅರ್ಜಿದಾರರ ಪರ ವಕೀಲ, ನ್ಯಾಯಪೀಠಕ್ಕೆ ತಿಳಿಸಿದರು.

'ಮಹಾರಾಷ್ಟ್ರ ಸರ್ಕಾರದ ಪರ ವಕೀಲರಿಗೆ ಅರ್ಜಿಯ ಪ್ರತಿಯೊಂದನ್ನು ಕೊಡಿ. ನಾವು ಶುಕ್ರವಾರ ನಿಮ್ಮ ಅರ್ಜಿಯನ್ನು ಮಾತ್ರ ವಿಚಾರಣೆಗೆ ಒಳಪಡಿಸುತ್ತೇವೆ' ಎಂದು ನ್ಯಾಯಪೀಠ ಹೇಳಿತು.

ವಿಚಾರಣಾಧೀನ ಕೈದಿಗಳ ಬಿಡುಗಡೆ ವಿಳಂಬ: ಮಾರ್ಗಸೂಚಿ

ನವದೆಹಲಿ (ಪಿಟಿಐ): ಜಾಮೀನು ಪಡೆದ ಬಳಿಕವೂ ಹಲವಾರು ವಿಚಾರಣಾಧೀನ ಕೈದಿಗಳು ಜೈಲಿನಲ್ಲಿದ್ದಾರೆ. ತಿಂಗಳೊಳಗೆ ಬಾಂಡ್‌ಗಳನ್ನು ಸಲ್ಲಿಸದಿದ್ದರೆ ವಿಧಿಸಲಾದ ಷರತ್ತುಗಳನ್ನು ಮಾರ್ಪಡಿಸುವಂತೆ ಸಂಬಂಧಪಟ್ಟ ನ್ಯಾಯಾಲಯಗಳಿಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಅಭಯ್ ಎಸ್.ಓಕಾ ಅವರ ಪೀಠ, ಆರೋಪಿ ಅಥವಾ ಅಪರಾಧಿಯ ಬಿಡುಗಡೆ ವಿಳಂಬಕ್ಕೆ ಸ್ಥಳೀಯ ಭದ್ರತಾ ಠೇವಣಿ ಒತ್ತಾಯವೂ ಒಂದು ಕಾರಣ ಎಂಬುದನ್ನು ನ್ಯಾಯಾಲಯ ಗಮನಿಸಿದ್ದು, ಅಂತಹ ಸಂದರ್ಭಗಳಲ್ಲಿ ನ್ಯಾಯಾಲಯಗಳು ಸ್ಥಳೀಯ ಶ್ಯೂರಿಟಿ ಷರತ್ತು ವಿಧಿಸುವಂತಿಲ್ಲ ಎಂದು ಸೂಚಿಸಿದೆ.

'ನಿವೃತ್ತರಿಗೆ ಸಿಗುವ ಸೌಕರ್ಯ ಸ್ವಯಂ ನಿವೃತ್ತಿಗೆ ಅನ್ವಯಿಸದು'

ನವದೆಹಲಿ (ಪಿಟಿಐ): 'ಸೇವಾ ಅವಧಿ ಪೂರೈಸಿ ನಿವೃತ್ತರಾದವರಿಗೆ ಸಿಗುವ ಸೌಕರ್ಯಗಳು ಸ್ವ ಇಚ್ಛೆಯಿಂದ ನಿವೃತ್ತಿ ಪಡೆದವರಿಗೆ ಅನ್ವಯಿಸುವುದಿಲ್ಲ. ಅವರು ಸಮಾನ ಸೌಕರ್ಯ ಕೇಳುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ವೇತನ ಶ್ರೇಣಿ ಪರಿಷ್ಕರಣೆಯ ಲಾಭ ಸ್ವಯಂ ನಿವೃತ್ತರಿಗೆ ಅನ್ವಯವಾಗುವುದಿಲ್ಲ ಎಂದು ಬಾಂಬೆ ಹೈಕೋರ್ಟ್ ಆದೇಶಿಸಿತ್ತು. ಇದರ ವಿರುದ್ಧ ಕೆಲ ನೌಕರರು ಮೇಲ್ಮನವಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಎಸ್.ರವೀಂದ್ರ ಭಟ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ, ಹೈಕೋರ್ಟ್ ಆದೇಶ ಎತ್ತಿಹಿಡಿದಿದೆ.



ನೇಪಾಳದಿಂದ ಉತ್ತರ ಪ್ರದೇಶದ ಅಯೋಧ್ಯೆ ತಲುಪಿದ ಬೃಹತ್ ಶಿಲೆಗಳಿಗೆ ಗುರುವಾರ ವಿಶೇಷ ಪೂಜೆ ನೆರವೇರಿಸಲಾಯಿತು – ಪಿಟಿಐ ಚಿತ್ರ

ಅಯೋಧ್ಯೆ ತಲುಪಿದ ನೇಪಾಳದ ಶಿಲೆಗಳು

ಅಯೋಧ್ಯೆ (ಪಿಟಿಐ): ರಾಮನ ವಿಗ್ರಹಗಳನ್ನು ನಿರ್ಮಿಸುವ ಸಲುವಾಗಿ ನೇಪಾಳದಿಂದ ತರಿಸಲಾಗಿರುವ ವಿಶೇಷ ಶಿಲೆಗಳು ಉತ್ತರ ಪ್ರದೇಶದ ಅಯೋಧ್ಯೆಯನ್ನು ಬುಧವಾರ ರಾತ್ರಿ ತಲುಪಿದವು. ಈ ಶಿಲೆಗಳಿಂದ ತಯಾರಿಸಲಾಗುವ ವಿಗ್ರಹಗಳನ್ನೇ ಇಲ್ಲಿ ನಿರ್ಮಾಣವಾಗುತ್ತಿರುವ ರಾಮ ಮಂದಿರದ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗುವುದು.

ಈ ಹಿನ್ನೆಲೆಯಲ್ಲಿ ಅಯೋಧ್ಯೆಯಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. 51 ಅರ್ಚಕರು ಪೂಜೆ ನೆರವೇರಿಸಿದರು.

ಈ ಶಿಲೆಗಳಲ್ಲಿ ರಾಮನ ಬಾಲರೂಪವನ್ನು ಕೆತ್ತಲಾಗುತ್ತದೆ. ಮುಂದಿನ ವರ್ಷ ಜನವರಿಯಲ್ಲಿ ಈ ಮೂರ್ತಿಗಳು ತಯಾರಾಗಿರುತ್ತವೆ.

ಈ ಶಿಲೆಗಳು 6 ಕೋಟಿ ವರ್ಷಗಳಷ್ಟು ಹಳೆಯವು. ಇವು ನೇಪಾಳದ ಸಾಲಿಗ್ರಾಮ ಬಳಿ ಗಂಡಕಿ ನದಿಯಲ್ಲಿ ದೊರೆತಿವೆ. ಒಂದು ಶಿಲೆಯು 26 ಟನ್ ತೂಕವಿದ್ದರೆ ಮತ್ತೊಂದು ಶಿಲೆ 14 ಟನ್ ತೂಕವಿದೆ.

ಪತ್ರಕರ್ತ ಸಿದ್ದೀಕ್ ಕಪ್ಪನ್ ಬಿಡುಗಡೆ

ಒಂದನೇ ಪುಟದಿಂದ...

ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಮತ್ತು ಭಾರತೀಯ ಅಪರಾಧ ದಂಡ ಸಂಹಿತೆಯ (ಐಪಿಸಿ) ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿತ್ತು. ನಂತರ ಜಾರಿ ನಿರ್ದೇಶನಾಲಯ (ಇ.ಡಿ) ಕೂಡ ಅವರ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಪ್ರಕರಣ ದಾಖಲಿಸಿತ್ತು.

'ಸುಳ್ಳು ಪ್ರಕರಣದಲ್ಲಿ ನನ್ನನ್ನು ಸಿಲುಕಿಸಲಾಗಿತ್ತು. 28 ತಿಂಗಳ ನಂತರ ಜೈಲಿನಿಂದ ಹೊರ ಬಂದಿದ್ದೇನೆ. ನಾನು ಸಾಕಷ್ಟು ಕಷ್ಟಪಟ್ಟಿದ್ದೇನೆ. ಜೈಲಿನಲ್ಲಿ ಕಳೆದ ದಿನಗಳು ತುಂಬಾ ಕಠಿಣವಾಗಿದ್ದವು' ಎಂದು ಕಪ್ಪನ್ ವರದಿಗಾರರಿಗೆ ತಿಳಿಸಿದರು.

'ನಿರ್ದಯಿಯ ಕಾನೂನುಗಳ ವಿರುದ್ಧದ ನನ್ನ ಹೋರಾಟ ಮುಂದುವರಿಯುತ್ತದೆ. ಜಾಮೀನು ನೀಡಿದರೂ ನನ್ನನ್ನು ಬಿಡುಗಡೆ ಮಾಡಲಿಲ್ಲ. ನನ್ನನ್ನು ಜೈಲಿನಲ್ಲಿ ಇರಿಸುವ ಮೂಲಕ ಯಾರಿಗೆ ಲಾಭವಾಯಿತು ತಿಳಿದಿಲ್ಲ' ಎಂದರು.

'ಪೊಲೀಸರು ಬಂಧಿಸಿದಾಗ ನನ್ನ ಬಳಿ ಮೊಬೈಲ್, ಲ್ಯಾಪ್ ಟಾಪ್, 2 ಪೆನ್ನುಗಳು, ನೋಟ್ ಪ್ಯಾಡ್ ಇತ್ತು' ಎಂದರು.

ಮಥುರಾ ಜಿಲ್ಲಾ ನ್ಯಾಯಾಲಯ ಮತ್ತು ಅಲಹಾಬಾದ್ ಹೈಕೋರ್ಟ್ ಜಾಮೀನು ಅರ್ಜಿ ತಿರಸ್ಕರಿಸಿದ ನಂತರ ಕಪ್ಪನ್ 'ಸುಪ್ರೀಂ' ಮೊರೆ ಹೋಗಿದ್ದರು.

ಕಪ್ಪನ್‌ಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿತ್ತು. ಆದರೆ, ಅವರ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿದ್ದ ಪಿಎಂಎಲ್‌ಎ ಪ್ರಕರಣದಿಂದ ಬಿಡುಗಡೆ ಭಾಗ್ಯ ಸಿಕ್ಕಿರಲಿಲ್ಲ. ಈ ಪ್ರಕರಣಕ್ಕೆ ಕಳೆದ ವರ್ಷದ ಡಿ.23ರಂದು ಅಲಹಾಬಾದ್ ಹೈಕೋರ್ಟ್ ಜಾಮೀನು ನೀಡಿತ್ತು. ಶ್ಯೂರಿಟಿಗಳ ಪರಿಶೀಲನೆ ವಿಳಂಬದಿಂದ ಬಿಡುಗಡೆಯೂ ವಿಳಂಬವಾಯಿತು. ಬುಧವಾರ ಪಿಎಂಎಲ್‌ಎ ಕೋರ್ಟ್‌ಗೆ ಶ್ಯೂರಿಟಿಗಳನ್ನು ಸಲ್ಲಿಸಿದ ನಂತರ ಬಿಡುಗಡೆ ಪ್ರಕ್ರಿಯೆ ನಡೆದಿದೆ.

ಸಂವಿಧಾನದ 21ನೇ ವಿಧಿಗೆ ಜಯ: ಕಪ್ಪನ್ ಅವರ ಬಿಡುಗಡೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಸಂಸದ ಪಿ.ಚಿದಂಬರಂ ಅವರು 'ವ್ಯಕ್ತಿಯ ಬದುಕು ಮತ್ತು ವೈಯಕ್ತಿಕ ಸ್ವಾತಂತ್ರ್ಯ ರಕ್ಷಣೆಯ ಹಕ್ಕನ್ನು ಎತ್ತಿ ಹಿಡಿಯುವ, ಸಂವಿಧಾನದ 21ನೇ ವಿಧಿಗೆ ಅಂತಿಮ ಜಯ ಸಿಕ್ಕಿದೆ. ಅವರ ಬಿಡುಗಡೆ ಸಂತಸವನ್ನು ನೀಡಿದೆ' ಎಂದು ಬಣ್ಣಿಸಿದ್ದಾರೆ.

ಅದಾನಿ 'ವಂಚನೆ': ಜೆಪಿಸಿ ಇಲ್ಲವೇ 'ಸುಪ್ರೀಂ' ತನಿಖೆಗೆ ಪಟ್ಟು

ಒಂದನೇ ಪುಟದಿಂದ...

ನಂತರ, ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯಸಭೆಯಲ್ಲಿ ವಿರೋಧ ಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, 'ಸಾರ್ವಜನಿಕ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ನಾವು ಈ ಆರೋಪಗಳ ಕುರಿತು ಜೆಪಿಸಿ ಅಥವಾ ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆಗೆ ಆಗ್ರಹಿಸಿದ್ದೇವೆ' ಎಂದರು.

'ಪ್ರತಿ ದಿನವೂ ತನಿಖೆಯ ಪ್ರಗತಿ ಬಗ್ಗೆ ಮಾಹಿತಿ ನೀಡಬೇಕು. ಇಂಥ ಕಂಪನಿಗೆ ಸರ್ಕಾರ ಹೇಗೆ ಹಣಕಾಸು ನೆರವು ನೀಡುತ್ತಿದೆ ಹಾಗೂ ಆ ಹಣವನ್ನು ಖರ್ಚು ಮಾಡಲು ಯಾವ ರೀತಿಯ ಒತ್ತಡ ಹೇರಲಾಗುತ್ತಿದೆ ಎಂಬುದು ಗೊತ್ತಾಗಬೇಕಿದೆ' ಎಂದರು.

ಅದಾನಿ ಸಮೂಹದ ವಿರುದ್ಧದ ಆರೋಪಗಳ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಒತ್ತಡ ಹೇರುವುದಕ್ಕೆ ಸಜ್ಜಾಗಿಯೇ ವಿರೋಧ ಪಕ್ಷಗಳು ಬಂದಿದ್ದವು.

ಖರ್ಗೆ ನೇತೃತ್ವದಲ್ಲಿ ಬೆಳಿಗ್ಗೆ ನಡೆದಿದ್ದ ಸಭೆಯಲ್ಲಿ ಟಿಎಂಸಿ, ಎಎಪಿ ಸೇರಿದಂತೆ 13 ವಿರೋಧ ಪಕ್ಷಗಳ ನಾಯಕರು ಪಾಲ್ಗೊಂಡಿದ್ದರು.

'ಲಕ್ಷಾಂತರ ಜನರು ಎಲ್‌ಐಸಿ ಹಾಗೂ ಎಸ್‌ಬಿಐನಲ್ಲಿ ಹೂಡಿಕೆ ಮಾಡಿದ್ದಾರೆ. ಹೀಗಾಗಿ, ಸದನಗಳಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕು ಎಂಬುದಾಗಿ ಸಭೆಯಲ್ಲಿ ನಿರ್ಧರಿಸಲಾಗಿತ್ತು' ಎಂದು ಮೂಲಗಳು ಹೇಳಿವೆ.

'ಈ ವಿಷಯ ಕುರಿತು ಚರ್ಚೆ ನಡೆಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು. ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಅಡ್ಡಿಯಾಗುವ ಹಂತಕ್ಕೆ ಹೋದರೂ ಕೂಡ, ಪಟ್ಟು ಸಡಿಲಿಸಬಾರದು ಎಂಬುದಾಗಿ ಸಭೆಯಲ್ಲಿ ಎಲ್ಲ ಪಕ್ಷಗಳ ನಾಯಕರು ಹೇಳಿದ್ದರು' ಎಂದು ಇವೇ ಮೂಲಗಳು ಹೇಳಿವೆ.

ಗದ್ದಲ: ಉಭಯ ಸದನಗಳಲ್ಲಿ ಕಲಾಪ ಆರಂಭಗೊಳ್ಳುತ್ತಿದ್ದಂತೆಯೇ ವಿರೋಧ ಪಕ್ಷಗಳ ಸಂಸದರು ವಿಷಯವನ್ನು ಪ್ರಸ್ತಾಪಿಸಲು ಮುಂದಾದರು. ಕಲಾಪ ರದ್ದುಗೊಳಿಸಿ, ಅದಾನಿ ಸಮೂಹದ ವಿರುದ್ಧದ ಆರೋಪಗಳ ಕುರಿತು ಚರ್ಚೆ ನಡೆಸಬೇಕು ಎಂದು ನೋಟಿಸ್ ನೀಡಿದರು.

ಲೋಕಸಭೆಯಲ್ಲಿ ಸ್ಪೀಕರ್ ಓಂ ಬಿರ್ಲಾ ಹಾಗೂ ರಾಜ್ಯಸಭೆಯಲ್ಲಿ ಸಭಾಪತಿ ಜಗದೀಪ್ ಧನಕರ್ ಅವರು ವಿರೋಧ ಪಕ್ಷಗಳ ನೋಟಿಸ್‌ಗಳನ್ನು ತಿರಸ್ಕರಿಸಿದರು. ವಿರೋಧ ಪಕ್ಷಗಳ ಸದಸ್ಯರು ಚರ್ಚೆಗೆ ಪಟ್ಟು ಹಿಡಿದ ಕಾರಣ ಕೆಲ ಕಾಲ ಕಲಾಪ ಮುಂದೂಡಲಾಯಿತು. ನಂತರ ಮಧ್ಯಾಹ್ನ 2ಕ್ಕೆ ಪುನಃ ಕಲಾಪ ಆರಂಭವಾಯಿತು. ಆಗಲೂ, ವಿರೋಧ ಪಕ್ಷಗಳ ಸದಸ್ಯರು ತಮ್ಮ ಬೇಡಿಕೆಯನ್ನು ಮುಂದಿಟ್ಟುಕೊಂಡು ಗದ್ದಲ ಎಬ್ಬಿಸಿದಾಗ, ಉಭಯ ಸದನಗಳನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ವಿಪಕ್ಷಗಳಿಂದ ತಿದ್ದುಪಡಿ ಮಂಡನೆ

ನವದೆಹಲಿ: ಸಂಸತ್ತಿನ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿ ಮಾಡಿರುವ ಭಾಷಣದಲ್ಲಿ ಅದಾನಿ ಸಮೂಹದ ಕುರಿತ ವಿಷಯವನ್ನು ಕೈಬಿಟ್ಟಿರುವುದಕ್ಕೆ ವಿಷಾದ ವ್ಯಕ್ತಪಡಿಸಲು ವಿರೋಧ ಪಕ್ಷಗಳ ನಾಲ್ವರು ಸಂಸದರು ಮುಂದಿನ ವಾರ ಸಂಸತ್‌ನಲ್ಲಿ ತಿದ್ದುಪಡಿಗಳನ್ನು ಮಂಡಿಸಲಿದ್ದಾರೆ.

ಕಾಂಗ್ರೆಸ್ ಸಂಸದರಾದ ಗೌರವ್ ಗೊಗೋಯಿ, ಜೆಬಿ ಮಾಥರ್, ತೃಣಮೂಲ ಕಾಂಗ್ರೆಸ್‌ನ ಸೌಗತಾ ರಾಯ್ ಮತ್ತು ಸಿಪಿಎಂನ ಪಿ.ಆರ್. ನಟರಾಜನ್ ತಿದ್ದುಪಡಿಗಳನ್ನು ಮಂಡಿಸಲಿದ್ದಾರೆ.

ರಾಜ್ಯಸಭೆಯಲ್ಲಿ ಕೊನೆ ಸಾಲಿನ ಆಸನಕ್ಕೆ ಸ್ಥಳಾಂತರಗೊಂಡ ಮನಮೋಹನ್ ಸಿಂಗ್

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರನ್ನು ರಾಜ್ಯಸಭೆಯ ಮುಂದಿನ ಸಾಲಿನ ಆಸನದಿಂದ ಕೊನೆಯ ಸಾಲಿನ ಆಸನಕ್ಕೆ ಸ್ಥಳಾಂತರಗೊಳಿಸಲಾಗಿದೆ. ಮನಮೋಹನ ಸಿಂಗ್ ಅವರ ಗಾಲಿಕುರ್ಚಿಯ ಚಲನೆಗೆ ಅನುಕೂಲವಾಗಲು ಬದಲಾವಣೆ ಮಾಡಲಾಗಿದೆ ಎಂದು ಕಾಂಗ್ರೆಸ್ ತಿಳಿಸಿದೆ.

ಕಾಂಗ್ರೆಸ್‌ನ ಹಿರಿಯ ನಾಯಕ ಪಿ.ಚಿದಂಬರಂ, ದಿಗ್ವಿಜಯ ಸಿಂಗ್ ಅವರು ಆಸನ ಹಂಚಿಕೆಯ ನಂತರ ಮುಂದಿನ ಸಾಲಿನಲ್ಲಿ ಆಸನ ಪಡೆದಿದ್ದಾರೆ.

ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆಗೆ ನಿರ್ಬಂಧ ಅರ್ಜಿ ವಜಾ

ಒಂದನೇ ಪುಟದಿಂದ...

1951ರ ಪ್ರಜಾ ಪ್ರಾತಿನಿಧ್ಯ ಕಾಯ್ದೆ ಸೆಕ್ಷನ್ 33(7) ಅನ್ನು ಅಸಿಂಧು ಹಾಗೂ ಸಂವಿಧಾನ ವಿರೋಧಿ ಎಂದು ಘೋಷಿಸುವಂತೆ ಕೋರಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ, ಜೆ.ಬಿ. ಪಾರ್ದಿವಾಲಾ ಪೀಠ ನಡೆಸಿತು.

ಉಪಾಧ್ಯಾಯ ಪರ ಹಾಜರಾದ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್, ಅಭ್ಯರ್ಥಿಯು ಎರಡು ಕ್ಷೇತ್ರಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ಎರಡರಿಂದಲೂ ಆಯ್ಕೆಯಾದರೆ, ಒಂದು ತೆರವು ಮಾಡಬೇಕಾಗುತ್ತದೆ. ಇದು ಉಪಚುನಾವಣೆಗೆ ಕಾರಣವಾಗುತ್ತದೆ. ಇದು ಬೊಕ್ಕಸಕ್ಕೆ ಹೆಚ್ಚುವರಿ ಆರ್ಥಿಕ ಹೊರೆಯಾಗಲಿದೆ ಎಂದು ಹೇಳಿದರು. 1996 ರ ತಿದ್ದುಪಡಿಗೆ ಮೊದಲು, ಅಭ್ಯರ್ಥಿಯು ಚುನಾವಣೆಯಲ್ಲಿ ಸ್ಪರ್ಧಿಸಬಹುದಾದ ಕ್ಷೇತ್ರಗಳ ಸಂಖ್ಯೆಗೆ ಯಾವುದೇ ನಿರ್ಬಂಧವಿರಲಿಲ್ಲ. ತಿದ್ದುಪಡಿಯು ಆ ಸಂಖ್ಯೆಯನ್ನು ಎರಡಕ್ಕೆ ಸೀಮಿತಗೊಳಿಸಿತು ಎಂದರು.

'ಅಭ್ಯರ್ಥಿಯು ಎರಡು ಕ್ಷೇತ್ರಗಳಿಂದ ಸ್ಪರ್ಧಿಸಿದಾಗ, ಎಲ್ಲಿಂದ ಆಯ್ಕೆಯಾಗುತ್ತೀರಿ ಎಂದು ನಿಮಗೆ ತಿಳಿದಿರುವುದಿಲ್ಲ. ಅದರಲ್ಲಿ ತಪ್ಪೇನಿದೆ? ಇದು ಚುನಾವಣಾ ಪ್ರಜಾಪ್ರಭುತ್ವದ ಭಾಗವಾಗಿದೆ' ಎಂದು ನ್ಯಾಯಾಲಯ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಅಗಸ್ಟಾ ವೆಸ್ಟ್‌ಲ್ಯಾಂಡ್ 7ರಂದು ಜಾಮೀನು ಅರ್ಜಿ ವಿಚಾರಣೆ

ನವದೆಹಲಿ (ಪಿಟಿಐ): ಅಗಸ್ಟಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಹಗರಣದ ಪ್ರಮುಖ ಆರೋಪಿ ಕ್ರಿಸ್ಟಿಯನ್ ಮೈಕಲ್ ಜೇಮ್ಸ್ ಸಲ್ಲಿಸಿರುವ ಜಾಮೀನು ಅರ್ಜಿಗಳ ವಿಚಾರಣೆಯನ್ನು ಇದೇ 7ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

ಮಧ್ಯವರ್ತಿಯಾಗಿರುವ ಮೈಕಲ್ ವಿರುದ್ಧ ಸಿಬಿಐ ಹಾಗೂ ಇ.ಡಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಿವೆ. ಈ ಪ್ರಕರಣಗಳಲ್ಲಿ ಜಾಮೀನು ಕೋರಿ ಆರೋಪಿ ಸಲ್ಲಿಸಿರುವ ಅರ್ಜಿಗಳು ಗುರುವಾರ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠದ ಎದುರು ವಿಚಾರಣೆಗೆ ನಿಗದಿಯಾಗಿದ್ದವು. ಇದೇ 7ರಂದು ಅರ್ಜಿಗಳ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ತಿಳಿಸಿತು.

ಎಲ್‌ಇಟಿ ಉಗ್ರನ ಬಂಧನ

ಜಮ್ಮು: ಹಲವು ಸ್ಫೋಟ ಪ್ರಕರಣಗಳಲ್ಲಿ ಆರೋಪಿಯಾಗಿರುವ ಲಷ್ಕರ್ ಎ ತಯಬಾ (ಎಲ್‌ಇಟಿ) ಉಗ್ರನನ್ನು ಬಂಧಿಸಲಾಗಿದೆ ಎಂದು ಜಮ್ಮು ಮತ್ತು ಕಾಶ್ಮೀರ ಡಿಜಿಪಿ ದಿಲ್ಬಾಗ್ ಸಿಂಗ್ ಗುರುವಾರ ಹೇಳಿದ್ದಾರೆ.

ರಿಯಾಸಿ ಜಿಲ್ಲೆಯ ಆರಿಫ್ ಬಂಧಿತ ಉಗ್ರ. ವೈಷ್ಣೋದೇವಿ ಯಾತ್ರಿಕರು ಪ್ರಯಾಣಿಸುತ್ತಿದ್ದ ಬಸ್ ಸ್ಫೋಟ ಪ್ರಕರಣ ಸೇರಿದಂತೆ ಹಲವೆಡೆ ನಡೆದ ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪ ಈತನ ಮೇಲಿದೆ ಎಂದೂ ತಿಳಿಸಿದ್ದಾರೆ.

ಸುಗಂಧ ದ್ರವ್ಯದ ಬಾಟಲಿಯೊಳಗೆ ಅಳವಡಿಸಲಾಗಿದ್ದ ಐಇಡಿಯನ್ನು ವಶಪಡಿಸಿಕೊಳ್ಳಲಾಗಿದ್ದು, ಇಂತಹ ಬಾಂಬ್ ಅನ್ನು ಈ ಪ್ರದೇಶದಿಂದ ಮೊದಲ ಬಾರಿಗೆ ವಶಪಡಿಸಿಕೊಳ್ಳಲಾಗಿದೆ ಎಂದೂ ತಿಳಿಸಿದ್ದಾರೆ.

'ಆರಿಫ್ ಸರ್ಕಾರಿ ಶಾಲೆಯ ಶಿಕ್ಷಕನಾಗಿದ್ದು, ಎಲ್‌ಇಟಿ ಉಗ್ರರ ಜೊತೆಗೆ ನಂಟು ಬೆಳೆಸಿಕೊಂಡ ಬಳಿಕ ಹಲವು ಭಯೋತ್ಪಾದಕ ಕೃತ್ಯಗಳಲ್ಲಿ ಶಾಮೀಲಾಗಿದ್ದಾನೆ' ಎಂದೂ ಅವರು ವಿವರಿಸಿದ್ದಾರೆ.

ಬಾಂಬ್ ಸ್ಫೋಟ: 11 ವರ್ಷಗಳ ಬಳಿಕ ಮೊದಲ ವಿಚಾರಣೆ

ಮುಂಬೈ (ಪಿಟಿಐ): 27 ಜನರ ಬಲಿ ತೆಗೆದುಕೊಂಡ, 127 ಮಂದಿಯನ್ನು ಗಾಯಗೊಳಿಸಿದ ಮೂರು ಪ್ರತ್ಯೇಕ ಬಾಂಬ್ ಸ್ಫೋಟ ಪ್ರಕರಣಗಳ ವಿಚಾರಣೆಯನ್ನು ಮಹಾರಾಷ್ಟ್ರ ಸಂಘಟಿತ ಅಪರಾಧ ತಡೆ ಕಾಯ್ದೆ (ಎಂಸಿಒಸಿಎ) ವಿಶೇಷ ನ್ಯಾಯಾಲಯವು, ಘಟನೆ ನಡೆದ 11 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಕೈಗೆತ್ತಿಕೊಂಡಿದೆ.

ಒಟ್ಟು 11 ಮಂದಿಯ ಮೇಲೆ ಪ್ರಕರಣ ದಾಖಲಾಗಿದೆ. ಮುಂಬೈನ ದಾದರ್, ಒಪೆರಾ ಹಾಗೂ ಜವೇರಿ ಬಜಾರ್‌ನಲ್ಲಿ 2011ರ ಜುಲೈ 13ರಂದು ಬಾಂಬ್ ಸ್ಫೋಟ ನಡೆದಿತ್ತು. ಇಂಡಿಯನ್ ಮುಜಾಯಿದ್ದೀನ್ ಭಯೋತ್ಪಾದಕ ಸಂಘಟನೆಯ ಸ್ಥಾಪಕ ಯಾಸಿನ್ ಭಟ್ಕಳ್ ಈ ಮೂರು ಸ್ಫೋಟಗಳ ಸಂಚುಕೋರ ಎಂದು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಆರೋಪಿಸಿದೆ.

ಗಡ್ಕರಿ, ಫಡಣವೀಸ್ ತವರಿನಲ್ಲಿ ಬಿಜೆಪಿಗೆ ಮುಖಭಂಗ

ಮುಂಬೈ: ಮಹಾರಾಷ್ಟ್ರದ ನಾಗ್ಪುರ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಮಹಾ ವಿಕಾಸ್ ಆಘಾಡಿ (ಎಂವಿಎ) ಮೈತ್ರಿಯ ಅಭ್ಯರ್ಥಿ ಸುಧಾಕರ್ ಅಡಬಾಲೆ ಗುರುವಾರ ಗೆಲುವು ಸಾಧಿಸಿದ್ದು, ಬಿಜೆಪಿಗೆ ಮುಖಭಂಗವಾಗಿದೆ.

ಬಿಜೆಪಿಯ ಸಿದ್ಧಾಂತದ ಪೋಷಕ ಸಂಘಟನೆ ಆರೆಸ್ಸೆಸ್ ಪ್ರಧಾನ ಕಚೇರಿ ಹೊಂದಿರುವ, ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಂಥ ಘಟಾನುಘಟಿಗಳ ತವರು ನೆಲದಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ನಾಗೋ ಗಾಣಾರ್ ಅವರಿಗೆ ಸೋಲುಂಟಾಗಿದೆ. ಇದು ಪಕ್ಷಕ್ಕೆ ಆಗಿರುವ ಬಹುದೊಡ್ಡ ಹಿನ್ನಡೆ ಎಂದು ವಿಶ್ಲೇಷಿಸಲಾಗುತ್ತಿದೆ.

ರಾಮಜನ್ಮಭೂಮಿ ಸ್ಫೋಟಿಸುವುದಾಗಿ ಬೆದರಿಕೆ ಕರೆ

ಅಯೋಧ್ಯೆ, ಉತ್ತರ ಪ್ರದೇಶ (ಪಿಟಿಐ): ರಾಮಜನ್ಮಭೂಮಿ ಸಂಕೀರ್ಣ ಸ್ಫೋಟಿಸುವುದಾಗಿ ಅಯೋಧ್ಯೆ ನಿವಾಸಿಯೊಬ್ಬರಿಗೆ ಅಪರಿಚಿತ ವ್ಯಕ್ತಿ ಕರೆ ಮಾಡಿ ಬೆದರಿಕೆ ಹಾಕಿದ್ದಾನೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಉತ್ತರ ಪ್ರದೇಶದ ರಾಮ್ಕೋಟ್ ಪ್ರದೇಶದ ನಿವಾಸಿ ಮನೋಜ್ ಅವರಿಗೆ ಕರೆ ಬಂದಿದ್ದು, ಈ ವಿಚಾರವನ್ನು ಅವರು ಪೊಲೀಸರ ಗಮನಕ್ಕೆ ತಂದಿದ್ದಾರೆ. ಕರೆ ಮಾಡಿದ ವ್ಯಕ್ತಿ ಗುರುವಾರ ಬೆಳಿಗ್ಗೆ 10 ಗಂಟೆಗೆ ದೇವಾಲಯದ ಪ್ರದೇಶವನ್ನು ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದನು. ಅಪರಿಚಿತ ವ್ಯಕ್ತಿ ಪತ್ತೆಗೆ ಪೊಲೀಸರು ಶೋಧ ಆರಂಭಿಸಿದ್ದಾರೆ.

ಬಾಲ್ಯವಿವಾಹ: ನಾಲ್ಕು ಸಾವಿರ ಪ್ರಕರಣ, ಬಂಧನ ಸಾಧ್ಯತೆ

ಗುವಾಹಟಿ: ರಾಜ್ಯದಲ್ಲಿ 4 ಸಾವಿರಕ್ಕೂ ಹೆಚ್ಚು ಬಾಲ್ಯವಿವಾಹ ಪ್ರಕರಣಗಳನ್ನು ದಾಖಲಿಸಲಾಗಿದ್ದು, ಹಲವರನ್ನು ಶೀಘ್ರದಲ್ಲೇ ಬಂಧಿಸುವ ಸಾಧ್ಯತೆಯಿದೆ.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಬಾಲ್ಯ ವಿವಾಹಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳ ಜಿಲ್ಲಾವಾರು ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದ್ದಾರೆ.

ಬಾಲ್ಯವಿವಾಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಕ್ರಮ ಕೈಗೊಳ್ಳಲು ಆರಂಭಿಸಿದ್ದಾರೆ ಎಂದು ಪೊಲೀಸ್ ಮಹಾನಿರ್ದೇಶಕ ಜಿ.ಪಿ.ಸಿಂಗ್ 'ಪ್ರಜಾವಾಣಿ'ಗೆ ತಿಳಿಸಿದರು.

'ವೀಸಾ ನವೀಕರಣ ಅರ್ಜಿ: 'ಡ್ರಾಪ್‌ಬಾಕ್ಸ್' ಮೂಲಕ ಮಾತ್ರ ಸಲ್ಲಿಸಿ'

ನವದೆಹಲಿ (ಪಿಟಿಐ): ವೀಸಾ ನವೀಕರಣಕ್ಕೆ ಸಂಬಂಧಿಸಿದ ಅರ್ಜಿಗಳನ್ನು 'ಡ್ರಾಪ್‌ಬಾಕ್ಸ್' ಮೂಲಕವೇ ಸಲ್ಲಿಸಬೇಕು. ಇ–ಮೇಲ್ ಮೂಲಕ ಕಳುಹಿಸುವ ಈ ಕುರಿತ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅಮೆರಿಕ ರಾಯಭಾರ ಕಚೇರಿ ತಿಳಿಸಿದೆ.

'ಈ ವರ್ಷ, ಭಾರತೀಯ ವಿದ್ಯಾರ್ಥಿಗಳಿಂದ ದಾಖಲೆ ಸಂಖ್ಯೆಯಲ್ಲಿ ವೀಸಾ ಅರ್ಜಿಗಳು ಸಲ್ಲಿಕೆಯಾಗಲಿವೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿನ ರಾಯಭಾರ ಹಾಗೂ ಕಾನ್ಸುಲೇಟ್ ಕಚೇರಿಗಳು ಸಿದ್ಧತೆ ಮಾಡಿಕೊಂಡಿವೆ' ಎಂದು ಮುಂಬೈನಲ್ಲಿರುವ ಅಮೆರಿಕ ಕಾನ್ಸುಲೇಟ್ ಕಚೇರಿಯ ಮುಖ್ಯಸ್ಥ ಜಾನ್ ಬಲ್ಲಾರ್ಡ್ ತಿಳಿಸಿದ್ದಾರೆ.

ಕೇರಳ: ಕಾರಿಗೆ ಬೆಂಕಿ ತಗುಲಿ ಗರ್ಭಿಣಿ, ಪತಿ ಸಾವು



ಕೇರಳದ ಕಣ್ಣೂರಿನಲ್ಲಿ ಸರ್ಕಾರಿ ಆಸ್ಪತ್ರೆಯ ಬಳಿ ಬೆಂಕಿ ಅವಘಡಕ್ಕೆ ಒಳಗಾದ ಕಾರು – ಪಿಟಿಐ ಚಿತ್ರ

ಕಣ್ಣೂರು, ಕೇರಳ (ಪಿಟಿಐ): ಕಾರಿಗೆ ಬೆಂಕಿ ತಗುಲಿದ ಪರಿಣಾಮವಾಗಿ ಗರ್ಭಿಣಿ ಹಾಗೂ ಆಕೆಯ ಪತಿ ಸಾವಿಗೀಡಾಗಿರುವ ಘಟನೆ ಕಣ್ಣೂರಿನ ಸರ್ಕಾರಿ ಆಸ್ಪತ್ರೆ ಬಳಿ ಗುರುವಾರ ನಡೆದಿದೆ ಎಂದು ಪೊಲೀಸರು ತಿಳಿಸಿದರು.

'ಪ್ರಿಜಿತ್ ಹಾಗೂ ರೀಶಾ ಸಾವಿಗೀಡಾದ ದಂಪತಿ ಎಂದು ಗುರುತಿಸಲಾಗಿದೆ. ಇವರು ಕುಟ್ಟಿಯತ್ತೂರು ಮೂಲದವರು. ರೀಶಾ ಅವರಿಗೆ ಹೆರಿಗೆ ನೋವು ಕಾಣಿಸಿಕೊಂಡಿದ್ದರಿಂದ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಈ ದುರಂತ ಸಂಭವಿಸಿದೆ' ಎಂದು ಅವರು ಹೇಳಿದರು.

'ಕಾರಿಗೆ ಬೆಂಕಿ ತಗುಲಿದ ಸುದ್ದಿ ತಿಳಿಯುತ್ತಿದ್ದಂತೆಯೇ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ, ಬೆಂಕಿಯನ್ನು ನಂದಿಸಿ ಪ್ರಿಜಿತ್ ಹಾಗೂ ರೀಶಾ ಅವರನ್ನು ಹೊರಕರೆತಂದಿದ್ದಾರೆ. ಆದರೆ ಆ ವೇಳೆಗಾಗಲೇ ಅವರು ಮೃತಪಟ್ಟಿದ್ದರು' ಎಂದರು.

'ಕಾರಿನಲ್ಲಿ ಮಗು ಸೇರಿ ಆರು ಮಂದಿ ಪ್ರಯಾಣಿಸುತ್ತಿದ್ದರು. ಬೆಂಕಿ ತಗುಲಿದ್ದಂತೆ, ಹಿಂದಿನ ಸೀಟ್‌ನಲ್ಲಿ ಕುಳಿತಿದ್ದ ನಾಲ್ಕು ಮಂದಿಯೂ ಕಾರಿನಿಂದ ಹೊರಗಿಳಿದಿದ್ದಾರೆ. ಈ ನಾಲ್ಕೂ ಮಂದಿಗೆ ಯಾವುದೇ ಗಾಯಗಳಾಗಿಲ್ಲ. ಅವರನ್ನು ಆಸ್ಪತ್ರೆಗೆ ದಾಖಲಿಸಿ ಪರೀಕ್ಷಿಸಲಾಗುತ್ತಿದೆ' ಎಂದು ಕಣ್ಣೂರು ನಗರ ಪೊಲೀಸ್ ಕಮಿಷನರ್ ಅಜಿತ್ ಕುಮಾರ್ ಅವರು ಹೇಳಿದರು.

'ಬೆಂಕಿ ತಗುಲಿದಾಗ ಮುಂದಿನ ಬಾಗಿಲುಗಳನ್ನು ತೆರೆಯಲು ಸಾಧ್ಯವಾಗದ ಕಾರಣ ಪ್ರಿಜಿತ್ ಹಾಗೂ ರೀಶಾ ಅವರು ಮೃತಪಟ್ಟಿರಬಹುದು' ಎಂದು ಅಜಿತ್ ಕುಮಾರ್ ಅವರು ತಿಳಿಸಿದರು.

'ತಜ್ಞರ ಪರಿಶೀಲನೆಯ ಬಳಿಕವಷ್ಟೇ ಅವಘಡಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯಬಹುದು' ಎಂದೂ ಅವರು ಹೇಳಿದರು.

ನಾಗಾಲ್ಯಾಂಡ್ 20, ಮೇಘಾಲಯದ 60 ಸ್ಥಾನಗಳಿಗೆ ಬಿಜೆಪಿ ಸ್ಪರ್ಧೆ

ಪ್ರಜಾ ಮತ ಜನತಂತ್ರದ ಹಬ್ಬ 2023

ನವದೆಹಲಿ (ಪಿಟಿಐ): ಮೇಘಾಲಯ ಮತ್ತು ನಾಗಾಲ್ಯಾಂಡ್ ರಾಜ್ಯಗಳ ವಿಧಾನಸಭೆ ಚುನಾವಣೆಯು ಫೆಬ್ರುವರಿ 27ರಂದು ನಡೆಯಲಿದ್ದು, ಬಿಜೆಪಿಯು ಮೇಘಾಲಯ ವಿಧಾನಸಭೆಯ ಎಲ್ಲಾ 60 ಸ್ಥಾನಗಳಿಗೆ ಮತ್ತು ನಾಗಾಲ್ಯಾಂಡ್‌ನ 20 ಸ್ಥಾನಗಳಿಗೆ ಸ್ಪರ್ಧೆ ನಡೆಸಲಿದೆ ಎಂದು ಬಿಜೆಪಿ ಕಾರ್ಯದರ್ಶಿ, ಈಶಾನ್ಯ ರಾಜ್ಯಗಳ ಬಿಜೆಪಿ ಸಹ ಉಸ್ತುವಾರಿ ರಿತುರಾಜ್ ಸಿನ್ಹಾ ತಿಳಿಸಿದರು.

ಮೇಘಾಲಯದಲ್ಲಿ 'ಎಂ– ಪವರ್' (ಮೋದಿ ಪವರ್) ಎಂಬ ಘೋಷಣೆ ಜೊತೆ ಬಿಜೆಪಿ ಸ್ಪರ್ಧಿಸಲಿದೆ. ಈ ರಾಜ್ಯದ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ವಿಶ್ವಾಸವಿದೆ. ಮೋದಿ ಅವರು ಮಾತ್ರ ತ್ವರಿತಗತಿಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಾರೆ ಎಂಬ ನಂಬಿಕೆ ಜನರಿಗೆ ಇದೆ ಎಂದು ಸಿನ್ಹಾ ಹೇಳಿದರು.

ನಾಗಾಲ್ಯಾಂಡ್ ಆಡಳಿತಾರೂಢ ನ್ಯಾಷನಲಿಸ್ಟ್ ಡೆಮಾಕ್ರೆಟಿಕ್ ಪ್ರೊಗ್ರೆಸಿವ್ ಪಕ್ಷದ ಜೊತೆ ಮೈತ್ರಿ ಮಾಡಿಕೊಳ್ಳುವ ಮೂಲಕ ಬಿಜೆಪಿಯು ಇಲ್ಲಿ ಸ್ಪರ್ಧಿಸಲಿದೆ. ನಾಗಾಲ್ಯಾಂಡ್‌ನಲ್ಲಿ ಒಟ್ಟು 60 ವಿಧಾನಸಭಾ ಕ್ಷೇತ್ರಗಳಿದ್ದು, ಬಿಜೆಪಿ 20 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ ಎಂದು ಅವರು ಹೇಳಿದರು.

2018ರ ಮೇಘಾಲಯ ವಿಧಾನಸಭೆ ಚುನಾವಣೆಯಲ್ಲಿ 47 ಸ್ಥಾನಗಳಿಗೆ ಸ್ಪರ್ಧಿಸಿದ್ದ ಬಿಜೆಪಿ ಎರಡು ಸ್ಥಾನಗಳಲ್ಲಿ ಜಯಗಳಿಸಿತ್ತು. ಕಾನ್ರಾಡ್ ಸಂಗ್ಮಾ ನೇತೃತ್ವದ ನ್ಯಾಷನಲ್ ಪೀಪಲ್ಸ್ ಪಕ್ಷದ ಜೊತೆ ಮೈತ್ರಿ ಮಾಡಿಕೊಳ್ಳುವ ಮೂಲಕ ರಾಜ್ಯ ಸರ್ಕಾರದ ಭಾಗವಾಗಿದೆ.

ಎರಡೂ ರಾಜ್ಯಗಳಲ್ಲಿ ಈ ತಿಂಗಳ 27ರಂದು ಚುನಾವಣೆ ನಡೆಯಲಿದೆ. ಫಲಿತಾಂಶವು ಮಾರ್ಚ್ 2ರಂದು ಹೊರಬೀಳಲಿದೆ.

ರಣಜಿ ಟ್ರೋಫಿ: ಉತ್ತರಾಖಂಡದ ಎದುರು ಆತಿಥೇಯರ ಆರ್ಭಟ; ವಿದ್ವತ್‌ಗೆ ಎರಡು ವಿಕೆಟ್

ನಾಲ್ಕರ ಘಟ್ಟದ ಸನಿಹ ಕರ್ನಾಟಕ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಸಂಜೆ ಮಧ್ಯಮವೇಗಿ ವಿದ್ವತ್ ಕಾವೇರಪ್ಪ ಮತ್ತು ಎಂ.ವೆಂಕಟೇಶ್ ಅವರು ಕರ್ನಾಟಕ ತಂಡವು ಈ ವರ್ಷದ ರಣಜಿ ಟ್ರೋಫಿ ಟೂರ್ನಿಯ ಸೆಮಿಫೈನಲ್ ಪ್ರವೇಶದ ಹಾದಿಯನ್ನು ಮತ್ತಷ್ಟು ಸುಗಮಗೊಳಿಸಿದರು.

ಇಲ್ಲಿ ನಡೆಯುತ್ತಿರುವ ಕ್ವಾರ್ಟರ್‌ಫೈನಲ್ ಪಂದ್ಯದ ಮೂರನೇ ದಿನ ಕರ್ನಾಟಕವು ಮೊದಲ ಇನಿಂಗ್ಸ್‌ನಲ್ಲಿ 162.5 ಓವರ್‌ಗಳಲ್ಲಿ 606 ರನ್ ಗಳಿಸಿತು. ಇದರೊಂದಿಗೆ 490 ರನ್‌ಗಳ ಮುನ್ನಡೆ ಪಡೆಯಿತು.

ಅದಕ್ಕುತ್ತರವಾಗಿ ಎರಡನೇ ಇನಿಂಗ್ಸ್ ಆರಂಭಿಸಿದ ಉತ್ತರಾಖಂಡ ತಂಡವು ದಿನದಾಟದ ಮುಕ್ತಾಯಕ್ಕೆ 41 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 106 ರನ್ ಗಳಿಸಿತು. ವಿದ್ವತ್ (22ಕ್ಕೆ2) ಮತ್ತು ಪದಾರ್ಪಣೆ ಪಂದ್ಯ ಆಡುತ್ತಿರುವ ವೆಂಕಟೇಶ್ ಒಂದು ವಿಕೆಟ್ ಗಳಿಸಿದರು. ಆರಂಭಿಕ ಜೋಡಿ ಅವನೀಶ್ ಸುಧಾ ಮತ್ತು ನಾಯಕ ಜೀವನ್‌ಜ್ಯೋತ್ ಸಿಂಗ್ (24; 57ಎ) ಅವರ ವಿಕೆಟ್‌ಗಳನ್ನು ವಿದ್ವತ್ ಕಬಳಿಸಿದರು. ಕುನಾಲ್ ಚಾಂಡೇಲಾ ಅವರಿಗೆ ವೆಂಕಟೇಶ್ ಪೆವಿಲಿಯನ್ ದಾರಿ ತೋರಿದರು.

ಈ ಸಂದರ್ಭದಲ್ಲಿ ಜೊತೆಗೂಡಿದ ದಿಕ್ಷಾಂಶು ನೇಗಿ ಹಾಗೂ ಸ್ವಪ್ನಿಲ್ ಸಿಂಗ್ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿ ವಿಕೆಟ್ ಪತನ ತಡೆದರು.



ವಿಕೆಟ್ ಗಳಿಸಿದ ವಿದ್ವತ್ ಕಾವೇರಪ್ಪ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಪ್ರಜಾವಾಣಿ ಚಿತ್ರ/ಎಚ್.ಜಿ. ಪ್ರಶಾಂತ್

ತಲಾ 27 ರನ್ ಗಳಿಸಿ ಕ್ರೀಸ್‌ನಲ್ಲಿದ್ದಾರೆ.

ಪಂದ್ಯದಲ್ಲಿ ಇನ್ನೂ ಎರಡು ದಿನಗಳು ಬಾಕಿಯಿವೆ. ಉತ್ತರಾಖಂಡ ತಂಡಕ್ಕೆ ಆತಿಥೇಯರ ಮೊದಲ ಇನಿಂಗ್ಸ್ ಮುನ್ನಡೆಯನ್ನು ಚುಕ್ತಾ ಮಾಡಲು ಇನ್ನೂ 384 ರನ್‌ಗಳ ಅಗತ್ಯವಿದೆ. ವೇಗವಾಗಿ ಆಡಿ ಈ ಮೊತ್ತ ಚುಕ್ತಾ ಮಾಡಿ ಕರ್ನಾಟಕಕ್ಕೆ ಗುರಿಯೊಡ್ಡಿ ಆಲೌಟ್ ಮಾಡಿ ಜಯಿಸಿದರೆ ಮಾತ್ರ ಉತ್ತರಾಖಂಡಕ್ಕೆ ನಾಲ್ಕರ ಘಟ್ಟ ಪ್ರವೇಶಿಸಲು ಸಾಧ್ಯವಿದೆ. ಒಂದೊಮ್ಮೆ ಪ್ರವಾಸಿಗರು ರಕ್ಷಣಾತ್ಮಕವಾಗಿ ಆಡಿ ಡ್ರಾ ಮಾಡಿಕೊಂಡರೂ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿರುವ ಕರ್ನಾಟಕ ಸೆಮಿಫೈನಲ್ ಪ್ರವೇಶಿಸುವುದು.

ಆದರೆ ನಿಖರ ದಾಳಿ ನಡೆಸುತ್ತಿರುವ ಆತಿಥೇಯ ಬೌಲರ್‌ಗಳ ಎದುರು ಈಗ ಉಳಿದಿರುವ ಏಳು ಬ್ಯಾಟರ್‌ಗಳು ಎಷ್ಟು ದೀರ್ಘ ಸಮಯದವರೆಗೆ ಆಡುವರು ಎಂಬುದರ ಮೇಲೆ ಫಲಿತಾಂಶ ನಿರ್ಧಾರವಾಗಲಿದೆ.

ಶ್ರೇಯಸ್ ವೈಯಕ್ತಿಕ ಶ್ರೇಷ್ಠ: ಬುಧವಾರ ದಿನದಾಟದ ಕೊನೆಗೆ ಶತಕ ಗಳಿಸಿ ಕ್ರೀಸ್‌ನಲ್ಲಿದ್ದ ಶ್ರೇಯಸ್ ಮೂರನೇ ದಿನವೂ ಬ್ಯಾಟಿಂಗ್‌ನಲ್ಲಿ ಮಿಂಚಿದರು.

ಭೋಜನ ವಿರಾಮಕ್ಕೂ ಮುನ್ನವೇ ಡಿಕ್ಲೇರ್ ಮಾಡಿಕೊಂಡು ಉತ್ತರಾಖಂಡವನ್ನು ಕಟ್ಟಿಹಾಕುವ ಪ್ರಯತ್ನ ಮಾಡುವ ಅವಕಾಶ ಕರ್ನಾಟಕಕ್ಕೆ ಇತ್ತು. ಆದರೆ, ಆತಿಥೇಯರು 'ಬ್ಯಾಟಿಂಗ್ ಅಭ್ಯಾಸ'ಕ್ಕೆ ಮೊರೆಹೋದರು.

ಇದನ್ನು ಬಳಸಿಕೊಂಡ ಶ್ರೇಯಸ್ (ಅಜೇಯ 161; 288ಎ, 4X16, 6X1) ರಣಜಿ ಟ್ರೋಫಿಯಲ್ಲಿ ತಮ್ಮ ವೈಯಕ್ತಿಕ ಸ್ಕೋರ್ (ಹಳೆಯದು; ಔಟಾಗದೆ 150) ಉತ್ತಮಪಡಿಸಿಕೊಂಡರು. ಅಲ್ಲದೇ ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಮೂರು ಸಾವಿರ ರನ್‌ಗಳ ಗಡಿಯನ್ನೂ ದಾಟಿದರು.

ಆದರೆ ಬಿ.ಆರ್. ಶರತ್ (33) ಮತ್ತು ಕೆ.ಗೌತಮ್ (39) ಅವರು ಅರ್ಧಶತಕವನ್ನು ಪೂರೈಸಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗಳಿಸಿದ್ದ ವೆಂಕಟೇಶ್ ಬ್ಯಾಟಿಂಗ್‌ನಲ್ಲಿ 15 ರನ್ ಗಳಿಸಿದರು.

ಇತರ ಪಂದ್ಯಗಳು

ರಾಜ್‌ಕೋಟ್: ಮೊದಲ ಇನಿಂಗ್ಸ್: ಸೌರಾಷ್ಟ್ರ: 303, ಪಂಜಾಬ್: 124.3 ಓವರ್‌ಗಳಲ್ಲಿ 431, ಎರಡನೇ ಇನಿಂಗ್ಸ್:ಸೌರಾಷ್ಟ್ರ: 54 ಓವರ್‌ಗಳಲ್ಲಿ 4ಕ್ಕೆ138 (ಸ್ನೆಲ್ ಪಟೇಲ್ 33, ಅರ್ಪಿತ್ ವಸವದಾ ಬ್ಯಾಟಿಂಗ್ 44, ಚಿರಾಗ್ ಜಾನಿ ಬ್ಯಾಟಿಂಗ್ 35, ವಿನಯ್ ಚೌಧರಿ 61ಕ್ಕೆ3)

ಕೋಲ್ಕತ್ತ: ಜಾರ್ಖಂಡ್: 173, ಬಂಗಾಳ: 328. ಎರಡನೇ ಇನಿಂಗ್ಸ್:ಜಾರ್ಖಂಡ್: 48 ಓವರ್‌ಗಳಲ್ಲಿ 7ಕ್ಕೆ162 (ಆರ್ಯಮನ್ ಸೇನ್ 64, ಅನುಕೂಲ್ ರಾಯ್ 40, ವಿರಾಟ್ ಸಿಂಗ್ 29, ಆಕಾಶ್ ದೀಪ್ 25ಕ್ಕೆ2, ಆಕಾಶ್ ಘಾತಕ್ 33ಕ್ಕೆ2, ಶಹಬಾಜ್ ಅಹಮದ್ 38ಕ್ಕೆ2)

ಇಂದೋರ್: ಆಂಧ್ರ: 379. ಮಧ್ಯಪ್ರದೇಶ: 228. ಎರಡನೇ ಇನಿಂಗ್ಸ್: ಆಂಧ್ರ: 93(ಅಶ್ವಿನ್ ಹೆಬ್ಬಾರ್ 35, ಆವೇಶ್ ಖಾನ್ 24ಕ್ಕೆ4) ಮಧ್ಯಪ್ರದೇಶ: 16 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 58 (ಯಶ್ ದುಬೆ ಬ್ಯಾಟಿಂಗ್ 24, ಹಿಮಾಂಶು ಮಂತ್ರಿ ಬ್ಯಾಟಿಂಗ್ 31). – ಮಧ್ಯಪ್ರದೇಶ ಗೆಲುವಿಗೆ ಇನ್ನೂ 187 ರನ್‌ಗಳು ಬೇಕು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಉತ್ತರಾಖಂಡ 55.4 ಓವರ್‌ಗಳಲ್ಲಿ 116

ಕರ್ನಾಟಕ: 606 (162.5 ಓವರ್‌ಗಳಲ್ಲಿ)

ಶ್ರೇಯಸ್ ಔಟಾಗದೆ 161 (288ಎ, 4X16, 6X1), ಶರತ್ ಸಿ ತಾರೆ ಬಿ ಧಪೋಲಾ 33 (62ಎ, 4X5), ಗೌತಮ್ ಬಿ ಸ್ವಪ್ನಿಲ್ 39 (70ಎ, 4X4, 6X1), ವೆಂಕಟೇಶ್ ಸಿ ಜೀವನ್‌ಜ್ಯೋತ್ ಬಿ ಸ್ವಪ್ನಿಲ್ 15 (32ಎ, 4X2), ವಿದ್ವತ್ ಸಿ ತಾರೆ ಬಿ ಅಭಯ್ 1 (16ಎ), ವೈಶಾಖ ಸಿ ತಾರೆ ಬಿ ಅಭಯ್ 0 (7ಎ),

ಇತರೆ: 22 (ಬೈ 4, ಲೆಗ್‌ಬೈ 4, ವೈಡ್ 5, ನೋಬಾಲ್ 9)

ವಿಕೆಟ್ ಪತನ: 6-484 (ಶರತ್ ಬಿಆರ್; 120.6) 7-569 (ಕೆ. ಗೌತಮ್;144.6), 8-598 (ಎಂ. ವೆಂಕಟೇಶ್; 155.4), 9-605 (ವಿದ್ವತ್ ಕಾವೇರಪ್ಪ; 160.5), 10-606 (ವಿಜಯಕುಮಾರ್ ವೈಶಾಖ; 162.5)

ಬೌಲಿಂಗ್: ದೀಪಕ್ ಧಪೋಲಾ 28-6-91-1, ಅಭಯ್ ನೇಗಿ 33.5-8-109-4, ನಿಖಿಲ್ ಕೊಹ್ಲಿ 18-0-108-0, ಸ್ವಪ್ನಿಲ್ ಸಿಂಗ್ 29-2-118-2, ಮಯಂಕ್ ಮಿಶ್ರಾ 38-5-117-3, ದಿಕ್ಷಾಂಶು ನೇಗಿ 12-1-39-0, ಅವನೀಶ್ ಸುಧಾ 4-0-16-0

ಎರಡನೇ ಇನಿಂಗ್ಸ್: ಉತ್ತರಾಖಂಡ 3ಕ್ಕೆ106 (41 ಓವರ್‌ಗಳಲ್ಲಿ)

ಅವನೀಶ್ ಎಲ್‌ಬಿಡಬ್ಲ್ಯು ಬಿ ವಿದ್ವತ್ 4 (27ಎ, 4X1), ಜೀವನ್‌ಜ್ಯೋತ್ ಬಿ ವಿದ್ವತ್ 24 (57ಎ, 4X4), ಕುನಾಲ್ ಸಿ ಶರತ್ ಬಿ ವೆಂಕಟೇಶ್ 15 (39ಎ, 4X2), ದಿಕ್ಷಾಂಶು ಬ್ಯಾಟಿಂಗ್ 27 (65ಎ, 4X4), ಸ್ವಪ್ನಿಲ್ ಬ್ಯಾಟಿಂಗ್ 27 (58ಎ, 4X3, 6X1)

ಇತರೆ: 9 (ಬೈ 4, ಲೆಗ್‌ಬೈ 5)

ವಿಕೆಟ್ ಪತನ: 1-18 (ಅವನೀಶ್ ಸುಧಾ;8.6), 2-43 (ಜೀವನ್‌ಜ್ಯೋತ್ ಸಿಂಗ್; 16.6) 3-56 (ಕುನಾಲ್ ಚಾಂಡೇಲಾ; 24.2)

ಬೌಲಿಂಗ್: ವಿದ್ವತ್ ಕಾವೇರಪ್ಪ 10-5-22-2, ವಿಜಯಕುಮಾರ್ ವೈಶಾಖ 10-3-23-0, ಕೆ. ಗೌತಮ್ 11-3-30-0, ಎಂ. ವೆಂಕಟೇಶ್ 6-0-19-1, ಶ್ರೇಯಸ್ ಗೋಪಾಲ್ 4-1-3-0

ದಕ್ಷಿಣ ಆಫ್ರಿಕಾಕ್ಕೆ ಮಣಿದ ಭಾರತ

ಕ್ರಿಕೆಟ್ ತ್ರಿಕೋನ ಸರಣಿ: ಶ್ಲೋಯೆ ಟ್ರಯಾನ್ ಅರ್ಧಶತಕ

ಈಸ್ಟ್ ಲಂಡನ್ (ಪಿಟಿಐ): ಉತ್ತಮ ಬೌಲಿಂಗ್ ಮಾಡಿದ ನಾನ್‌ಕುಲುಲೆಕೊ ಮ್ಲಾಬಾ ಮತ್ತು ಅರ್ಧಶತಕ ಗಳಿಸಿದ ಶ್ಲೋಯೆ ಟ್ರಯಾನ್ ಅವರ ಆಟದ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಗುರುವಾರ ಇಲ್ಲಿ ನಡೆದ ಮಹಿಳಾ ಟಿ20 ತ್ರಿಕೋನ ಸರಣಿಯ ಪಂದ್ಯದಲ್ಲಿ ಗೆದ್ದಿತು. ಭಾರತ ತಂಡವು ನಿರಾಶೆ ಅನುಭವಿಸಿತು.

ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆದರೆ, ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 109 ರನ್‌ಗಳಿಸಲಷ್ಟೇ ಶಕ್ತವಾಯಿತು. ಮ್ಲಾಬಾ (16ಕ್ಕೆ2) ಆರಂಭಿಕ ಜೋಡಿ ಸ್ಮೃತಿ ಮಂದಾನ ಹಾಗೂ ಜೆಮಿಮಾ ರಾಡ್ರಿಗಸ್ ವಿಕೆಟ್‌ಗಳನ್ನು ಗಳಿಸಿದರು. ಸ್ಮೃತಿ ಖಾತೆಯನ್ನೇ ತೆರೆಯಲಿಲ್ಲ.

ಈ ಹಂತದಲ್ಲಿ ದಿಟ್ಟ ಆಟವಾಡಿದ ಹರ್ಲೀನ್ ಡಿಯೊಲ್ (46; 56ಎ, 4X4) ಮತ್ತು ನಾಯಕಿ ಹರ್ಮನ್‌ಪ್ರೀತ್ (21; 22ಎ, 4X2) ಮೂರನೇ ವಿಕೆಟ್ ಜೊತೆಯಾಟದಲ್ಲಿ 48 ರನ್‌ಗಳನ್ನು ಸೇರಿಸಿದರು.



ಹರ್ಲೀನ್ ಡಿಯೊಲ್

15ನೇ ಓವರ್‌ನಲ್ಲಿ ಆಟದ ವೇಗ ಹೆಚ್ಚಿಸಿದ ಕೌರ್ ವಿಕೆಟ್ ಕಬಳಿಸಿದ ಸನಿ ಲೂಸ್ ಜೊತೆಯಾಟ ಮುರಿದರು. ಹರ್ಲಿನ್ ಅವರು ದೀಪ್ತಿ ಶರ್ಮಾ (ಔಟಾಗದೆ 16) ಜೊತೆಗೆ 39 ರನ್ ಸೇರಿಸಿದರು. ತಂಡದ ಮೊತ್ತವನ್ನು ನೂರರ ಗಡಿ ದಾಟಿಸಿದರು.

ಆದರೆ ಈ ಮೊತ್ತವು ಗೆಲುವಿಗೆ ಸಾಕಾಗಲಿಲ್ಲ. ಭಾರತದ ಬೌಲರ್‌ಗಳ ಪ್ರಯತ್ನಕ್ಕೆ ಜಯದ ಫಲ ಸಿಗಲಿಲ್ಲ. ದೀಪ್ತಿ ಶರ್ಮಾ, ಸ್ನೇಹಾ ರಾಣಾ ಹಾಗೂ ರಾಜೇಶ್ವರಿ ಗಾಯಕವಾಡ ಅವರು ಉತ್ತಮ ಬೌಲಿಂಗ್ ಮಾಡಿದರು. ಅದರಿಂದಾಗಿ ದಕ್ಷಿಣ ಆಫ್ರಿಕಾ ತಂಡವು 47ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು.

ಆದರೆ ಈ ಹಂತದಲ್ಲಿ ಏಕಾಂಗಿ ಹೋರಾಟ ಮಾಡಿದ ಐದನೇ ಕ್ರಮಾಂಕದ ಶ್ಲೋಯೆ ಟ್ರಯಾನ್ (ಔಟಾಗದೆ 57; 32ಎ, 4X6, 6X2) ಬೀಸಾಟವಾಡಿದರು. ಇದರಿಂದಾಗಿ ತಂಡವು ಇನಿಂಗ್ಸ್‌ನಲ್ಲಿ ಇನ್ನೂ ಎರಡು ಓವರ್‌ಗಳು ಬಾಕಿಯಿರುವಾಗಲೇ ಗೆಲುವಿನ ದಡ ಸೇರಿತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 4ಕ್ಕೆ109 (ಹರ್ಲೀನ್ ಡಿಯೊಲ್ 46, ಹರ್ಮನ್‌ಪ್ರೀತ್ ಕೌರ್ 21, ದೀಪ್ತಿ ಶರ್ಮಾ ಔಟಾಗದೆ 16, ನಾನ್‌ಕುಲುಲೆಕೊ ಮ್ಲಾಬಾ 16ಕ್ಕೆ2) ದಕ್ಷಿಣ ಆಫ್ರಿಕಾ: 18 ಓವರ್‌ಗಳಲ್ಲಿ 5ಕ್ಕೆ113 (ಶ್ಲೋಯೆ ಟ್ರಯಾನ್ ಔಟಾಗದೆ 57,ನಡಿನ್ ಡಿ ಕೀರ್ಕ್ ಔಟಾಗದೆ 17, ಸ್ನೇಹ ರಾಣಾ 21ಕ್ಕೆ2) ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 5 ವಿಕೆಟ್ ಜಯ.

ಕೆಎಸ್‌ಎಚ್‌ಎ ಹಾಕಿ: ಶ್ಲೋಕ್ ಕ್ಲಬ್‌ಗೆ ಗೆಲುವು

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಶ್ಲೋಕ್ ಹಾಕಿ ಕ್ಲಬ್ ತಂಡದವರು ಕೆಎಸ್‌ಎಚ್‌ಎ ಸೂಪರ್ ಡಿವಿಷನ್ ಹಾಕಿ ಲೀಗ್ ಪಂದ್ಯದಲ್ಲಿ ಭರ್ಜರಿ ಗೆಲುವು ಪಡೆದರು.

ಗುರುವಾರ ನಡೆದ ಪಂದ್ಯದಲ್ಲಿ ಶ್ಲೋಕ್ ಕ್ಲಬ್ 9-0 ಗೋಲುಗಳಿಂದ ಜೆಎಫ್‌ಎಚ್‌ಎ ತಂಡವನ್ನು ಮಣಿಸಿತು. ಯಶ್ವಂತ್ ಮೂರು ಗೋಲುಗಳನ್ನು (19, 36 ಮತ್ತು 43ನೇ ನಿ.) ಗಳಿಸಿದರೆ, ಫಹದ್ (24, 36), ಸುಗನ್ (18, 29) ತಲಾ ಎರಡು ಗೋಲು ತಂದಿತ್ತರು. ಇತರ ಗೋಲುಗಳನ್ನು ರಕ್ಷಿತ್ (19) ಹಾಗೂ ರೋಹಿತ್ (45) ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ವಿ.ರಾಜಾ ಹಾಕಿ ಕ್ಲಬ್ ತಂಡ 2-0 ಗೋಲುಗಳಿಂದ 5 ಸಿ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಸೋಲಿಸಿತು. ವಿಜಯಿ ತಂಡದ ಪರ ಅಭಿಮನ್ಯು (29) ಮತ್ತು ದೀಪಕ್ ಕುಮಾರ್ (42) ಚೆಂಡನ್ನು ಗುರಿ ಸೇರಿಸಿದರು.

ಕ್ವಾರ್ಟರ್‌ಗೆ ಪ್ರಣೀತ್

ಬ್ಯಾಂಕಾಕ್ (ಪಿಟಿಐ): ಭಾರತದ ಬಿ.ಸಾಯಿ ಪ್ರಣೀತ್ ಅವರು ಇಲ್ಲಿ ನಡೆಯುತ್ತಿರುವ ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ 16ರ ಘಟ್ಟದ ಪಂದ್ಯದಲ್ಲಿ ಅವರು 24-22, 7-21, 22-20 ರಲ್ಲಿ ಕೊರಿಯಾದ ಜೊನ್ ಹ್ಯೊಕ್ ಜಿನ್ ವಿರುದ್ಧ ಗೆದ್ದರು. ಈ ಜಿದ್ದಾಜಿದ್ದಿನ ಹೋರಾಟ ಒಂದು ಗಂಟೆ 18 ನಿಮಿಷ ನಡೆಯಿತು.

ಕಣದಲ್ಲಿರುವ ಭಾರತದ ಇತರ ಎಲ್ಲ ಸ್ಪರ್ಧಿಗಳೂ 16ರ ಘಟ್ಟದಲ್ಲಿ ಎಡವಿದರು. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕಿರಣ್ ಜಾರ್ಜ್ 22-20, 15-21, 20-22 ರಲ್ಲಿ ಹಾಂಗ್‌ಕಾಂಗ್‌ನ ಯಿಯು ಲೀ ಚುಕ್ ಎದುರು ಸೋತರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಅಶ್ಮಿತಾ ಚಲಿಹಾ 21-19, 13-21, 27-29 ರಲ್ಲಿ ಡೆನ್ಮಾರ್ಕ್‌ನ ಲಿನ್ ಹೊಯೆಮಾರ್ಕ್ ಕೈಯಲ್ಲಿ ಪರಾಭವಗೊಂಡರು.



ಸಾಯಿ ಪ್ರಣೀತ್

ಪುರುಷರ ಡಬಲ್ಸ್‌ನಲ್ಲಿ ಭಾರತದ ಇಶಾನ್ ಭಟ್ನಾಗರ್- ಕೆ.ಸಾಯಿ ಪ್ರತೀಕ್ ಜೋಡಿ 14-21, 21-18, 26-24 ರಲ್ಲಿ ಪುನ್ನನಿಚ್ ತನದೊನ್‌-ಸೊತೊನ್ ವಚಿರವಿತ್ ಎದುರು ಸೋತಿತು.

ಅಮನ್‌ಗೆ ಕಂಚು

ಜಗ್ರೆಬ್, ಕ್ರೊವೇಷ್ಯಾ (ಪಿಟಿಐ): ಭಾರತದ ಅಮನ್ ಶೆರಾವತ್ ಅವರು ಕ್ರೊವೇಷ್ಯಾದಲ್ಲಿ ನಡೆಯುತ್ತಿರುವ ಜಗ್ರೆಬ್ ಓಪನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಜಯಿಸಿದ್ದಾರೆ.

ಕಂಚಿನ ಪದಕ ನಿರ್ಣಯಿಸಲು ನಡೆದ ಪೈಪೋಟಿಯಲ್ಲಿ 17 ವರ್ಷದ ಅಮನ್ ಅವರು 10-4 ರಲ್ಲಿ ಅಮೆರಿಕದ ರೋಡ್ಸ್ ರಿಚರ್ಡ್ಸ್ ಅವರನ್ನು ಮಣಿಸಿದರು.

ಅಜರ್‌ಬೈಜಾನ್‌ನ ಅಲಿಅಬ್ಬಾಸ್ ರಜಾಜೇದ್ ಚಿನ್ನ ಗೆದ್ದರು. ಫೈನಲ್‌ನಲ್ಲಿ ಅವರು 2-0 ರಲ್ಲಿ ಜಪಾನ್‌ನ ಯುಟೊ ನಿಶಿಯುಚಿ ವಿರುದ್ಧ ಜಯಿಸಿದರು. ಇನ್ನೊಂದು ಕಂಚಿನ ಪದಕ ಜಾರ್ಜಿಯದ ಬೆಕಾ ಬುಜಿಯಶ್ವಿಲಿ ಅವರ ಪಾಲಾಯಿತು.

ಕ್ವಾರ್ಟರ್ ಫೈನಲ್‌ನಲ್ಲಿ ಜಾರ್ಜಿಯದ ರಾಬರ್ಟ್ ದಿಂಗಶ್ವಿಲಿ ಅವರನ್ನು ಮಣಿಸಿದ್ದ ಅಮನ್, ಸೆಮಿ-ಫೈನಲ್‌ನಲ್ಲಿ ನಿಶಿಯುಚಿ ಕೈಯಲ್ಲಿ ಸೋತಿದ್ದರು.

ರೇಸ್: ಪ್ರತೀಕ್ ಚಾಂಪಿಯನ್

ಚೆನ್ನೈ: ಮುಂಬೈನ ಪ್ರತೀಕ್ ಸೋನವಣೆ ಅವರು 2022ರ ಪೋಲೊ ಕಪ್ ರಾಷ್ಟ್ರೀಯ ಕಾರು ರೇಸ್ ಚಾಂಪಿಯನ್‌ಷಿಪ್‌ನಲ್ಲಿ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ಚೆನ್ನೈನ ಮದ್ರಾಸ್ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ಗುರುವಾರ ನಡೆದ ಎಂಆರ್‌ಎಫ್ ಎಂಎಂಎಸ್‌ಸಿ ಎಫ್‌ಎಂಎಸ್‌ಸಿಐ ಚಾಂಪಿಯನ್‌ಷಿಪ್‌ನ ಅಂತಿಮ ರೇಸ್‌ಅನ್ನು ಅವರು ಗೆದ್ದುಕೊಂಡರು.

ಉತ್ತಮ ಚಾಲನಾ ಕೌಶಲ ಮೆರೆದ ಸೋನವಣೆ, ಈ ಋತುವಿನ ಎಂಟು ರೇಸ್‌ಗಳಲ್ಲಿ ಐದರಲ್ಲಿ 'ಪೋಡಿಯಂ ಫಿನಿಶ್' ಸಾಧನೆ ಮೂಲಕ ಒಟ್ಟು 122 ಪಾಯಿಂಟ್ಸ್ ಸಂಗ್ರಹಿಸಿದರು. ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಅವರಿಗೆ ದೊರೆತ ಚೊಚ್ಚಲ ಪ್ರಶಸ್ತಿ ಇದಾಗಿದೆ.

108 ಪಾಯಿಂಟ್ಸ್ ಕಲೆಹಾಕಿದ ಯುವ ರೇಸರ್ ರಾಜ್ ಬಖ್ರು ಎರಡನೇ ಸ್ಥಾನ ಪಡೆದರೆ, ಬಾಂಗ್ಲಾದೇಶದ ಅವಿಕ್ ಅನ್ವರ್ 3ನೇ ಸ್ಥಾನ ಗಳಿಸಿದರು. ರಾಜ್ ಅವರು ಕಿರಿಯ ವಿಭಾಗದಲ್ಲಿ ಚಾಂಪಿಯನ್ ಆದರು.

2022ರ ಪೋಲೋ ಕಪ್ ಚಾಂಪಿಯನ್‌ಶಿಪ್‌ನಲ್ಲಿ ಒಟ್ಟು 18 ಸ್ಪರ್ಧಿಗಳು ಪಾಲ್ಗೊಂಡಿದ್ದರು. ಇದರಲ್ಲಿ 10 ಮಂದಿ ವಿವಿಧ ರೇಸ್‌ಗಳಲ್ಲಿ 'ಪೋಡಿಯಂ ಫಿನಿಶ್' ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. 2023ರ ಋತುವಿನ ರೇಸ್ ಜುಲೈನಲ್ಲಿ ಆರಂಭವಾಗಲಿದೆ.

ಡೇವಿಸ್ ಕಪ್: ಇಂದಿನಿಂದ ಡೆನ್ಮಾರ್ಕ್ ವಿರುದ್ಧ ಹಣಾಹಣಿ

ಭಾರತಕ್ಕೆ ಹೋಲ್ಗರ್ ರೂನ್ ಸವಾಲು

ಹಿಲರ್ಡ್, ಡೆನ್ಮಾರ್ಕ್ (ಪಿಟಿಐ): ಡೇವಿಸ್ ಕಪ್ ಟೆನಿಸ್ ಟೂರ್ನಿಯ ವಿಶ್ವ ಗುಂಪಿನಲ್ಲಿ ಸ್ಥಾನ ಉಳಿಸಿಕೊಳ್ಳುವ ಪ್ರಯತ್ನದಲ್ಲಿರುವ ಭಾರತ ತಂಡಕ್ಕೆ ಡೆನ್ಮಾರ್ಕ್ ತಂಡದ ಸವಾಲು ಎದುರಾಗಿದೆ.

ಡೆನ್ಮಾರ್ಕ್ ವಿರುದ್ಧದ ಪ್ಲೇ ಆಫ್ ಪಂದ್ಯ ಶುಕ್ರವಾರ ಆರಂಭವಾಗಲಿದ್ದು, ಯುವ ಆಟಗಾರ ಹೋಲ್ಗರ್ ರೂನ್ ಅವರು ಭಾರತದ ಆಟಗಾರರಿಗೆ ಪ್ರಬಲ ಪೈಪೋಟಿ ಒಡ್ಡುವ ನಿರೀಕ್ಷೆಯಿದೆ. ಹಿಲರ್ಡ್‌ನ ಒಳಾಂಗಣ ಕ್ರೀಡಾಂಗಣದ ಹಾರ್ಡ್ ಕೋರ್ಟ್‌ನಲ್ಲಿ ಪಂದ್ಯಗಳು ನಡೆಯಲಿವೆ.

ಭಾರತ ತಂಡದಲ್ಲಿರುವ ಆಟಗಾರರಲ್ಲಿ ಯಾರೂ ವಿಶ್ವ ರ‍್ಯಾಂಕಿಂಗ್‌ನಲ್ಲಿ 300ರ ಒಳಗಿನ ಸ್ಥಾನದಲ್ಲಿಲ್ಲ. ಆದರೆ ಡೆನ್ಮಾರ್ಕ್ ತಂಡದ ರೂನ್ ಅವರು ಎಟಿಪಿ ರ‍್ಯಾಂಕಿಂಗ್ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದ್ದಾರೆ.



ಯೂಕಿ ಭಾಂಬ್ರಿ

ನವದೆಹಲಿಯಲ್ಲಿ 2022ರ ಮಾರ್ಚ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಭಾರತ 4-0 ರಲ್ಲಿ ಡೆನ್ಮಾರ್ಕ್ ತಂಡವನ್ನು ಮಣಿಸಿತ್ತು. ಆದರೆ 19 ವರ್ಷದ ರೂನ್ ಅವರ ಉಪಸ್ಥಿತಿ, ಈ ಬಾರಿ ಭಾರತದ ಗೆಲುವಿನ ಹಾದಿಯನ್ನು ಕಠಿಣಗೊಳಿಸಿದೆ.

ಈಚೆಗೆ ನಡೆದ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಅವರು ನಾಲ್ಕನೇ ಸುತ್ತು ಪ್ರವೇಶಿಸಿದ್ದರು.

ಡೆನ್ಮಾರ್ಕ್ ತಂಡದ ಇತರ ಆಟಗಾರರನ್ನು ಗುರಿಯಾಗಿಸಿ ಗೆಲುವು ಪಡೆಯುವ ಯೋಜನೆಯನ್ನು ಭಾರತ ಹಾಕಿಕೊಂಡಿದೆ. ಆದ್ದರಿಂದ ಯೂಕಿ ಭಾಂಬ್ರಿ ಅವರನ್ನು ಸಿಂಗಲ್ಸ್ ಪಂದ್ಯದಲ್ಲಿ ಆಡಿಸಲು ತೀರ್ಮಾನಿಸಿದೆ. ಡೆನ್ಮಾರ್ಕ್ ತಂಡದಲ್ಲಿರುವ ಆಗಸ್ಟ್ ಹೋಮ್‌ಗ್ರೆನ್ ಮತ್ತು ಎಲ್ಮೆರ್ ಮೊಲೆರ್ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ 484 ಹಾಗೂ 718ನೇ ಸ್ಥಾನದಲ್ಲಿದ್ದಾರೆ.

ಶುಕ್ರವಾರ ನಡೆಯಲಿರುವ ಸಿಂಗಲ್ಸ್ ಪಂದ್ಯಗಳಲ್ಲಿ ಯೂಕಿ- ರೂನ್ ಮತ್ತು ಸುಮಿತ್- ಹೋಮ್‌ಗ್ರೆನ್ ಎದುರಾಗಲಿದ್ದಾರೆ. ಶನಿವಾರ ನಡೆಯುವ ಡಬಲ್ಸ್‌ನಲ್ಲಿ ಅನುಭವಿ ರೋಹನ್ ಬೋಪಣ್ಣ ಮತ್ತು ಯೂಕಿ ಭಾಂಬ್ರಿ ಜತೆಯಾಗಿ ಆಡಲಿದ್ದಾರೆ.

ಫೆ.26 ರಂದು ನವದೆಹಲಿ ಮ್ಯಾರಥಾನ್

ನವದೆಹಲಿ (ಪಿಟಿಐ): ಭಾರತ ಅಥ್ಲೆಟಿಕ್ ಸಂಸ್ಥೆ (ಎಎಫ್‌ಐ) ಮತ್ತು ಫಿಟ್ ಇಂಡಿಯಾ ರೇಸ್ ಸಹಯೋಗದಲ್ಲಿ ಫೆ.26ರಂದು ನಡೆಯಲಿರುವ ನವದೆಹಲಿ ಮ್ಯಾರಥಾನ್‌ನಲ್ಲಿ ಭಾರತದ ಪ್ರಮುಖ ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ.

ಹಾಂಗ್‌ಜೌ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆಯುವ ಗುರಿಯೊಂದಿಗೆ ಪುರುಷರ, ಮಹಿಳೆಯರ ವಿಭಾಗಗಳಲ್ಲಿ ಸ್ಪರ್ಧಿಗಳು ಕಣಕ್ಕಿಳಿಯಲಿದ್ದಾರೆ.

'ನವದೆಹಲಿ ಮ್ಯಾರಥಾನ್‌ನಲ್ಲಿ ಅಥ್ಲೀಟ್‌ಗಳು ನೀಡುವ ಪ್ರದರ್ಶನವನ್ನು, ಏಷ್ಯನ್ ಕ್ರೀಡಾಕೂಟದ ಆಯ್ಕೆಗೆ ಪರಿಗಣಿಸಲಾಗುವುದು. ಪುರುಷರ ವಿಭಾಗದಲ್ಲಿ 2 ಗಂಟೆ 15 ನಿ. ಹಾಗೂ ಮಹಿಳೆಯರ ವಿಭಾಗದಲ್ಲಿ 2 ಗಂಟೆ 37 ನಿಮಿಷವನ್ನು ಅರ್ಹತಾ ಸಮಯವಾಗಿ ನಿಗದಿಪಡಿಸಲಾಗಿದೆ' ಎಂದು ಎಎಫ್‌ಐ ತಿಳಿಸಿದೆ.

ಎಲೈಟ್ ವಿಭಾಗದಲ್ಲಿ ಎಲ್ಲರಿಗೂ ಪಾಲ್ಗೊಳ್ಳಲು ಅವಕಾಶವಿಲ್ಲ. ಪುರುಷರ ವಿಭಾಗದಲ್ಲಿ 2 ಗಂಟೆ 40 ನಿ.ಹಾಗೂ ಮಹಿಳೆಯರ ವಿಭಾಗದಲ್ಲಿ 3 ಗಂಟೆ 10 ನಿ. ಸಮಯ ಕಂಡುಕೊಂಡಿರುವ ಅಥ್ಲೀಟ್‌ಗಳು ಪಾಲ್ಗೊಳ್ಳಬಹುದು.

'ಮ್ಯಾರಥಾನ್, ಹಾಫ್ ಮ್ಯಾರಥಾನ್ 10 ಮತ್ತು 5 ಕಿ.ಮೀ. ಓಟ- ಹೀಗೆ ನಾಲ್ಕು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಈ ಬಾರಿಯ 16 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳಲಿದ್ದಾರೆ' ಎಂದು ಸಂಘಟಕರಾದ ಎನ್‌ಇಬಿ ಸ್ಪೋರ್ಟ್ಸ್ ತಿಳಿಸಿದೆ.



ಅಭ್ಯಾಸ ಆರಂಭ

ಮುಂದಿನ ವಾರ ಆರಂಭವಾಗಲಿರುವ ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿಯಲ್ಲಿ ಆಡಲಿರುವ ಆಸ್ಟ್ರೇಲಿಯಾ ತಂಡದ ಆಟಗಾರರು ಬೆಂಗಳೂರು ಹೊರವಲಯದ ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಗುರುವಾರ ಅಭ್ಯಾಸ ಆರಂಭಿಸಿದರು –ಟ್ವಿಟರ್ ಚಿತ್ರ

ಖೇಲೊ ಇಂಡಿಯಾ: ಸೈಕ್ಲಿಂಗ್‌ನಲ್ಲಿ ಎರಡು ಪದಕ

ಬೆಂಗಳೂರು: ಕರ್ನಾಟಕದ ಸೈಕ್ಲಿಸ್ಟ್‌ಗಳು ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಗುರುವಾರ ತಲಾ ಒಂದು ಬೆಳ್ಳಿ ಮತ್ತು ಕಂಚು ಗೆದ್ದುಕೊಂಡರು.

1000 ಮೀ. ಟೈಮ್ ಟ್ರಯಲ್‌ನಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದದ ಸಂಪತ್ ಪಾಸ್ಮೇಲ್ ಅವರು 1 ನಿ. 8.818 ಸೆ.ಗಳಲ್ಲಿ ಗಳಲ್ಲಿ ಗುರಿ ತಲುಪಿ ಬೆಳ್ಳಿ ಜಯಿಸಿದರು.

ಸಂಪತ್ ಪಾಸ್ಮೇಲ್, ಪ್ರತಾಪ ಪಡಚಿ ಮತ್ತು ಮಲ್ಲಿಕಾರ್ಜುನ ಯಾದವಾಡ ಅವರನ್ನೊಳಗೊಂಡ ಕರ್ನಾಟಕ ತಂಡ 57.969 ಸೆ.ಗಳಲ್ಲಿ ಗುರಿ ತಲುಪಿ ಮೂರನೇ ಸ್ಥಾನ ಪಡೆದುಕೊಂಡಿತು.

ಹಾಕಿ: ಭಾರತ ಪುರುಷರ ತಂಡದ ಕೋಚ್ ಹುದ್ದೆ

ಸ್ಪರ್ಧೆಯಲ್ಲಿ ಕಾಲ್ಡಸ್, ಸೀಗ್‌ಫ್ರೀಡ್

ನವದೆಹಲಿ (ಪಿಟಿಐ): ಅರ್ಜೆಂಟೀನಾದ ಮ್ಯಾಕ್ಸ್ ಕಾಲ್ಡಸ್ ಮತ್ತು ನೆದರ್ಲೆಂಡ್ಸ್‌ನ ಸೀಗ್‌ಫ್ರೀಡ್ ಏಕ್‌ಮನ್ ಅವರು ಭಾರತ ಪುರುಷರ ಹಾಕಿ ತಂಡದ ಮುಖ್ಯ ಕೋಚ್ ಹುದ್ದೆಗೆ ಸ್ಪರ್ಧೆಯಲ್ಲಿದ್ದಾರೆ.

ಗ್ರಹಾಂ ರೀಡ್ ಅವರು ರಾಜೀನಾಮೆ ನೀಡಿರುವುದರಿಂದ ಹಾಕಿ ತಂಡದ ಕೋಚ್ ಹುದ್ದೆ ತೆರವಾಗಿದೆ. ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಕಳಪೆ ಪ್ರದರ್ಶನದ ಹಿನ್ನೆಲೆಯಲ್ಲಿ ರೀಡ್ ಹುದ್ದೆ ತೊರೆದಿದ್ದರು.

'ವಿದೇಶದ 2-3 ಕೋಚ್‌ಗಳೊಂದಿಗೆ ಮಾತುಕತೆ ನಡೆದಿದ್ದು, ಭಾರತದ ಹಾಕಿ ಕ್ರೀಡೆಯನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯುವ ಸಾಮರ್ಥ್ಯ ಹೊಂದಿರುವ ಒಬ್ಬರನ್ನು ಕೋಚ್ ಹುದ್ದೆಗೆ ಆಯ್ಕೆ ಮಾಡಲಾಗುವುದು' ಎಂದು ಹಾಕಿ ಇಂಡಿಯಾದ ಅಧಿಕಾರಿಯೊಬ್ಬರು ತಿಳಿಸಿದರು.

'ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕ ಸಾಧನೆ ಬಳಿಕ ಭಾರತದ ಹಾಕಿ, ಏರುಗತಿಯಲ್ಲಿ ಸಾಗಲಿದೆ ಎಂದು ಭಾವಿಸಿದ್ದೆವು. ಆದರೆ ಹಾಗಾಗಲಿಲ್ಲ. ಒಲಿಂಪಿಕ್ಸ್ ಪದಕ ಗೆದ್ದುಕೊಡುವಲ್ಲಿ ರೀಡ್ ಪ್ರಮುಖ ಪಾತ್ರ ವಹಿಸಿದ್ದರು. ಆ ಬಳಿಕ ತಂಡದ ಪ್ರದರ್ಶನ ಕುಸಿತದ ಹಾದಿ ಹಿಡಿಯಿತು' ಎಂದು ಹೇಳಿದರು.

'ಏಷ್ಯನ್ ಕ್ರೀಡಾಕೂಟ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ನಮ್ಮ ಮುಂದಿರುವ ಎರಡು ಪ್ರಮುಖ ಕೂಟಗಳಾಗಿವೆ. ಆ ಕೂಟಗಳಿಗೆ ಬಲಿಷ್ಠ ತಂಡವನ್ನು ಸಿದ್ಧಗೊಳಿಸುವ ಸವಾಲು, ಕೋಚ್ ಆಗಿ ಬರುವವರ ಮುಂದಿದೆ' ಎಂದರು.

ಭಾರತದ ಯಾರಾದರೂ ಕೋಚ್ ಹುದ್ದೆ ಅಲಂಕರಿಸುವರೇ ಎಂಬ ಪ್ರಶ್ನೆಗೆ, 'ಭಾರತದಲ್ಲಿರುವ ಉತ್ತಮ ಕೋಚ್ ಒಬ್ಬರ ಹೆಸರನ್ನು ಸೂಚಿಸಿದರೆ, ಅವರನ್ನೂ ಪರಿಗಣಿಸುತ್ತೇವೆ' ಎಂದು ಪ್ರತಿಕ್ರಿಯಿಸಿದರು.